ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಅಧ್ಯಕ್ಷರು ಅಪ್ಪಣೆ ಮಾಡುವುದಾದರೆ ನಮ್ಮದು ಏನೂ ಅಡ್ಡಿ ಇಲ್ಲ.

MYSORE SOCIETIES REGISTRATION (AMENDMENT) BILL, 1972—INTRODUCTION.

SRI N. HUTCHMASTHI GOWDA (Minister for Revenue).—I beg to introduce the Mysore Societies Registration (Amendment) Bill 1972. Bills are reproduced as Annexure to the volume.

MADAM SPEAKER.—The Bill is introduced.

Mysore Co-operative Societies (Amendment) Bill 1972–Introduction.

SRI SHANKARA ALVA (Minister for Co-operation).—I beg to introduce the Mysore Co-operative Societies (Amendment) Bill 1972 which has been published in the *Mysore Gazette* as required under Rule 64 of the Rules of Procedure and Conduct of Business in the Legislative Assembly. Bills are reproduced as Anexure to the volume.

MADAM SPEAKER.—The Bill is Introduced

DISCUSSION ON THE REPORT ON THE SCARCITY CONDITIONS PREVAILING IN SOME PARTS OF THE STATE [DEBATE CONDT.

† ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ) ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಈ ಸದನದ ಮಾನ್ಯ ಸದಸ್ಯರಾದ ಸಿ. ಎಂ. ಆರ್ಮುಗಂ ಅವರು ಸಭೆಯ ಮುಂದೆ ಇಟ್ಟಿರತಕ್ಕ ಕೆಲವು ಜಿಲ್ಲೆಗಳ ಬರಗಾಲ ಪರಿಸ್ಥಿತಿಯ ವಿವರಗಳ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಮೊದಲು ನಾನು ಕೆಲವು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಪ್ರಾಯಶಃ ರಾಜ್ಯದಲ್ಲಿ ಬರಗಾಲವಿದೆಯೇ ಶಿವಾಯಿ ನಮ್ಮ ಅಧ್ಯಕ್ಷರ ಕಾಲಮಿತಿಗೆ ಬರಗಾಲವಿಲ್ಲ ಎಂದು ಅಭಿಪ್ರಾಯ ಪಟ್ಟು ಕೆಲವು ವಿಚಾರಗಳನ್ನು ಹೇಳುತ್ತೇನೆ.

SRI K. H. PATIL.—I have a submission to make to the Chair. I the Call Attention motions can be taken up now, they can be finished in a few minutes and we will be able to attend to other business also

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ. ಅವರ ಭಾಷಣವಾದ ನಂತರ ತೆಗೆದುಕೊಳ್ಳೋಣ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ರಾಜ್ಯದಲ್ಲಿ ಬರಗಾಲ ಬರಬಾರದಾಗಿತ್ತು. ದುರದೃಷ್ಟವಶಾತ್ ಬರಗಾಲ ಬಂದು ಸರ್ಕಾರದ ವ್ಯವಹಾರ ಹೆಚ್ಚಾಗಿ ಬರಗಾಲ ಪ್ರದೇಶದ ಬಗ್ಗೆ ಆಲೋಚನೆ ಮಾಡತಕ್ಕಂಥ ಪರಿಸ್ಥಿತಿ ಈ ರಾಜ್ಯದಲ್ಲಿ ಉದ್ಭವಿಸಿತು. ಈ ಸಭೆಯ ಕೆಲವು ಮಾನ್ಯ ಸದಸ್ಯರುಗಳು ಮಾತನಾಡುತ್ತ ವಿರೋಧಪಕ್ಷದವರು ಬರಗಾಲದ ಬಗ್ಗೆ ಏನು ಮಾಡಿದರು ; ಬಂದಿರತಕ್ಕ ರಿಪೋರ್ಟಿನಲ್ಲಿ ಸಹ ಏಕಮುಖವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ; ರಾಜ್ಯ ಸರ್ಕಾರ ಮಾಡಿರತಕ್ಕ ವ್ಯವಹಾರಗಳ ಬಗ್ಗೆ ಹೆಚ್ಚಾಗಿ ಪ್ರಸ್ತಾಪ ಮಾಡಿಲ್ಲ ಎಂದು ಹೇಳಿದ್ದನ್ನು ನಾನು ಕೇಳಿದ್ದೇನೆ.

ಸನ್ಮಾನ್ಯ ಅಧ್ಯಕ್ಷಣಿಯವರೇ, ತಮ್ಮ ಮುಖಾಂತರ ನಾನು ಗೌರವಯುತವಾಗಿ ಹೇಳುವುದೇನೆಂದರೆ, ವಿರೋಧಪಕ್ಷದ ಕೆಲವು ಮಂದಿ ಸ್ನೇಹಿತರು ಇದ್ದುಕೊಂಡೂ ಸಹ ರಾಜ್ಯ ಸರ್ಕಾರ ಮತ್ತು ರಾಜ್ಯ ಸರ್ಕಾರದ ಕೆಲವು ಮಂತ್ರಿಗಳ ನಡವಳಿಕೆ ಬಗ್ಗೆ ಹೆಚ್ಚಾಗಿ ವ್ಯವಹಾರ ಮಾಡಿ ಅದನ್ನು ತಡೆಗಟ್ಟಲು ಹೆಚ್ಚು ಕಾಲ ನಮಗೆ ವ್ಯಯವಾಗಿದೆ. ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ, ಐದು ಜನ ಹಿರಿಯ ಸಚಿವರ ಬಗ್ಗೆ ನಮಗೆ ಅಪಾರವಾದ, ಭಕ್ತಿ ಗೌರವವಿದೆ. ಅವರು ಬದುಕಿರುವಾಗ, ಜೀವಂತವಾಗಿರುವಾಗ ಈ ರಾಜ್ಯದಲ್ಲಿ ಅವ್ಯವಹಾರಗಳಿಗೆ ಅವಕಾಶ ಕೊಡದೆ ಈ ಮಾನ್ಯ ಸಭೆಯ ಸದಸ್ಯರು ಹೆಚ್ಚು ಕಾಲವನ್ನು ರಾಜ್ಯದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸಲಹೆ ಕೊಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು ಎಂದು ಪ್ರಾರ್ಥಿಸಿ ನನ್ನ ಮಾತನ್ನು ಮುಂದುವರಿಸುತ್ತೇನೆ.

ಈ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇದೆ ಎಂದು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಾಗ ರಾಜ್ಯದ ಹಲವಾರು ಪ್ರದೇಶಗಳಲ್ಲಿ ಕೆಲವು ಮಾನ್ಯ ಮಂತ್ರಿಗಳು ಪ್ರವಾಸ ಮಾಡಿದರು. ಮಾನ್ಯ ಕಂದಾಯ ಸಚಿವರು ಆಗಸ್ಟ್ ಒಂದನೇ ತಾರೀಖು ಮಾತನಾಡುವಾಗ ಈ ರಾಜ್ಯದಲ್ಲಿ ಸುಮಾರು ೧೯ ಜಿಲ್ಲೆಗಳಲ್ಲಿ ಅಭಾವ ಪರಿಸ್ಥಿತಿ ಇದೆ ಅದರ ಬಗ್ಗೆ ನನಗೆ ಅನುಕಂಪವಿದೆ, ಕೆಲವು ಕಾಮಗಾರಿಗಳನ್ನು ತೆಗೆದು ಕೊಳ್ಳುತ್ತೇವೆಂದು ಹೇಳಿದರು. ಅದಾದ ನಂತರ ಆಗಸ್ಟ್ ಐದನೇ ತಾರೀಖು ಮಾನ್ಯ ಮುಖ್ಯ ಮಂತ್ರಿಗಳು ಬಹಳ ಕಟ್ಟುನಿಟ್ಟಾದ ಗಂಡುತನದ ಕೆಲವು ಮಾತುಗಳನ್ನು ಹೇಳಿದರು. ಈ ಸಭೆಯ ಮಾನ್ಯ ಸದಸ್ಯರಾರೂ ಬೆಂಗಳೂರಿನಲ್ಲಿ ಉಳಿಯಕೂಡದು, ಅವರವರ ಕ್ಷೇತ್ರಗಳಿಗೆ ಹೊರಟು ಹೋಗಿ ಅಲ್ಲಿ ಏನೇನು ಕೆಲಸವಾಗ ಬೇಕಾಗಿದೆ ಅದಕ್ಕೆ ಹಿರಿಯ ಅಧಿಕಾರಿಗಳ ಸಹಾಯದಿಂದ ಎಲ್ಲ ಕೆಲಸವನ್ನೂ ತೆಗೆದುಕೊಳ್ಳಿ, ಯಾವ ಅಧಿಕಾರಿಯೇ ಆಗಲಿ ಸಹಕರಿಸದೆ ಹೋದರೆ ತಿಳಿಸಬೇಕು, ಅಂಥವರ ಮೇಲೆ ಉಗ್ರ ಕ್ರಮ ತೆಗೆದು ಕೊಳ್ಳುತ್ತೇನೆ. ಪ್ರತಿ ಗ್ರಾಮದಲ್ಲಿಯೂ ಒಂದೊಂದು ಕಾಮಗಾರಿಯನ್ನು ತೆಗೆದುಕೊಳ್ಳಬೇಕೆಂದು ನಮ್ಮ ಬೆನ್ನು ತಟ್ಟಿ ನಮ್ಮ ಊರುಗಳಿಗೆ ಕಳುಹಿಸಿದರು. ಅವರ ಆಶ್ವಾಸನೆಯನ್ನು ತಲೆ ಮೇಲೆ ಹೊತ್ತು ಸದಸ್ಯರು ಅವರವರ ಕ್ಷೇತ್ರಗಳಿಗೆ ಹೋಗಿ ಸ್ಥಳೀಯವಾಗಿ ಬರಗಾಲ ಸಮಿತಿಗಳನ್ನು ರಚಿಸಿ ಕೆಲವು ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಣಯಮಾಡಿ ಕೆಲವು ಕಾಮಗಾರಿಗಳನ್ನು ೧೯ ಜಿಲ್ಲೆಗಳಲ್ಲಿಯೂ ಶುರು ಮಾಡಿದರು.

ಓಳ ಫ್ಯಾಮಿನ್‌ನಲ್ಲಿ ಒಂದು ಬಾಬಿಗೆ ೧೧, ೫೮, ೫೫ ೫೨೫-೦೦ ರೂಪಾಯಿಗಳನ್ನು ಎಲ್ಲಾ ಜಿಲ್ಲೆಗಳಿಗೂ ಹಂಚಿದ್ದೇವೆ ಎಂದು ಹೇಳಿದ್ದೀರಿ ಮತ್ತು ಇನ್ನೊಂದು ಬಾಬಿನಲ್ಲಿ ಬೆಳಗಾಂ, ಬಿಜಾಪುರ, ಗುಲ್ಬರ್ಗ, ರಾಯಚೂರು ಬೀದರ್ ಈ ೫ ಜಿಲ್ಲೆಗಳಿಗೆ ೩,೯೬,೪೭,೭೦೦-೦೦ ರೂಪಾಯಿಗಳನ್ನು ಹಂಚಿದ್ದೀರಿ, ಉಳಿದ ೧೧ ಜಿಲ್ಲೆಗಳಿಗೆ ೩,೩೮,೦೭,೮೨೫-೦೦ ರೂಪಾಯಿಗಳನ್ನು ಹಂಚಲಾಗಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ೩೦ನೇ ತಾರೀಖು ಒಂದು ಪತ್ರ ಬರೆದೆ ಅದಕ್ಕೆ ಉತ್ತರ ಬಂದಿದ್ದರೆ ಈ ಬರಗಾಲ ಪರಿಸ್ಥಿತಿ ಬಗ್ಗೆ ಈ ಸಭೆಯಲ್ಲಿ ಹೇಳುವುದಕ್ಕೆ ತುಂಬಾ ಸಹಾಯಕವಾಗುತ್ತಿತ್ತು. ಆದರೂ ಕೂಡ ಈ ವಿಷಯದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಈ ೫ ಜಿಲ್ಲೆಗಳಿಗೆ ನೀವು ಕೊಟ್ಟಿರ ತಕ್ಕಂಥ ದುಡ್ಡುಗಳಲ್ಲಿ ಆ ಜಿಲ್ಲೆಗಳಿಗೆ ಲೋನ್‌ಗೆ ಎಷ್ಟು ಖರ್ಚಾಗಿದೆ ? ರೈತರ ಪಂಪ್‌ಸೆಟ್ಟುಗಳಿಗೆ ಖರ್ಚಾ ಗಿರುವುದು ಎಷ್ಟು ? ರೈತರಿಗೆ ಕೊಟ್ಟಿರತಕ್ಕಂಥ ಸಾಲ ಎಷ್ಟು ? ಮತ್ತು ಅವರಿಗೆ ಮುಫತ್ತಾಗಿ ಕೊಟ್ಟಿರುವ ಹಣ ಎಷ್ಟು ? ದನಗಳ ಮೇವಿನ ವಿತರಣೆಗೆ ಕೊಟ್ಟಿರುವ ದುಡ್ಡು ಎಷ್ಟು ? ಈಗ ಆಗಿರ ತಕ್ಕಂಥ ಖರ್ಚು ಎಷ್ಟು ? ಮತ್ತು ಈಗ ವಸ್ತುತಃ ದೊಡ್ಡ ನೀರಾವರಿಗೆ ಕೊಟ್ಟಿರತಕ್ಕಂಥ ಹಣ ಎಷ್ಟು ? ಇತ್ತೀಚೆಗೆ ಯಾವ ಯಾವ ಬಾಬಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ ಮತ್ತು ಸಾಯಿಲ್ ಕನ್‌ಸರ್ವೇಷನ್ ಆ ೫ ಜಿಲ್ಲೆಗಳಿಗೂ ಖರ್ಚಾಗಿರುವ ಹಣವೆಷ್ಟು ಮತ್ತು ಅಫಾರ್‌ಸ್ಟೇಷನ್‌ಗೆ ಖರ್ಚಾಗಿರುವುದು ಎಷ್ಟು ಮತ್ತು ಇನ್ನು ಇತರ ಅಭಿವೃದ್ಧಿ ಕಾರ್ಯಗಳನ್ನು ಅಳವಡಿಸಿಕೊಂಡು ಎಷ್ಟು ದುಡ್ಡು ಖರ್ಚು ಮಾಡಿ ದ್ದೀರಿ ? ಈ ವಿಚಾರವಾಗಿ ಪತ್ರ ಬರೆದಿದ್ದೆ. ಅದಕ್ಕೆ ಉತ್ತರ ಬಂದು ನನ್ನ ಕೈಯಲ್ಲಿ ಇದ್ದಿದ್ದರೆ ಆ ಬಗ್ಗೆ ಕೆಲವು ವಿಷಯಗಳನ್ನು ಮಾನ್ಯ ರೆವಿನ್ಯೂ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಅನುಕೂಲವಾಗುತ್ತಿತ್ತು ಎಂದು ತಮ್ಮ ಮುಖಾಂತರ ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇವೆಲ್ಲವನ್ನೂ ಪರಿಶೀಲನೆ ಮಾಡುವುದಾದರೆ ತಾವು ಏನು ಈ ಕೆಲಸಗಳಿಗೆಲ್ಲಾ ವೆಚ್ಚ ಮಾಡಿದ್ದೀರೋ ಅದು ನನ್ನ ಅಂದಾಜು ಪ್ರಕಾರ ಆ ಜಿಲ್ಲೆಗಳಿಗೆ ೪೦ ಕೋಟಿ ರೂಪಾಯಿ ಮೇಲಾಗಿ ಸಹಾಯವಾಗಿದೆ, ಇನ್ನೂ ಆಗಬೇಕಾದ್ದು ಬೇಕಾದಷ್ಟು ಕೆಲಸ ಇದೆ. ಇಷ್ಟು ಖರ್ಚಾದಾಗ್ಯೂ ಕೂಡ ಆ ಭಾಗದಲ್ಲಿ ತೃಪ್ತಿಕರವಾದ ಕೆಲಸ ನಡೆದಿಲ್ಲ ಎನ್ನುವ ಕೂಗು ಇರುವುದು ನಿಜ ಏತಕ್ಕೆಂದರೆ ತಾವು ಕೊಟ್ಟಿರುವಂಥ ಹಣ ಅಲ್ಲಿ ಪೋಲು ಆಗುತ್ತಾ ಇದೆ, ಈ ಹಣ ಮಧ್ಯವರ್ತಿಗಳ ಕೈಗೆ ಸೇರುತ್ತಾ ಇದೆ ಎಂದು ತಮ್ಮ ಮುಖಾಂತರ ರೆವಿನ್ಯೂ ಸಚಿವರ ಗಮನಕ್ಕೆ ತರುತ್ತೇನೆ. ತಾವು ಬೇಕಾದಷ್ಟು ಕೋಟಿ ರೂಪಾಯಿಗಳನ್ನು ಆ ಭಾಗಗಳಿಗೆ ಉದಾರವಾಗಿ ಕೊಟ್ಟಿ ದ್ದೀರಿ. ಅದನ್ನು ಯಾರಿಗೆ ನೇರವಾಗಿ ಕೊಡಬೇಕೋ ಅಂಥಾವರಿಗೆ ಕೊಡಬೇಕು. ಅಂದರೆ ಯಾರು

(ಶ್ರೀ ಬಿ. ಪುಟ್ಟಸ್ವಾಮಯ್ಯ)

ಕೂಲಿ ಮಾಡುತ್ತಾರೋ ಅವರಿಗೆ, ಯಾರು ನಿಜವಾಗಿ ಬರಗಾಲಕ್ಕೆ ತುತ್ತಾಗಿದ್ದಾರೋ ಅಂಥಾವರಿಗೆ ಈ ಹಣ ಸಿಗಬೇಕು. ಈಗ ಇದರಿಂದ ಮಧ್ಯವರ್ತಿಗಾರರಿಗೆ ಬಹುಪಾಲು ಹಣ ವ್ಯಯವಾಗಿದೆ ಎಂದು ನನ್ನ ಗಮನಕ್ಕೆ ಬಂದಿರುವುದರಿಂದ ಇದನ್ನು ಪರಿಶೀಲಿಸಬೇಕೆಂದು ಮಾನ್ಯ ರೆವಿನ್ಯೂ ಸಚಿವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಧ್ಯಕ್ಷರೇ ಹಿಂದೆ ಈ ರೀತಿ ಬರಗಾಲ ಬಂದಾಗ ನೇರವಾಗಿಯೇ ಕೂಲಿಗಾರರಿಗೆ ಹಣವನ್ನು ಕೊಡತಕ್ಕಂಥ ವ್ಯವಸ್ಥೆ ಇತ್ತು. ಈಗ ಪ್ರತಿಯೊಂದು ಕಾಮಗಾರಿಗೂ ಕಂಟ್ರಾಕ್ಟ್ ಮುಖಾಂತರವೇ ವಿಲೇವಾರಿ ಆಗಬೇಕು ಎನ್ನುವ ಧೋರಣೆ ಸಮಂಜಸವಾದುದಲ್ಲ, ಬಡವರು ಬಡತನ ದಿಂದ ಪರಿತಪಿಸುತ್ತಾ ಇರುವಾಗ ಕೆಲವರನ್ನು ಶ್ರೀಮಂತರನ್ನಾಗಿ ಮಾಡುವುದು ಸರಿಯಲ್ಲ. ಏತಕ್ಕೆಂದರೆ ಹಿಂದೆ ಯುದ್ಧ ಬಂದಾಗ ಏನೂ ಇಲ್ಲದೇ ಇದ್ದವನೂ ಕೂಡ ಶ್ರೀಮಂತನಾಗುತ್ತಿದ್ದ. ಅದನ್ನು ತಾವು ನೋಡಿದ್ದೀರಿ, ನಾವೂ ನೋಡಿದ್ದೇವೆ ಆದೇ ರೀತಿ ಈಗ ಬರಗಾಲ ಬಂದಾಗ ಏನೂ ಇಲ್ಲದೇ ಇರುವ ವರನ್ನು ಕೆಲಸದವರನ್ನು ಶ್ರೀಮಂತರನ್ನಾಗಿ ಸೃಷ್ಟಿ ಮಾಡಿದ್ದೀರಿ. ಏತಕ್ಕೆ ಈ ರೀತಿ ಮಾಡುತ್ತಾರೋ ಗೊತ್ತಿಲ್ಲ. ಆದ್ದರಿಂದ ಮಾನ್ಯ ರೆವಿನ್ಯೂ ಸಚಿವರನ್ನು ಅಧ್ಯಕ್ಷರ ಮುಖಾಂತರ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಬರಗಾಲದ ಹೆಸರಿನಲ್ಲಿ ಅನೇಕ ಜನರನ್ನು ಶ್ರೀಮಂತರನ್ನಾಗಿ ಸೃಷ್ಟಿ ಮಾಡು ತ್ತಿದ್ದೀರಿ. ತಾವು ವಯೋವೃದ್ಧರಾಗಿದ್ದೀರಿ, ತಮಗೆ ಎಲ್ಲ ವಿಷಯವೂ ಗೊತ್ತಿದೆ, ಆದುದರಿಂದ ಇದನ್ನು ಆಲೋಚನೆ ಮಾಡಿ ಈ ರೀತಿ ಆಗದೇ ಇರುವ ಹಾಗೆ ಒಂದು ಕಾರ್ಯಕ್ರಮವನ್ನು ರೂಪಿಸಿಕೊಳ್ಳ ಬೇಕು ಎಂದು ಹೇಳುತ್ತೇನೆ.

ಈ ವಿಚಾರದ ಬಗ್ಗೆ ಇನ್ನೊಂದು ಮಾತು ಹೇಳುವುದಾದರೆ ಈ ಬರಗಾಲ ಪರಿಸ್ಥಿತಿಗೆ ಒಂದು ಸ್ಟೇಟ್ ರಿಲೀಫ್ ಕೌನ್ಸಿಲ್ ಮಾಡಿದ್ದಾರೆ. ಅದಕ್ಕೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿದ್ದಾರೆಂದು ಕೇಳಿದ್ದೇನೆ. ಬರಗಾಲ ಪರಿಹಾರ ಸಮಿತಿಯು ಇದಕ್ಕಾಗಿ ಹಣ ಸ್ವೀಕರಿಸಿಲ್ಲ ಎಂದು ಹೇಳಿದರು. ಈ ಬಗ್ಗೆ ಈಚೆಗೆ ನಾನು ಪ್ರಸ್ತಾಪ ಮಾಡಿದ್ದರಲ್ಲಿ ಆ ಸಮಿತಿಯವರು ೫೦ ರಿಂದ ೬೦ ಸಾವಿರ ರೂಪಾಯಿ ಯವರೆಗೆ ಹಣವನ್ನು ಶೇಖರಣೆ ಮಾಡಿದ್ದಾರೆ. ಇದರಲ್ಲಿ ಮುಖ್ಯವಾಗಿ ನಾನು ಪ್ರಸ್ತಾಪಿಸುವುದು ಏನೆಂದರೆ ರಾಜ್ಯದ ಮುಖ್ಯಮಂತ್ರಿಗಳ ಹೆಸರಿನಲ್ಲಿ ಅವರ ಅಳಿಯಂದಿರೇ ಆಗಲಿ, ಸಾಮಾನ್ಯವಾದ ಪ್ರಜೆಯೇ ಆಗಲಿ, ಕೀಳು ಮಟ್ಟದವನೇ ಆಗಿರಲಿ, ಮೇಲ್ಮಟ್ಟದವನೇ ಆಗಿರಲಿ ದೊಡ್ಡವರ ಹೆಸರಿನಲ್ಲಿ ಈ ಹಣವನ್ನು ದುರ್ವ್ಯಯ ಮಾಡುವುದೇ ಆಗಲಿ, ಅವ್ಯವಹಾರ ಮಾಡುವುದೇ ಆಗಲಿ ಸರಿಯಲ್ಲ. ಅದಕ್ಕೆ ಅವಕಾಶ ನೀಡಬಾರದು. ಶಂಕೆ ಇರುವವರ ಮೇಲೆ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಹಿರಿಯ ರಾದಂಥ ತಾವು ಇದಕ್ಕೆ ಏತಕ್ಕೆ ಸಮ್ಮತಿ ಕೊಟ್ಟಿರಿ ? ಈ ಅವ್ಯವಹಾರದ ಕೂಗು ದೇಶದಲ್ಲಿ ಎಲ್ಲಾ ಕಡೆಯೂ ಹರಡಿದೆ. ವಿರೋಧ, ಪಕ್ಷದವರು ಇದಕ್ಕೆ ಸಹಾಯ ಮಾಡಬೇಕು ಎಂದು ಜನರಿಗೆ ಹೇಳಿದರೆ ಅವರು ನಮ್ಮನ್ನು ನೇರವಾಗಿ ಪ್ರಶ್ನೆ ಮಾಡುತ್ತಾರೆ. ಈ ರೀತಿ ಅವ್ಯವಹಾರ ಇದರಲ್ಲಿ ನಡೆಯುತ್ತಾ ಇದೆ, ಅದನ್ನು ಕೇಳಲು ನಿಮಗೆ ಸಾಮರ್ಥ್ಯ ಇಲ್ಲ ಎಂದು ನಮ್ಮನ್ನು ಚುಚ್ಚಿ ಚುಚ್ಚಿ ಕೇಳುತ್ತಿದ್ದಾರೆ. ಇದರಿಂದ ನಮ್ಮ ಮನಸ್ಸಿಗೆ ಬಹಳ ನೋವುಂಟಾಗುತ್ತದೆ. ಏತಕ್ಕೆಂದರೆ ನಮಗೆ ನೈತಿಕ ಮಟ್ಟ ಇಲ್ಲವೇ, ಗೌರವ ಇಲ್ಲವೇ, ಈ ಮಾತುಗಳನ್ನು ನಾನು ಎಲ್ಲ ಮಂತ್ರಿಗಳಿಗೂ ಹೇಳುವುದಕ್ಕೆ ತಯಾರಾಗಿಲ್ಲ. ನನಗೆ ನಿಮ್ಮಲ್ಲಿ ಅಪಾರವಾದ ಗೌರವ ಇದೆ, ನಿಮ್ಮಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳು ಇದ್ದಾರೆ, ನಿಮ್ಮಲ್ಲಿ ವಯೋವೃದ್ಧರು ಇದ್ದಾರೆ, ಹಿರಿಯರು ಇದ್ದಾರೆ, ಅಂಥಾವರೂ ಕೂಡ ಕೊಟ್ಟಂಥ ತೀರ್ಮಾನಗಳನ್ನೂ ಸಹ ತಾವು ಗಣನೆಗೆ ತೆಗೆದುಕೊಳ್ಳದೇ ಇರುವುದು ಸಾಧುವಾದುದಲ್ಲ. ಆದರಿಂದಾಗಿ ಅನೇಕ ಜನ ನಿಮ್ಮ ಬಗ್ಗೆ ಪಿಸಿಪಿಸಿ ಮಾತುಗಳನ್ನು ಆಡುತ್ತಿದ್ದಾರೆ ಎಂಬ ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡು ತ್ತೇನೆ. ಅಧ್ಯಕ್ಷರು ಈ ಬಗ್ಗೆ ಮಾತನಾಡುವುದಕ್ಕೆ ಹೆಚ್ಚು ಕಾಲ ತೆಗೆದುಕೊಳ್ಳಬಾರದು ಎಂದು ಅಪ್ಪಣೆ ಕೊಟ್ಟಿರುವುದರಿಂದ ನಾನು ಒಂದು ವಿಷಯವನ್ನು ಮಾತ್ರ ಮಾನ್ಯ ರೆವಿನ್ಯೂ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ- ಈ ೧೬ ಜಿಲ್ಲೆಗಳು ಅಭಾವ ಪರಿಸ್ಥಿತಿಯಲ್ಲಿದೆ ಎಂದು ಏನು ತಾವು ಘೋಷಣೆ ಮಾಡಿದ್ದೀರೋ ಆ ಭಾಗಗಳಿಗೆ ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಎಂಬಂತೆ ಹೆಚ್ಚು ಕಡಿಮೆ ವ್ಯವಹಾರ ಮಾಡಬೇಡಿ. ಆ ಪ್ರದೇಶಗಳು ಬಹುವಾಗಿ ಬರಗಾಲದಲ್ಲಿವೆ. ಅಧ್ಯಕ್ಷರೇ ಈ ರೀತಿ ಆ ಜಿಲ್ಲೆಗಳಿಗೆ ಬರಗಾಲ ಬಂದಿರುವುದು ದುರದೃಷ್ಟಕರ ಎಂದು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಸದನದಲ್ಲಿ ಹೇಳಿದ್ದಾರೆ.

ಇನ್ನು ಜಾನುವಾರುಗಳ ಬಗ್ಗೆ ಹೇಳುವುದಾದರೆ ಎಲ್ಲಾ ದನಗಳನ್ನೂ ರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಇದರಿಂದ ಆ ಭಾಗದ ಜನಕ್ಕೆ ನಿರಾಸೆಯಾಗಿದೆ. ಎಷ್ಟೋ ಜನ ಮಂತ್ರಿಗಳು, ರಾಜ್ಯ ಮಟ್ಟದ ಮಂತ್ರಿಗಳು, ಅಲ್ಲಿ ಪ್ರವಾಸಕ್ಕೆ ಹೋಗಿದ್ದಾಗ ಅಲ್ಲಿಗೆ ಎಷ್ಟು ಹುಲ್ಲನ್ನು ಒದಗಿಸಬೇಕೋ ಒದಗಿಸುತ್ತೇವೆ, ಅದಕ್ಕಾಗಿ ಎಷ್ಟು ದುಡ್ಡನ್ನು ಒದಗಿಸಬೇಕೋ ಅಷ್ಟು

ಒಪಗಿಸುತ್ತೇವೆ, ಆ ಪ್ರಾಣಿಗಳನ್ನು ರಕ್ಷಣೆ ಮಾಡುತ್ತೇವೆ, ಅಲ್ಲಿ ಎಲ್ಲರಿಗೂ ಕೆಲಸ ಕೊಡುತ್ತೇವೆ ಎಂದು ಹೀಗೆ ಹೇಳಿಕೊಂಡು ಬಂದು ಈಗ ರಕ್ತಮಾಂಸ ಇಲ್ಲದ ಆ ಪ್ರಾಣಿಗಳನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ ಎಂದು ನಿಮ್ಮ ಬಾಯಿಂದ ಹೇಳುವುದಕ್ಕೆ ಹೇಗೆ ಮನಸ್ಸು ಬಂತು ? ಅರಸ್ ಎಂದರೆ ದೇವರು, ದೇವರು ಎಂದು ಹೇಳತಕ್ಕಂಥ ಮುಖ್ಯಮಂತ್ರಿಗಳಾದ ದೇವರಾಜ್ ಅರಸ್ ಶಿವಾಯಿ ಈವೊತ್ತಿನ ದಿವಸ ಅವರಿಗೆ ಯಮರಾಜ್ ಅರಸರಾಗಿ ಇದ್ದಾರಲ್ಲಾ ಎಂದು ನಾನು ವ್ಯಸನದಿಂದ ಹೇಳಬೇಕಾಗಿದೆ. ಆ ಮೂಕ ಪ್ರಾಣಿಗಳನ್ನು ರಕ್ಷಣೆ ಮಾಡುವುದನ್ನು ಮಾನವೀಯತೆಯಿಂದ ನೋಡಬೇಕು. ಹಾಗಿಲ್ಲದೇ ಇದ್ದರೆ ಈ ಮಂತ್ರಿಮಂಡಲ ಏತಕ್ಕೆ ಇರಬೇಕು ? ಈ ರೀತಿ ಅಸೌಜನ್ಯದ ಮಾತುಗಳನ್ನು ಪ್ರಾಣಿಗಳ ಬಗ್ಗೆ ಆಡ ಬಾರದು. ಏತಕ್ಕೆಂದರೆ ನಾವು ಅವುಗಳನ್ನು ಪೂಜೆ ಮಾಡುತ್ತೇವೆ. ಈವೊತ್ತಿನ ದಿವಸ ಜೋಡೆತ್ತಿನ ಬದಲಾಗಿ ಪೂಜೆ ಮಾಡುವ ಹಸು ಕರು ಬೇಕು ಎಂದು ಗುರ್ತು ಹಾಕಿಕೊಂಡ ಜನ ನೀವು. ಅಂಥಾದ್ದರಲ್ಲಿ ಆ ಪ್ರಾಣಿಗಳನ್ನು ರಕ್ಷಣೆ ಮಾಡಲು ಸಾಧ್ಯವಿಲ್ಲ ಎಂದು ಹೇಳಲು ನಿಮಗೆ ಹೇಗೆ ನಾಲಿಗೆ ಬಂತು ? ಮಂತ್ರಿಗಳಿಂದ ಬರತಕ್ಕಂಥ ಮಾತು ರಾಮಬಾಣವಾಗಿರಬೇಕೇ ಹೊರತು ಹುಸಿಯಾಗಬಾರದು. ದೈವಭಕ್ತಿಯಿಂದ ನಾನು ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಲ್ಲಿ ಎಲ್ಲಾ ಸದಸ್ಯರೂ ಇದ್ದಾರೆ, ತಾವೂ ಕೂಡ ಇದರಲ್ಲಿ ಆಲೋಚನೆ ಮಾಡಬೇಕು. ಮಂತ್ರಿಗಳ ಬಾಯಿಂದ ಬರತಕ್ಕಂಥ ಮಾತುಗಳು ಆಗಲಿ ಅಥವಾ ಬರೆದುಕೊಟ್ಟ ಆರ್ಡರ್ ಆಗಲಿ ಅದು ಆರ್ಡರ್ ಅಲ್ಲ ಅನ್ನುವುದಾದರೆ ನಿಮ್ಮ ಮಂತ್ರಿಮಂಡಲದಲ್ಲಿ ಅವರನ್ನು ಮಂತ್ರಿಗಳನ್ನಾಗಿ ಏತಕ್ಕೆ ಮಾಡಿದ್ದೀವಿ ? ಹೀಗಾದರೆ ಆ ಮಂತ್ರಿಗಳಿಗೆ ಬೆಲೆ ಎಲ್ಲಿದೆ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ನಾವು ಅವುಗಳನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ. ನೀವು ಈ ಬಗ್ಗೆ ಏನು ಮಾಡಬೇಕು ಎಂದು ಸಲಹೆ ಕೊಡಿ.

೯-೩೦ ಎ.ಎಂ.

ಶ್ರೀ ಪುಟ್ಟಸ್ವಾಮಯ್ಯ.—ನನಗೆ ಒಂದು ಭಯ ಏನೆಂದರೆ, ನನ್ನ ಸಲಹೆಗಳು ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ ಎನ್ನುವ ಹಾಗೆ ಆದೀತು ಎಂದು. ಆದ್ದರಿಂದ ನಮ್ಮ ಮಿತ್ರರುಗಳು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಚಾಚೂ ತಪ್ಪದೆ ತಾವು ಮಾಡಿದರೆ ಸಾಕು ಎಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಪ್ರಾರ್ಥನೆ ಮಾಡುತ್ತೇನೆ. ಅನೇಕ ವಿಷಯಗಳನ್ನು ನಾನು ಪ್ರಸ್ತಾಪ ಮಾಡ ಬೇಕೆಂದಿದ್ದೆ, ಆದರೆ ಸಮಯ ಇಲ್ಲದೆ ಇದ್ದುದರಿಂದ ಹಿರಿಯ ಸಚಿವರಾದ ಮಾನ್ಯ ಹುಚ್ಚಮಾಸ್ತಿಗೌಡರನ್ನು ಭಕ್ತಿಯಿಂದ ಪ್ರಾರ್ಥನೆ ಮಾಡಿ ಕೇಳಿಕೊಳ್ಳುವುದೇನೆಂದರೆ, ತಾವು ಈ ೧೯ ಜಿಲ್ಲೆಗಳಲ್ಲಿ ಏನು ಆಶ್ವಾಸನೆ ಕೊಟ್ಟಿದ್ದೀರೋ ಅದನ್ನು ಈಡೇರಿಸಬೇಕು. ಒಂದು ಶಂಕೆ ಇದೆ. ಜಿಲ್ಲಾಧಿಕಾರಿಗಳಿಂದ ರಿಪೋರ್ಟ್ ತರಿಸಿದ ಮೇಲೆ ಉಳಿದ ಕೆಲಸ ಮಾಡುತ್ತೇವೆ ಎಂದು ಹೇಳುತ್ತಾರೆ, ಇದರಿಂದ ಅನ್ಯಾಯವಾಗಿದೆ.

ಅಧ್ಯಕ್ಷರು.—ತಾವು ಎಷ್ಟು ಸಾರಿ ಅದನ್ನೇ ರಿಪೀಟ್ ಮಾಡೋದು ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕೊನೆಯದಾಗಿ, ಮಾನ್ಯ ಸಚಿವರು ಎಲ್ಲಾ ಜಿಲ್ಲೆಗಳಿಂದ ವರ್ತಮಾನ ತರಿಸುವುದಕ್ಕೆ ಮೊದಲು ಅಲ್ಲಿ ಕೆಲಸ ನಡೆಸುವಂತೆ ಮಾಡಬೇಕು. ಸರ್ಕಾರದವರು ಏನು ಕೆಲಸ ಮಾಡು ವುದಕ್ಕೂ ದುಡ್ಡು ಇಲ್ಲ ಎಂದು ಹೇಳುತ್ತಾರೆ, ದುಡ್ಡು ಬರತಕ್ಕ ಮೂಲಗಳಿಗೆ ಬ್ರೇಕ್ ಹಾಕುವುದಕ್ಕೆ ಹೊರಟಿದ್ದಾರೆ. ಇದಕ್ಕೆ ನಾನು ಒಂದು ನಿದರ್ಶನ ಹೇಳುತ್ತೇನೆ, ಎಂ ಎಸ್ ಆರ್ ಟಿ ಸಿ ಬಸ್ಸುಗಳಲ್ಲಿ ಅಡ್ವರ್ಟೈಸ್‌ಮೆಂಟ್ ಹಾಕುತ್ತಾರೆ, ಪ್ರತಿವರ್ಷ ನನಗೆ ತಿಳಿದಮಟ್ಟಿಗೆ ಇದರ ಟೆಂಡರ್ ಅನ್ನು ಮೂರುವರೆ ಲಕ್ಷ ರೂಪಾಯಿಗಳಿಗೆ ಕೊಟ್ಟಿದ್ದಾರೆ. ಇದು ಐದು ವರ್ಷದ ಅಗ್ರಿಮೆಂಟ್. ಈ ತಿಂಗಳ ೩೧ನೇ ತಾರೀಖಿಗೆ ಮುಗಿಯುತ್ತದೆ. ಈಗ ಬೇರೆ ಏಜೆನ್ಸಿಯವರು ಈ ಅಡ್ವರ್ಟೈಸ್‌ಮೆಂಟಿಗೆ ೧೨ ಲಕ್ಷ ರೂಪಾಯಿ ಕೊಡುತ್ತೇವೆಂದು ಪತ್ರ ಬರೆದಿದ್ದಾರೆ.

ಅಧ್ಯಕ್ಷರು.—ರಿಪೋರ್ಟ್‌ನ ಚರ್ಚೆಯಲ್ಲಿ ಬಡ್ಜೆಟ್ ಸ್ಪೀಚ್ ಮಾಡುತ್ತಿದ್ದೀರಿ.

ಶ್ರೀ ಕೆ ಬಿ. ಶಿವಯ್ಯ.—ಮೂರುವರೆ ಲಕ್ಷ ರೂಪಾಯಿ ಕೊಟ್ಟವರು ಯಾರು ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕೊಡುವವರು ಕೊಟ್ಟಿದ್ದಾರೆ, ಈಗ ಅದನ್ನೇ ಮುಂದುವರಿಸುವುದಕ್ಕೆ ಪ್ರಯತ್ನಗಳು ನಡೆಯುತ್ತಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಆದ್ದರಿಂದ ಇದಕ್ಕೆ ಟೆಂಡರ್ ಕರೆದರೆ ೧೨ ಲಕ್ಷ ರೂಪಾಯಿಗಳ ಮೇಲ್ಪಟ್ಟು ಉತ್ಪನ್ನ ಬರುತ್ತದೆ, ಇದರ ಕಡೆ ಸರ್ಕಾರದವರು ಗಮನ ಕೊಡ ಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್.ಜಿ. ಚೆನ್ನಪ್ಪ (ಮಾಗಡಿ). —ಮಾನ್ಯ ಸಭಾಪತಿಗಳೇ, ಈಗಾಗಲೇ ಶ್ರೀಮಾನ್ ಆರ್ಮುಗಂ ಅವರು ಕೊಟ್ಟಿರತಕ್ಕ ವರದಿಯ ಮೇಲೆ ಸಾಕಷ್ಟು ಚರ್ಚೆ ನಡೆದಿದೆ. ಎಲ್ಲಾ ವಿಷಯಗಳಲ್ಲೂ ಎಲ್ಲ ಸದಸ್ಯರೂ ಮಾತನಾಡಿದ್ದಾರೆ. ಈ ಬರಗಾಲದಲ್ಲಿ ಜನ ಎಷ್ಟರಮಟ್ಟಿಗೆ ಕಂಗಾಲಾಗಿದ್ದಾರೆ. ಅವರಿಗೆ ಯಾವ ರೀತಿ ರಕ್ಷಣೆ ಸಿಕ್ಕುತ್ತಿದೆ ಎನ್ನುವುದನ್ನೂ ಕೂಡ ಈಗಾಗಲೇ ಮಾತನಾಡಿರತಕ್ಕ ಸದಸ್ಯರುಗಳು ತಮಗೆ ತಿಳಿದ ರೀತಿಯಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ. ಆಮೇಲೆ ಮಾಡಬೇಕಾಗಿರತಕ್ಕ ಕೆಲಸಕಾರ್ಯಗಳು ಕುಂಠಿತವಾಗಿರತಕ್ಕ ವಿಷಯದಲ್ಲಿಯೂ ಕೂಡ ಅವರು ತಿಳುವಳಿಕೆಯನ್ನು ನೀಡಿದ್ದಾರೆ. ಇದರ ಬಗ್ಗೆ ನಾನು ಒಂದು ವಿಷಯವನ್ನು ಹೇಳ ಬಯಸುತ್ತೇನೆ. ಕ್ಷಾಮದ ಹೆಸರಿನಲ್ಲಿ ನಮ್ಮ ಮಿತ್ರರು ಹೇಳಿದಂತೆ, ಅನೇಕ ಮಧ್ಯವರ್ತಿ ಜನ ಸಕ್ಕರೆ, ಗೋಧಿ, ಇವುಗಳನ್ನೆಲ್ಲಾ ಪರ್ಮಿಟ್ಟುಗಳನ್ನು ಪಡೆದುಕೊಂಡು ಕಾಳಸಂತೆ ವ್ಯಾಪಾರ ಮಾಡಿ, ದುರ್ವ್ಯವಹಾರ ಮಾಡತಕ್ಕವರು ದೇಶದಲ್ಲಿ ಎಲ್ಲಾ ಕಡೆ ಇದ್ದಾರೆ. ಈ ಸರ್ಕಾರ ಒಂದರಲ್ಲೇ ಅಲ್ಲ, ಎಲ್ಲಾ ಸರ್ಕಾರಗಳಲ್ಲಿಯೂ ಇದು ನಡೆದುಕೊಂಡು ಬಂದಿರತಕ್ಕ ಪದ್ಧತಿ. ಇಂಥ ಪರಿಸ್ಥಿತಿಯಲ್ಲಿ ಬೆಂದ ಮನೆಯಲ್ಲಿ ಉಂಡವನೇ ಜಾಣ ಎಂದು ಎಷ್ಟು ಲಾಭ ಸಿಕ್ಕಿತೋ ಅಷ್ಟು ನಮ್ಮ ಪಾಲು ಎಂದು ದೋಚಿಕೊಂಡು ಹೋಗಬೇಕು ಎನ್ನುವ ವ್ಯವಹಾರ ನಡೆಯುತ್ತಿದೆ. ಅಂಥವರಿಗೆ ಅವಕಾಶ ಕೊಡಬಾರದು. ನಮ್ಮಲ್ಲಿ ಈ ಪರ್ಮಿಟ್‌ಗಳ ವ್ಯವಸ್ಥೆ ಬಹಳ ಹದಗೆಟ್ಟು ಹೋಗಿದೆ. ಜನಗಳಿಗೆ ಹೆಚ್ಚಾಗಿ ಪರ್ಮಿಟ್ ಕೊಡಿ, ಆದರೆ ಹೆಚ್ಚಾಗಿ ಪರ್ಮಿಟ್‌ಗಳನ್ನು ಕೊಡುವುದಕ್ಕಾಗುವುದಿಲ್ಲ ಸರ್ಕಾರದ ಆದೇಶ ಬಂದಿದೆ ; ಎಂದು ಹೇಳುತ್ತಾರೆ. ಹೆಚ್ಚಾಗಿ ಪರ್ಮಿಟ್ ಕೊಟ್ಟಷ್ಟೂ ಕಾಳಸಂತೆ ಕಡಿಮೆಯಾಗುತ್ತದೆ. ಒಬ್ಬನಿಗೆ ೧೦ ಮೂಟೆ ಕೊಡುವುದಕ್ಕಿಂತ, ಐದು ಜನಕ್ಕೆ ಅದನ್ನು ಕೊಟ್ಟರೆ ಬ್ಲಾಕ್‌ಮಾರ್ಕೆಟ್ ಕಡಿಮೆಯಾಗುತ್ತದೆ. ಆದ್ದರಿಂದ ಹೆಚ್ಚಿಗೆ ಜನ ಯಾರು ಮುಂದೆ ಬರುತ್ತಾರೋ ಅವರಿಗೆ ಪರ್ಮಿಟ್ ಕೊಡಿ. ಹೆಚ್ಚಿಗೆ ಜನಕ್ಕೆ ಪರ್ಮಿಷನ್ ಕೊಟ್ಟರೆ ಕಾಳಸಂತೆ ನಿಂತು ಹೋಗುತ್ತದೆ. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕು. ಈ ವರದಿ ಮೇಲೆ ಚರ್ಚೆ ಮಾಡತಕ್ಕ ಕಾಲದಲ್ಲಿ ಅನೇಕ ಮಿತ್ರರು ಬಾವಿಗಳನ್ನು ತೆಗೆಯತಕ್ಕ ವಿಷಯದಲ್ಲಿ ಕೆರೆಕಟ್ಟೆಗಳನ್ನು ಮಾಡತಕ್ಕ ವಿಷಯದಲ್ಲಿ ದನಗಳಿಗೆ ಮೇವನ್ನು ಒದಗಿಸತಕ್ಕ ವಿಷಯದಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ. ಎಲ್ಲಿ ಚೆನ್ನಾಗಿ ಬೇಸಾಯವಾಗಿದೆ, ಯಾವ ಕಡೆ ಒಳ್ಳೆಯ ಬೆಳೆ ಆಗಿದೆ, ಅಂಥ ಕಡೆಗಳಲ್ಲಿ ತಾವು ಒಂದು ಸಮಿತಿಯನ್ನು ಏರ್ಪಾಡು ಮಾಡಿ, ಧಾನ್ಯಗಳನ್ನು, ಮೇವನ್ನು ಕಲೆಕ್ಟ್ ಮಾಡಿ ಅಲ್ಲಿಗೆ ಕಳುಹಿಸಿಕೊಡಬೇಕು. ಹಣವನ್ನು ಸಂಗ್ರಹಣೆ ಮಾಡುವ ಒಂದು ಕಮಿಟಿಯನ್ನು ಮಾಡಿದರೆ ಅನುಕೂಲ ಎಂದು ನನಗಾದರೂ ಅನ್ನಿಸುತ್ತದೆ ಬಾಂಗ್ಲಾ ದೇಶದಿಂದ ಬಂದ ನಿರಾಶ್ರಿತರಿಗೆ ಆಶ್ರಯ ಕೊಟ್ಟ ಜನ ನಮ್ಮವರು, ನಮ್ಮ ದೇಶದಲ್ಲಿ ಇಂಥ ಕ್ಷಾಮ ತಲೆದೋರಿರುವಾಗ ಅದನ್ನು ಎದುರಿಸುವುದಕ್ಕೆ ಏತಕ್ಕೆ ಮುಂದೆ ಬರಲಿಲ್ಲ ? ಆದ್ದರಿಂದ ಸರ್ಕಾರದವರು ಇನ್ನು ಹೆಚ್ಚು ಗೊಂದಲಕ್ಕೆ ಅವಕಾಶ ಕೊಡದಂತೆ ಈ ಅಸೆಂಬ್ಲಿ ಮುಗಿದ ಮೇಲೆ, ನಮ್ಮ ಸಚಿವರುಗಳು ಅಲ್ಲಿಗೆ ಹೋಗಿ ಕೆಲವು ಕಾಲ ಇದ್ದು ಅಲ್ಲಿಯ ಜನಗಳಿಗೆ ಸರಿಯಾಗಿ ಭಯಪಡದೆ ಇರುವ ಆಶ್ವಾಸನೆ ಇತ್ತು ಹೆಚ್ಚಿನ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಕೊಡುತ್ತೇನೆ. ಅದೇ ರೀತಿಯಲ್ಲಿ, ಕೇವಲ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಬರಗಾಲ ಇದೆ ಎಂದು ಹೇಳತಕ್ಕದ್ದು ವಾಸ್ತವವಾಗಿದೆ. ಆದರೆ ಬೇರೆ ಜಿಲ್ಲೆಗಳಲ್ಲಿ ಪೂರ್ಣವಾಗಿ ಕ್ಷಾಮ ಇಲ್ಲದೆ ಹೋದರೂ ಕೂಡ ರಾಯಚೂರು, ಗುಲ್ಬರ್ಗ ಜಿಲ್ಲೆಗಳಲ್ಲಿ ಏನು ಪರಿಸ್ಥಿತಿ ಇದೆ, ಅದೇ ಪರಿಸ್ಥಿತಿ ಬೇರೆ ಜಿಲ್ಲೆಗಳಲ್ಲಿ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಅಂಥ ಕಡೆಯಿಂದ ಬೇಡಿಕೆ ಬಂದ ಕೂಡಲೇ ಮಂತ್ರಿಗಳು ಖುದ್ದಾಗಿ ಪರಿಶೀಲನೆ ಮಾಡಿ ಸೂಕ್ತ ಪರಿಹಾರ ಕೊಡದೆ ಹೋದರೆ ಅಲ್ಲಿ ಆಗುತ್ತಾ ಇರುತ್ತಕ್ಕ ಗಲಭೆ, ಇಲ್ಲೂ ಶುರು ಆಗುವುದಕ್ಕೆ ಅವಕಾಶ ಕೊಡಬಾರದು. ಅಂಥ ಪ್ರದೇಶಗಳಿಗೂ ಸರ್ಕಾರ ತನ್ನ ಗಮನವನ್ನು ಹರಿಸಬೇಕು.

ಕೊನೆಯದಾಗಿ, ನನ್ನ ಕ್ಷೇತ್ರದ ಒಂದು ನಿದರ್ಶನವನ್ನು ಕೊಡುತ್ತೇನೆ. ಆಗಲೇ ರೆವಿನ್ಯೂ ಮಂತ್ರಿಗಳಿಗೂ ಈ ಬೇಡಿಕೆಯನ್ನು ಸಲ್ಲಿಸಿದ್ದೇನೆ ಕುಂತಕಲ್ ಹೋಬಳಿ ಪರಿಸ್ಥಿತಿ ಕೆಟ್ಟು ಹೋಗಿರುವುದರಿಂದ ಅಲ್ಲಿ ಜನರು ಮಂಡ್ಯಾ ಮತ್ತು ಬೇರೆ ಜಿಲ್ಲೆಯ ತಾಲ್ಲೂಕುಗಳಿಗೆ, ಎಲ್ಲಿ ಬೆಳೆ ಚೆನ್ನಾಗಿದೆಯೋ ಅಲ್ಲಿಗೆ ವಲಸೆ ಹೋಗುತ್ತಿದ್ದಾರೆ. ಅಲ್ಲಿಯೂ ಒಂದು ಕಮಿಟಿ ಮಾಡಿ ಅವರಿಗೆ ಧಾನ್ಯ ಇತರೆ ಸಾಮಾನುಗಳನ್ನು ಕಳುಹಿಸಿಕೊಟ್ಟು, ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡು ಜನಗಳಿಗೆ ಅನುಕೂಲ ಮಾಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿ, ಅಧ್ಯಕ್ಷರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್. ಶ್ರೀನಿವಾಸುಲುನಾಯುಡು (ಶಾಂತಿನಗರ). —ಸನ್ಮಾನ್ಯ ಸಭಾಧ್ಯಕ್ಷರೇ, ಬರಗಾಲ ಪರಿಸ್ಥಿತಿಯನ್ನು ವೀಕ್ಷಿಸಿ ಪೂರ್ಣವರದಿ ಕೊಡುವುದಕ್ಕೆ ವಿಧಾನ ಮಂಡಲದ ಪರವಾಗಿ ಕಳುಹಿಸಿದಂಥ ಶ್ರೀಮಾನ್ ಅರ್ಮುಗಂ ಅವರು ವಿವರಣೆಯನ್ನು ಕೊಟ್ಟಿದ್ದಾರೆ. ಅವರ ವಿವರಣೆಯನ್ನು ಕೂಲಂಕಷವಾಗಿ ಓದಿದರೆ

ಇದನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ಒಂದನೆಯದಾಗಿ Natural and Artificial causes ಎರಡನೆಯದಾಗಿ Remote and Immediate causes ಮತ್ತು ಮೂರನೆಯದಾಗಿ Govrnmental and Public causes. ಅವರು ತಮ್ಮ ವರದಿಯ ೫೮, ೭೬, ೬೭ ಮತ್ತು ೭೦ನೇ ಪುಟದಲ್ಲಿ ಅವರ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಹಿಂದೆ ಎಂದೂ ಕಾಣದಷ್ಟು ಕೆಲಸ ನಡೆದಿದೆ, ಇದೇ ಮೊದಲನೆಯ ಬಾರಿಗೆ ಗ್ರಾಮಾಂತರ ಪ್ರದೇಶದ ಜನಕ್ಕೆ ನೇರವಾಗಿ ಹಣ ಸೇರಿದೆ ಎಂದು ಸಹ ಹೇಳಿದ್ದಾರೆ. ಕೆಲವು ಪ್ರದೇಶಗಳನ್ನು ಕ್ರಾನಿಕ್ ಫ್ಯಾಮಿನ್ ಏರಿಯಾ ಎಂದು ಹೇಳಿದ್ದಾರೆ. ಇನ್ನೊಂದು ಕಡೆ ಪಿ.ಡಬ್ಲ್ಯೂ.ಡಿ ಕೆಲಸ ಮಾಡಿದ್ದು ನೋಡಿದರೆ. ಎಷ್ಟೋ ಗ್ರಾಮಗಳಿಗೆ ರಸ್ತೆಗಳಿಲ್ಲದ ಕಡೆ ರಸ್ತೆಗಳ ಕಾರ್ಯವನ್ನು ಕೈಗೊಂಡಿದ್ದಾರೆ ಎಂದು ಹೇಳಿದ್ದಾರೆ. ಆಂಟಿ ಸೋಷಿಯಲ್ ಎಲಿಮೆಂಟ್ಸ್ ಬಗ್ಗೆ ಸಹ ಹೇಳಿದ್ದಾರೆ. ಹಿಂದಿನ ಕಾಲದಲ್ಲಿ ವರ್ಣಾಶ್ರಮ ಧರ್ಮದಂತೆ ಬ್ರಹ್ಮ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ನಾಲ್ಕು ತರಹದ ಜನರು ಇರುತ್ತ ಇದ್ದರು. ಆದರೆ ಈಗ ಸ್ಮಗ್ಲರ್ಸ್, ಬ್ಲಾಕ್ ಮಾರ್ಕೆಟಿಯರ್ಸ್, ಹೋರ್ಡರ್ಸ್ ಮತ್ತು ಸ್ಪೆಕ್ಯುಲೇಟರ್ಸ್ ಎನ್ನುವ ನಾಲ್ಕು ಜಾತಿಯ ಜನ ಹೊಸದಾಗಿ ಬಂದಿದ್ದಾರೆ ಮತ್ತು ಹುಟ್ಟಿದ್ದಾರೆ. ನಮ್ಮ ಸರ್ಕಾರದವರು ಶಕ್ತಿಮೀರಿ ಕೆಲಸ ಮಾಡಿದ್ದಾರೆ ಎಂದು ಘಂಟಾಘೋಷವಾಗಿ ನಾವು ಹೇಳಬಹುದು. ಇದಕ್ಕೆ ನಾನು ಒಂದು ಉದಾಹರಣೆ ಕೊಡುತ್ತೇನೆ. ಈ ಬರಗಾಲ ಪರಿಹಾರಕ್ಕೆ ಕೇಂದ್ರದವರು ನಮ್ಮ ರಾಜ್ಯಕ್ಕೆ ಏಳುಮುಕ್ಕಾಲು ಕೋಟಿ ರೂಪಾಯಿಗಳನ್ನು ಸದ್ಯಕ್ಕೆ ಕೊಟ್ಟಿದ್ದಾರೆ. ನಾವು ಇನ್ನು ಐದು ಕೋಟಿ ರೂಪಾಯಿಗಳನ್ನು ಅದಕ್ಕೆ ಸೇರಿಸಿ ಒಟ್ಟು ಹನ್ನೊಂದು ಕೋಟಿ ರೂಪಾಯಿಗಳನ್ನು ಪರಿಹಾರ ಕಾರ್ಯಕ್ಕೋಸ್ಕರ ಖರ್ಚು ಮಾಡಿದ್ದೇವೆ. ಟಿಬಿಟಿಯನ್ ರೆಫ್ಯೂಜೀಸ್‌ಗೆ ಸಹಾಯ ಮಾಡತಕ್ಕ ಜನರು ನಮ ಜನರು ಸಾಯುವುದಕ್ಕೆ ನಾವು ಎಂದಿಗೂ ಬಿಡುವುದಿಲ್ಲ.

ಶ್ರೀ ಆರ್ಮುಗಂರವರು ಸೂಕ್ತ ಸಲಹೆಗಳನ್ನು ಏನು ಕೊಟ್ಟಿದ್ದಾ ಅದನು ಸರ್ಕಾರದವರು ಮನಗಂಡಿದ್ದಾರೆ. ಹಿಂದೆ ಎಂದೂ ಕಾಣದಷ್ಟು ಈವರೆ ೯ ತಿಂಗಳಲ್ಲಿ ಮಾಡಿದ ಕಾರ್ಯವನ್ನು ಘಂಟಾಘೋಷವಾಗಿ ಹೇಳಬಹುದು. ಅಷ್ಟನ್ನು ಸಾಧಿಸಿದ್ದಾರೆ ಅಷ್ಟರಲ್ಲಿ ಕೆಲವು ಲೋಪದೋಷ ಇರಬಹುದು, ಅದನ್ನೇ ದೊಡ್ಡದಾಗಿ ಮಾಡಬಾರದು There may be natural artificial reonte, immediate, governmentel and public causes. ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಭೀಕರ ಪರಿಸ್ಥಿತಿ ಇದೆ ಅದನ್ನು ಆನ್‌ಪ್ರಿಸಿಡೆಂಟ್ ಎಂದು ಸಹ ಅವರ ಮಾತಿನಲ್ಲಿ ಹೇಳಿದ್ದಾರೆ. ಕ್ಷಾಮ ಮತ್ತು ಬರಗಾಲ ನಮ್ಮ ದೇಶಕ್ಕೆ ಹೊಸದು ಏನು ಅಲ್ಲ ಅನೇಕ ಸಂದರ್ಭದಲ್ಲಿ ಈ ಸದನದಲ್ಲಿ ಅದನ್ನು ಒತ್ತಿ ಹೇಳಿದ್ದೇನೆ. ಪದೇಪದೇ ಅದನ್ನೇ ಹೇಳುವುದು ಬೇಡ. ಪರಮನೆಂಟ್ ಫ್ಯಾಮಿನ್ ರಿಲೀಫ್ ಬೋರ್ಡ್ ಇರಬೇಕು. ವಾರ್ ಫುಟಿಂಗ್‌ನ ಹಾಗೆಯೇ ಮುಂದುವರಿಸಬೇಕು ಮತ್ತು ಕೆಲಸ ಮಾಡಬೇಕೆಂದು ಅನೇಕಸಲ ಸಲಹೆ ಕೊಟ್ಟಿರುತ್ತೇನೆ. ಆ ದೃಷ್ಟಿಯಿಂದ ಬರಗಾಲ ಪರಿಸ್ಥಿತಿ ಅವರ ಹೇಳಿಕೆ ಪ್ರಕಾರ ನೂರು ತಾಲ್ಲೋಕುಗಳಲ್ಲಿ ಇದೆ. ಬರಗಾಲ "ಈ ಅನ್‌ನ್ಯಾಚುರಲ್ ಕ್ಯಾಲಾಮಿಟೀಸ್‌ನಿಂದ ಮಳೆ ಕಮ್ಮಿಯಾಯಿತು ಎಂದರೆ ಭಾವಿಯಲ್ಲಿ ನೀರು ಸಹಜವಾಗಿ ಕಡಿಮೆಯಾಗುತ್ತದೆ. ಅದಕ್ಕೋಸ್ಕರ ರಿಗ್ಸ್ "Rigs" ಮೂಲಕ ಕೆಲಸ ಮಾಡಬೇಕಾಯಿತು. ಅಂಡರ್‌ಗ್ರೌಂಡ್ ವಾಟರ್‌ಬೋರ್ಡ್ ಮೊದಲೆ ಇದ್ದಿತು. ಹಾಗೆಯೇ ಇನ್ನೂ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಬೇಕು. ಕ್ಯಾಟಲ್ ಫಾಡರ್ಸ್ ಸೆಂಟರ್ ಸಹ ಆಗ ಬೇಕೆಂದು ಒತ್ತಿ ಹೇಳುತ್ತೇನೆ. ಮನುಷ್ಯನಿಗೆ ಒಂದು ಗೇಣು ಹೊಟ್ಟೆ ಇದೆ, ಆದರೆ ದನಗಳಿಗೆ ದೊಡ್ಡ ಹೊಟ್ಟೆ ಇರುವುದರಿಂದ ದನಗಳ ಮೇವಿಗೆ ಮೊದಲು ಹೆಚ್ಚು ಪ್ರಯತ್ನಮಾಡಬೇಕು. ಅಮೃತಮಹಲ್ ಕಾವಲುಗಳು ಮುಂತಾದ ಬೇರೆ ಕಡೆ ಹುಲ್ಲು ಇದೆ. ಅಲ್ಲಿಂದ ಸಾಗಿಸುವುದಕ್ಕೆ ತೊಂದರೆ ಆಗಬಹುದು. ನೀರು ಇಲ್ಲದೆ ಇರಬಹುದು. ವಾರ್ ಫುಟಿಂಗ್ ಹಾಗೆ ಫೈಟ್ ಮಾಡಿ, ಮಿಲಿಟರಿ ಸಹಾಯವನ್ನು ತೆಗೆದುಕೊಂಡು, ಜಾನುವಾರಗಳು ಎಲ್ಲಿ ಇವೆ ಅವುಗಳನ್ನು ಮೇವು ಮತ್ತು ನೀರು, ಇರುವಂತಹ ಕಡೆಗೆ ಸಾಗಿಸುವುದು ಒಳ್ಳೆಯದು ಮತ್ತೆ ಸಾಗಿಸುವುದಕ್ಕೆ ತೊಂದರೆಯಾಗಬಹುದು. ಆಧುನಿಕ ಕಾಲದಲ್ಲಿ ನಮಗೆ ಟ್ರಾನ್ಸ್‌ಪೋರ್ಟ್ ಫೆಸಿಲಿಟಿ ಇದೆ. ಹಿಂದಿನಕಾಲದಲ್ಲಿ ಒಂದು ಕೋಟಿ ನಿರಾಶ್ರಿತರು ಸಾಕಿದವರು ಈಗ ನಾವು ಹೆದರಬೇಕಾಗಿಲ್ಲ. ದಿಟ್ಟ ನಿಲುವು ಕಾರ್ಯಕ್ರಮ ಮಾತ್ರ ಹಾಕಬೇಕು. ಜನರು ಡಿಮಾರಲೈಸ್ ಆಗಿರಬಹುದು. ಮಂತ್ರಿಗಳು ಹೋದಂತ ಕಾಲದಲ್ಲಿ ಅವರಿಗೆ ಮಾರಲ್ ಕರೇಜ್ ತುಂಬಿದ್ದಾರೆ ಎಂದರೆ ತಪ್ಪಾಗಲಾರದು. ನಿರುದ್ಯೋಗ ಸಮಸ್ಯೆ ದೊಡ್ಡದು ಅವರ ಮಾತಿನಲ್ಲಿ ಹೇಳುವುದಾದರೆ, ಸುಮಾರು ೪೦ ಎಕರೆ ಜಮೀನು ಇರುವವನು ಕೂಡ ಕೂಲಿಗೆ ಬಂದಿದ್ದಾನೆಂದು ಹೇಳಿದ್ದಾರೆ. ಮಳೆಗಾಲದಲ್ಲಿ ತೋಟದಲ್ಲಿ, ಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದರು. ಈಗ ಅವರಿಗೆ ಕೆಲಸವಿಲ್ಲದೆ ಅವರೂ ಸಹ ಕೆಲಸ ಕೇಳುವುದು ಸಹಜ. ಮೊದಲೆ ನಿರುದ್ಯೋಗದಲ್ಲಿ ಲಕ್ಷಾಂತರ ಜನರು ಇದ್ದೆ ಇದ್ದಾರೆ. ಬರಗಾಲ ಪ್ರದೇಶದಲ್ಲಿ ಅಂದಾಜು ೫೦–೬೦ ಲಕ್ಷ ಜನರು ಇಂದು ವಲಸೆ ಹೋಗಿದ್ದ ಪಕ್ಷದಲ್ಲಿ ನಿರುದ್ಯೋಗ ದೊಡ್ಡದಾಗುವುದು ಏನೂ ಆಶ್ಚರ್ಯವಿಲ್ಲ. ಕಂಪ್ಲೈಂಟ್ ರಿಸೀವಿಂಗ್ ಸೆಂಟರ್ಸ್ ರಾ ಮೆಟಿರಿಯಲ್

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು

ಸ್ಟಾಕ್ಸ್ ಮತ್ತು ವಾಟರ್ ಹೈಪವರ್ ಕಮಿಟಿ, ಕಂಟ್ರಾಕ್ಟು ಸಿಸ್ಟಂ, ಫ್ಯಾಮಿನ್ ರಿಲೀಫ್ ಬೋರ್ಡ್, ಇವುಗಳ ಬಗ್ಗೆಯೂ ಸಹ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅವನ್ನು ನಮ್ಮ ಘನ ಸರ್ಕಾರದವರು ಜ್ಞಾಪಕದಲ್ಲಿ ಇಟ್ಟುಕೊಂಡು ''ಸೂಕ್ತ ಕಾರ್ಯಕ್ರಮ'' ತೆಗೆದುಕೊಳ್ಳಬೇಕು. ಕೆಲವು ಮಿತ್ರರು ಹೇಳಿದ ಹಾಗೆ We should not allow even a gallon of water to flow in to the Ocean. ಮೇಲೆ ಕೊಟ್ಟಿರುವ ಅಂಕಿ ಅಂಶಗಳನ್ನು ನೋಡಿದರೆ ನಾಲ್ಕು ಪ್ರದೇಶಗಳಲ್ಲಿ ಇರಬೇಕು. ತುಮಕೂರು ಜಿಲ್ಲೆಯಲ್ಲಿ ಆವರೇಜ್ ರೇನ್‌ಫಾಲ್ ಕಡಿಮೆ ಇದೆ. ನಮ್ಮ ದೌರ್ಭಾಗ್ಯಕ್ಕೆ ನಮ್ಮ ಸಮಸ್ಯೆಗಳು ಬಹು ಬೃಹದಾಕಾರವಾಗಿದೆ ಎಂದು ನಾವು ಹೇಳಲು ಹಿಂದೆಗೆಯಬೇಕಾಗಿಲ್ಲ. ನಮ್ಮ ಸರ್ಕಾರದಲ್ಲಿ ನಮಗೆ ಪ್ರೀತಿ ಇದೆ, ವಿಶ್ವಾಸವಿದೆ. ನಮ್ಮ ಜನ ವಲಸೆ ಹೋಗುವ ಕಾಲದಲ್ಲಿ ಅವರ ಕಾಲಿಗೆ ಚುಚ್ಚುವ ಮುಳ್ಳು ಹೃದಯದಲ್ಲಿ ಮುಳ್ಳು ಚುಚ್ಚಿಕೊಂಡಂತಾಗುತ್ತದೆ ಆದುದರಿಂದ ಜನರು ಡಿಮಾರಲೈಸ್ ಆಗಬಾರದು. ಅವರಿಗೆ ನೈತಿಕ ಮಟ್ಟವನ್ನು ತುಂಬಬೇಕು ಅದರ ಜೊತೆಗೆ ನಮಗೆ ಇರತಕ್ಕ ಮಿಲಿಟರಿ ಮತ್ತು ಇತರೆ ಟ್ರಾನ್ಸ್‌ಪೋರ್ಟೇಷನ್ facility ಏನು ಇದೆ ಅದನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು. ನಾಲೆಗಳಲ್ಲಿ ನೀರು ಇದ್ದರೆ ದನಗಳಿಗೆ ಆಹಾರ ಬೆಳೆಸಿಕೊಳ್ಳಬಹುದು. ಇಷ್ಟನ್ನು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. "ಜೈಹಿಂದ್".

ಶ್ರೀ ಟಿ. ಆರ್. ಶಾಮಣ್ಣ (ಕೋಟೆ) : ಮಾನ್ಯ ಸಭಾಧ್ಯಕ್ಷಣಿಯವರೇ. ಈಗ ಕೆಲವು ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಶುರು ಮಾಡುತ್ತೇನೆ. ಇದು ಬರಗಾಲಕ್ಕೆ ಒಳಪಟ್ಟಂತ ಪ್ರದೇಶದ ಜನಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡಬೇಕೆಂದು ಇಷ್ಟ ಪಡಲಿಲ್ಲ. ಆದರೆ ಶ್ರೀಮಾನ್ ಆಳ್ವಾಗೌಡರವರು ಕೊಟ್ಟಿರತಕ್ಕ ಒಂದು ಅತ್ಯುತ್ತಮವಾದಂತಹ ಒಂದು ರಿಪೋರ್ಟನ್ನು ಪರಿಶೀಲನೆ ಮಾಡುವಾಗ ಪೇಜ್ ೭೧ರಲ್ಲಿ ಬೆಂಗಳೂರಿಗೆ ಸಂಬಂಧಪಟ್ಟ ಹಾಗೆ ಒಂದು ಸೂಚನೆ ಕೊಟ್ಟಿದ್ದಾರೆ. ಆದುದರಿಂದ ನಾನು ಮಾತನಾಡಬೇಕಾಯಿತು " Mysore did little beyond concentrating attention on the water needs of the over urbanised city of Bangalore." ಎಂದು ರೆಫರೆನ್ಸ್ ಮಾಡಿದ್ದಾರೆ. ಆದುದರಿಂದ ಬೆಂಗಳೂರು ನಗರಕ್ಕೆ ರಾಜ್ಯ ಸರ್ಕಾರದಿಂದ ಯಾವ ವಿಧವಾದಂತಹ ಹೆಚ್ಚಿನ ಒಂದು ಸಹಾಯವು ದೊರೆಯುತ್ತಾ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳಬಹುದು. ಬೆಂಗಳೂರು ನಗರ ವಾಟರ್‌ಸಪ್ಲೈಗೆ ಕೊಡತಕ್ಕ ದುಡ್ಡು ಕಾರ್ಪೋರೇಷನ್ ಮತ್ತು ಜನಗಳ ದುಡ್ಡು ಮತ್ತು ಬೆಂಗಳೂರು ಈ ರೀತಿ ಬೆಳೆಯದೆ ಹೋಗಿದ್ದ ಪಕ್ಷದಲ್ಲಿ ಮೊದಲು ಸರಬರಾಜು ಆಗುತ್ತಾ ಇದ್ದಂಥ ನೀರೇ ಸಾಕಾಗುತ್ತಿತ್ತು. ಬೆಂಗಳೂರು ಬೃಹದಾಕಾರವಾಗಿ ಬೆಳೆದು ಇವತ್ತು ಶ್ರೀಮಾನ್ ಆಳ್ವಾಗೌಡರವರು ಕುಡಿಯತಕ್ಕ ನೀರು ಮತ್ತು ಇತರ ಸದಸ್ಯರು ಕುಡಿಯತಕ್ಕ ನೀರನ್ನು ಹೆಚ್ಚಿಗೆ ಪ್ರಮಾಣದಲ್ಲಿ ಒದಗಿಸಲು ಒಂದು ದೊಡ್ಡ ಯೋಜನೆಯನ್ನೇ ಮಾಡಿ ನೀರನ್ನು ಒದಗಿಸಬೇಕಾಗಿ ಬಂತು ಆದುದರಿಂದ ಬೆಂಗಳೂರು ನಗರಕ್ಕೆ ರಾಜ್ಯ ಸರ್ಕಾರದಿಂದ ಹೆಚ್ಚಿಗೆ ದುಡ್ಡು ಖರ್ಚು ಆಗುತ್ತಾ ಇಲ್ಲಾ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನೀವು ಬೇರೆಕಡೆ ಖರ್ಚು ಮಾಡುತ್ತೇವೆಂದು ಹೇಳಿದರೆ ಅದಕ್ಕೆ ನಾವು ಏನೂ ಅಡ್ಡಿ ಬರುವುದಿಲ್ಲ ಆದಕ್ಕೆ ಕುಮ್ಮಕ್ಕು ಕೊಡುವುದಕ್ಕೆ ಸಿದ್ಧನಿದ್ದೇನೆ. ಮಾನ್ಯ ಸದಸ್ಯರು ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ ಟೀಕೆಗಳನ್ನು ಮಾಡಿದ್ದಾರೆ. ಒಂದು ವಿಚಾರ ಶ್ರೀಮಾನ್ ಆಳ್ವಾಗೌಡರವರು ಹೇಳಿದ ಹಾಗೆ ಪರಿಸ್ಥಿತಿ ಹದಗೆಟ್ಟಿದೆ, ಹಾಗೆ ಅದನ್ನು ಬಿಟ್ಟ ಪಕ್ಷದಲ್ಲಿ ದೊಡ್ಡ ವಿಪತ್ತು ನಮಗೆ ಬರುತ್ತದೆ ಎಂದು ಹೇಳಿ ಸಾಕಾದಷ್ಟು ಅಂಕಿಅಂಶಗಳನ್ನು ಸಲಹೆಗಳ ಮುಖಾಂತರ ಅವರು ಕೊಟ್ಟಿದ್ದಾರೆ. ಬಾಂಗ್ಲಾದಿಂದ ನಮ್ಮ ಭಾರತಕ್ಕೆ ರೆಫ್ಯೂಜೀಸ್ ಬಂದಾಗ ನೊಂದ ಜನರಿಗೆ ಸಾಕಾದಷ್ಟು ಸಹಾಯ ಮಾಡಬೇಕು ಎನ್ನುವ ಉತ್ಸಾಹ ಇತ್ತು. ಸರ್ಕಾರದವರು ಮತ್ತು ಸಾರ್ವಜನಿಕರು ಬೇಕಾದಷ್ಟು ಸಹಾಯ ಮಾಡುವುದಕ್ಕೆ ಸಿದ್ಧವಾಗಿದ್ದರು ಅದಕ್ಕಿಂತ ಹೆಚ್ಚಿನ ಕಷ್ಟ ಪರಿಸ್ಥಿತಿಯಲ್ಲಿ ಇದ್ದಂತಹ ನಮ್ಮ ರಾಜ್ಯದ ಕೆಲವು ಭಾಗದಲ್ಲಿ ಇರತಕ್ಕವರಿಗೆ ಈಗ ಜನಗಳು ಮತ್ತು ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾ ಇಲ್ಲ ಎನ್ನುವ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಕೆಲಸಗಳು ನಡೆಯುತ್ತಾ ಇವೆ ಆದರೆ ಹೆಚ್ಚಿನ ಜನಗಳಿಗೆ ಸಹಾಯವಾಗುವ ರೀತಿಯಲ್ಲಿ ನಡೆಯುತ್ತಾ ಇಲ್ಲ ಎನ್ನುವುದು ರಿಪೋರ್ಟಿನಲ್ಲಿ ಗೊತ್ತಾಗಿದೆ. ಮುಖ್ಯವಾಗಿ ಬೇಕಾಗಿರುವುದು ಹಣದ ಸಹಾಯ ಮೊದಲನೆಯದಾಗಿ ಸಾಧ್ಯವಾದಷ್ಟು ಕೂಡ ಇದರ ಬಗ್ಗೆ ಕೇಂದ್ರದ ಗಮನವನ್ನು ಸೆಳೆದು ಹೆಚ್ಚಿನ ಹಣವನ್ನು ಕೇಂದ್ರದಿಂದ ತೆಗೆದುಕೊಳ್ಳಬೇಕು. ಎರಡನೆಯದಾಗಿ ರಾಜ್ಯ ಸರ್ಕಾರದಲ್ಲಿ ಖರ್ಚು ಮಾಡುತ್ತಾ ಇರತಕ್ಕ ದುಡ್ಡನ್ನು ಸಾಕಾದಷ್ಟು ಮಿತವ್ಯಯಮಾಡಿ ಹೆಚ್ಚಿನ ಭಾಗದ ಹಣವನ್ನು ಕಷ್ಟಕ್ಕೆ ಸಿಕ್ಕಿರತಕ್ಕ ಜನಗಳಿಗೆ ಖರ್ಚು ಮಾಡುವುದಕ್ಕೆ ಸಾಕಾದಷ್ಟು ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡಬೇಕು. ಮೂರನೆಯದಾಗಿ ನಮ್ಮ ರಾಜ್ಯದ ನಾನಾ ಹುದ್ದೆಯಲ್ಲಿ ಇರತಕ್ಕ ಜನಗಳಿಂದ ಹಣ ಸಂಗ್ರಹಣೆ ಮಾಡಿ ಸಾಧ್ಯವಾದಷ್ಟು ಹಣವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಆದಕ್ಕೆ

ಮೊದಲನೆಯದಾಗಿ ಅದಕ್ಕೆ ಆದರ್ಶ ಆಗುವ ರೀತಿಯಲ್ಲಿ ಎಂ.ಎಲ್.ಎ. ಮತ್ತು ಮಂತ್ರಿಗಳು ಎಲ್ಲಾ ಸೇರಿ ತೀರ್ಮಾನ ಮಾಡಿ ಬರಗಾಲ ಪರಿಸ್ಥಿತಿ ಮುಗಿಯುವ ತನಕ ನಮ್ಮ ಎಲ್ಲರ ಆದಾಯದಲ್ಲಿ ಮತ್ತು ನಮಗೆ ಕೊಡತಕ್ಕ ಭತ್ಯದಲ್ಲಿ ಒಂದು ದಿನದ ಭತ್ಯವನ್ನು ಕ್ಷಾಮಪರಿಹಾರಕ್ಕೆ ಖರ್ಚು ಮಾಡುತ್ತೇವೆ ಎಂದು ತೀರ್ಮಾನ ಮಾಡಿದರೆ ಉತ್ತಮವಾದುದು. ಅದಕ್ಕಾಗಿ ನನಗೆ ಬರತಕ್ಕ ವರಮಾನದಲ್ಲಿ ಶೇಕಡ ೫ ಭಾಗವನ್ನು ಬರಗಾಲ ಹೋಗುವ ತನಕ ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ಆದುದರಿಂದ ಇದರ ಬಗ್ಗೆ ಸಾಕಾದಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕು. ಕೈಗಾರಿಕಾ ಸಂಸ್ಥೆಗಳು, ಸರ್ಕಾರಿ ಅಧಿಕಾರಿಗಳು, ವ್ಯಾಪಾರಿಗಳು ಎಲ್ಲರಿಂದಲೂ ಸಾಕಾದಷ್ಟು ಹಣವನ್ನು ವಸೂಲ್ ಮಾಡಿ ಸರಿಯಾದ ರೀತಿಯಲ್ಲಿ ವ್ಯಯ ಮಾಡುವುದಕ್ಕೆ, ತಕ್ಕ ಏರ್ಪಾಡನ್ನು ಮಾಡಿಕೊಳ್ಳಬೇಕು.

ದನಗಳು ಸಾಯುತ್ತಿವೆ, ಕಷ್ಟಪಡುತ್ತಿವೆ. ಇವುಗಳ ಬಗ್ಗೆ ಸರ್ಕಾರದವರು ಸಾಕಾದಷ್ಟು ಆಸಕ್ತಿ ವಹಿಸಬೇಕು. ಅವರ ಮೇಲೆ ದೊಡ್ಡ ಜವಾಬ್ದಾರಿ ಇದೆ, ಮೊದಲು ಜೋಡೆತ್ತಿನ ಗುರುತು ಇಟ್ಟುಕೊಂಡು ವೋಟನ್ನು ಪಡೆಯುತ್ತಿದ್ದರು. ಈಗ ಹಸು ಮತ್ತು ಕರು ಗುರುತನ್ನು ಇಟ್ಟುಕೊಂಡು ವೋಟನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಆ ದನಗಳ ಕಡೆಗೆ ಸರ್ಕಾರದವರ ಗಮನ ಹೆಚ್ಚಾಗಿ ಹೋಗುತ್ತಿಲ್ಲ. ದನಕರುಗಳನ್ನು ಸಾಕತಕ್ಕ ಜವಾಬ್ದಾರಿ ಹೆಚ್ಚು. ಅವುಗಳಿಗೆ ಮೇವು ಮತ್ತು ನೀರನ್ನು ಒದಗಿಸುವುದು ಕಷ್ಟ. ಆದ್ದರಿಂದ ಹೆಚ್ಚಿನ ದನಗಳನ್ನು ಹುಲ್ಲು ಮತ್ತು ನೀರು ಇರತಕ್ಕ ಜಾಗಗಳಿಗೆ ಸಾಗಿಸುವುದಕ್ಕೆ ಏರ್ಪಾಡು ಮಾಡುವುದಕ್ಕೆ ಸಾಧ್ಯವಿದೆಯೋ ಎನ್ನುವುದರ ಬಗ್ಗೆ ಸ್ವಲ್ಪ ಯೋಚನೆ ಮಾಡುವುದು ಒಳ್ಳೆಯದು. ಹೆಚ್ಚು ಕಾಲ ನೀರು ಮತ್ತು ಮೇವು ಒದಗಿಸುವುದು ಬಹಳ ಕಷ್ಟವಾಗಬಹುದು. ಸಾಧ್ಯವಾದರೆ ದನಗಳನ್ನು ಹುಲ್ಲು ನೀರು ಇರುವ ಕಡೆಗೆ ಸಾಗಿಸಲು ವ್ಯವಸ್ಥೆ ಮಾಡಬಹುದು. ಹಾಗಿಲ್ಲದೆ ಹೋದರೆ ದನಗಳನ್ನು ಕೊಂಡು ಮೇವುಗಳು ಇರುವ ಕಡೆಗೆ ಅವುಗಳನ್ನು ಕಳುಹಿಸಿ, ಬರಗಾಲ ಹೋದ ಮೇಲೆ ಆ ಜನರಿಗೆ ಹಣವನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಿಕೊಡುವುದು ಉತ್ತಮವೆಂದು ಕಾಣುತ್ತದೆ. ಬರಗಾಲ ಕಾಮಗಾರಿಗಳು ಸರಿಯಾಗಿ ನಡೆಯುವ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ ಒಂದು ಸಮಿತಿಯನ್ನೂ ರಾಜ್ಯ ಮಟ್ಟದಲ್ಲಿ ಒಂದು ಹೈ ಪವರ್ ಕಮಿಟಿಯನ್ನೂ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ನೇಮಂಗಲ್).—ಮಾನ್ಯ ಅಧ್ಯಕ್ಷರೇ, ಈ ಸದನದ ಮಾನ್ಯ ಸದಸ್ಯರಾದ ಆಮುರ್ಗಂ ಅವರು ವಿವರವಾದ ಒಂದು ವರದಿಯಲ್ಲಿ ನಮ್ಮ ರಾಜ್ಯದಲ್ಲಿರುವ ಭೀಕರವಾದ ಪರಿಸ್ಥಿತಿಯ ಚಿತ್ರವನ್ನು ಕೊಟ್ಟಿದ್ದಾರೆ. ಅದಕ್ಕೆ ಮೊದಲನೆಯದಾಗಿ ನಾನು ಅವರಿಗೆ ಅಭಿನಂದಿಸಬೇಕಾದ್ದು ನನ್ನ ಕರ್ತವ್ಯ. ಸಭೆಯ ಕಾರ್ಯಕಲಾಪಗಳು ಎರಡು ಮೂರು ತಿಂಗಳ ಹಿಂದೆ ನಡೆಯುತ್ತಿರುವಾಗ ನಾನು ಮೊದಲನೆಯದಾಗಿ ನಾನು ಮಾತನಾಡುತ್ತ ಇನ್ನು ಮುಂದೆ ಬರತಕ್ಕ ದಿನಗಳು ಎಷ್ಟು ಭೀಕರವಾಗಿರುತ್ತವೆ ಮತ್ತು ನಮ್ಮ ರಾಜ್ಯದಲ್ಲಿ, ಪ್ರಾಮುಖ್ಯವಾಗಿ ಕೋಲಾರ ಜಿಲ್ಲೆಯಲ್ಲಿ ಆ ಹೊತ್ತಿನ ಪರಿಸ್ಥಿತಿ ಏನಿತ್ತು ಎನ್ನುವುದರ ಬಗ್ಗೆ ಗಮನವನ್ನ ಸೆಳೆಯುವ ದೃಷ್ಟಿಯಿಂದ ಕತ್ತಾಳಿ ಗಡ್ಡೆಯನ್ನು ಪ್ರದರ್ಶನ ಮಾಡಿದ್ದು ತಮ್ಮೆಲ್ಲರಿಗೂ ಕೂಡ ಜ್ಞಾಪಕ ಮಾಡಿಕೊಡುತ್ತೇನೆ. ಪರಿಸ್ಥಿತಿ ಇನ್ನೂ ಭೀಕರವಾಗುತ್ತದೆ ಮತ್ತು ಬಹಳ ವಿಕೋಪಕ್ಕೆ ಹೋಗುತ್ತದೆ. ಸರ್ಕಾರ ಅದರ ಬಗ್ಗೆ ತೀವ್ರಗತಿಯಿಂದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಎಚ್ಚರಿಕೆ ಕೊಟ್ಟಿದ್ದೆ. ಆದರೂ ಕೂಡ ಪ್ರಯೋಜನವಾಗಲಿಲ್ಲ. ಈ ಹೊತ್ತಿನ ದಿವಸ ನಮ್ಮ ರಾಜ್ಯದ ೩೨ ಲಕ್ಷ ಜನ ಬಡತನದಿಂದ ಮತ್ತು ಹೊಟ್ಟೆಗೆ ಅನ್ನವಿಲ್ಲದೆ, ರೊಟ್ಟಿ ಇಲ್ಲದೆ ಬಳಲುತ್ತ ಇದ್ದಾರೆ. ೧೨ ಲಕ್ಷ ಗೋವುಗಳು ಸಾಯುತ್ತಿರತಕ್ಕ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉಂಟಾಗಿದೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರತಕ್ಕ ಪಕ್ಷ, ಇಂದಿರಾ ಕಾಂಗ್ರೆಸ್ ಮತ್ತು ಸಿಂಡಿಕೇಟ್ ಕಾಂಗ್ರೆಸ್ ಎರಡೂ ಪಕ್ಷಗಳು ಅದು ತಮ್ಮ ಸ್ವಂತ ವಿಷಯವೆಂದು ಭಾವಿಸಿ ಒಬ್ಬರು ಹೇಳಿಕೆಯನ್ನು ಕೊಟ್ಟರೆ ಇನ್ನೊಬ್ಬರು ಇನ್ನೊಂದು ಹೇಳಿಕೆಯನ್ನು ಕೊಡುತ್ತ ಇದ್ದಾರೆ. ನಮ್ಮ ರಾಜ್ಯದಲ್ಲಿ ಈಗಿನ ದುಸ್ಥಿತಿ ಬರಲು ಕಾರಣವೇನೆಂದರೆ ೨೫ ವರ್ಷದಿಂದ ನಮ್ಮ ರಾಜ್ಯದ ದುರದೃಷ್ಟದಿಂದ ಯಾರ ಕೈಯಲ್ಲಿ ಅಧಿಕಾರ ಇರಬೇಕಾಗಿತ್ತೋ ಅವರ ಕೈಯಲ್ಲಿ ಅಧಿಕಾರವಿಲ್ಲದೆ ಕಾಂಗ್ರೆಸ್ಸಿನ ಪ್ರಭಾವದಿಂದ ಅವರ ಡಿಫೆಕ್ಟಿವ್ ಪ್ಲಾನಿಂಗ್‌ನಿಂದ ೨೫ ವರ್ಷವಾದರೂ ಕೂಡ ಈ ಭಾಗದ ಜನರಿಗೆ ನೇರವಾದ ಸೌಕರ್ಯವನ್ನು ಒದಗಿಸುವುದಾಗಲೀ, ಕ್ಷಾಮಕ್ಕೆ ತುತ್ತಾಗಿರತಕ್ಕ ಜಿಲ್ಲೆಗಳಲ್ಲಿ ಕ್ಷಾಮ ಬರದಂತೆ ಮಾಡುವುದಕ್ಕಾಗಲೀ ಆಗಿಲ್ಲ ಎಂದು ಹೇಳಬೇಕಾಗಿದೆ.

ಮಾನ್ಯ ಸದಸ್ಯರಾದ ಆಮುರ್ಗಂ ಅವರು ತಮ್ಮ ವರದಿಯ ೬೦ನೇ ಪುಟದಲ್ಲಿ ಫೈನಾನ್ಸ್ ಬಗ್ಗೆ ಬಹಳ ವಿವರವಾಗಿ ಹೇಳಿದ್ದಾರೆ. ಇದರಲ್ಲಿ ನಮ್ಮ ರಾಜ್ಯಕ್ಕೆ ಸ್ಟಡಿ ಟೀಂ ಬಂದಾಗ ೧೭.೫ ಕೋಟಿ ರೂಪಾಯಿ ಬೇಕಾಗುತ್ತದೆ ಎಂದು ಕೂಡ ತಿಳಿಸಿದ್ದಾರೆಂದು ಹೇಳಿದ್ದಾರೆ. ಅದರಲ್ಲಿ ಕೇಂದ್ರ ಸರ್ಕಾರ ಕೇವಲ ೭.೫ ಕೋಟಿ ರೂಪಾಯಿಗಳನ್ನು ಈ ರಾಜ್ಯಕ್ಕೆ ಕೊಟ್ಟಿದ್ದು ರಾಜ್ಯ ಸರ್ಕಾರ ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಸಹ ಸುಮಾರು ೩೨ ಲಕ್ಷ ಜನ ಬವಣೆಗೆ ತುತ್ತಾಗಿದ್ದರೂ ಸಹ ಕೇವಲ ೯ ಪರ್ಸೆಂಟ್

(ಶ್ರೀ ಸಿ. ಬೈರೇಗೌಡ)

ಜನರಿಗೆ ಇದರಿಂದ ಸ್ವಲ್ಪ ಅನುಕೂಲವಾಗಿದೆ ಎನ್ನುವುದನ್ನು ಸಭೆ ಮರೆಯಬಾರದು. ಉಳಿದ ೯೫ ಪರ್ಸೆಂಟ್ ಜನರ ಗತಿ ಏನಾಗಬೇಕು ಎನ್ನುವುದನ್ನು ನಾವು ಯೋಚನೆ ಮಾಡಬೇಕು. ಜವಾಬ್ದಾರಿ ಇರತಕ್ಕ ಸರ್ಕಾರ ಇರುವಾಗ ಉಳಿದ ೯೫ ಪರ್ಸೆಂಟ್ ಜನರಿಗೂ ಬೇಕಾಗಿರತಕ್ಕ ಸೌಕರ್ಯಗಳನ್ನು ಮಾಡಿ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಅಧ್ಯಕ್ಷರೇ, ರಾಜ್ಯದಲ್ಲಿ ಬವಣೆಗೆ ತುತ್ತಾಗಿರತಕ್ಕ ಜನಗಳಿಗೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ಹಣವನ್ನು ಒದಗಿಸುವುದಕ್ಕೆ ಸರ್ಕಾರದ ಕೈಯಲ್ಲಿ ಆಗುತ್ತಿಲ್ಲ. ಆದರೆ ನಮ್ಮ ದೇಶದಲ್ಲಿರುವ ಬಂಡವಾಳ ಸ್ಥರಿಗೆ ಲಕ್ಷಾಂತರ ರೂಪಾಯಿ, ಕೋಟ್ಯಂತರ ರೂಪಾಯಿ ಕೊಡುತ್ತಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ ಜೀವ ವಿಮಾ ಕಂಪೆನಿಗಳನ್ನು ರಾಷ್ಟ್ರೀಕರಣ ಮಾಡಿದಾಗ ಮೂರು ಕೋಟಿ ರೂಪಾಯಿ ಪರಿಹಾರದ್ರವ್ಯ ಕೊಡಬೇಕು ಎಂದು ನಿಗದಿ ಮಾಡಿದ್ದುದನ್ನು ೩೮ ಕೋಟಿ ರೂಪಾಯಿ ಮಾಡಿದರು. ನಮ್ಮ ದೇಶದಲ್ಲಿ ಒಕ್ಕಳ ಒಡೆಯರಾಗಿರುವವರಿದ್ದಾರೆ. ಹಿಂದೆ ರಾಜಮಹಾರಾಜರುಗಳಾಗಿದ್ದವರಿಗೆ ಹತ್ತಾರೆ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಹೊಟ್ಟೆಗೆ ಇಲ್ಲದೆ ಇರತಕ್ಕ ಪರಿಸ್ಥಿತಿ ಇರುವಾಗ ಇದನ್ನೆಲ್ಲ ಗಮನಿಸದೆ ಹೋದರೆ ನಾವು ಈ ಸರ್ಕಾರವನ್ನು ಯಾವರೀತಿ ನಂಬಿ ಕುಳಿತುಕೊಳ್ಳಬೇಕೋ ಗೊತ್ತಾಗುತ್ತಿಲ್ಲ. ನಮ್ಮ ರಾಜ್ಯದಲ್ಲಿ ೩೭ ಲಕ್ಷ ಜನ ಬವಣೆಗೆ ತುತ್ತಾಗಿರುವಾಗ ಕೇವಲ ೫ ಪರ್ಸೆಂಟ್ ಜನರಿಗೆ ಸಹಾಯವನ್ನು ಒದಗಿಸುವುದು ಸರಿಯೇ ಎನ್ನುವ ಪ್ರಶ್ನೆ ಬರುತ್ತದೆ.

ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಮಾನ್ಯ ಸಭಾಧ್ಯಕ್ಷಣಿಯವರೇ, ಏಕಸದಸ್ಯ ಆಯೋಗ ಸದಸ್ಯರಾದ ಶ್ರೀ ಆರ್ಮುಗಂ ಅವರು ತಮ್ಮ ಒಂದು ವರದಿಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅವರು ನಮ್ಮ ಮಂತ್ರಿಮಂಡಲ ಹೆಚ್ಚು ಕೆಲಸ ಮಾಡಿಲ್ಲ ಎಂದು ಟೀಕೆ ಮಾಡಿದ್ದಾರೆ. ಆದರೆ ಅದು ಔದಾರ್ಯರಹಿತವಾದುದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗಿನ ಮಂತ್ರಿಮಂಡಲ ಅಧಿಕಾರಕ್ಕೆ ಬಂದು ಕೇವಲ ಏಳೆಂಟು ತಿಂಗಳಾಯಿತು. ಇವರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ನಮ್ಮ ಸರ್ಕಾರಕ್ಕೆ ಸುಮಾರು ೫೦೦ ಕೋಟಿ ರೂಪಾಯಿ ಸಾಲ ಮತ್ತು ೭೦-೮೦ ಕೋಟಿ ರೂಪಾಯಿಗಳ ಓವರ್‌ಡ್ರಾಫ್ಟ್ ಇತ್ತು. ಅಲ್ಲದೆ ಜುಲೈ ತಿಂಗಳ ಮಧ್ಯ ಭಾಗದವರೆಗೂ ಮುಂಗಾರು ಮಳೆ ಚೆನ್ನಾಗಿ ಬಂದರೂ ಸಹ ಆ ಮೇಲೆ ಸೆಪ್ಟೆಂಬರ್ ೨೨ ತಾರೀಖಿನವರೆಗೆ ನಮ್ಮ ಹಳೇ ಮೈಸೂರಿನ ಕೆಲವು ಭಾಗ ಗಳಲ್ಲಿಯೂ ಮಳೆ ಬಾರದೆ ಅಭಾವ ಪರಿಸ್ಥಿತಿ ಬಂತು. ಅಂಥ ಕಾಲದಲ್ಲಿ ಅವರು ದಿಟ್ಟತನದಿಂದ ಅಭಾವ ಪರಿಸ್ಥಿತಿ ಇರುವ ಕಡೆ ಹೆಚ್ಚಿನ ಕೆಲಸವನ್ನು ಮಾಡುವುದಕ್ಕೆ ಪ್ರಾರಂಭ ಮಾಡಿದರು. ಆ ಒಂದು ವಿಚಾರ ವನ್ನು ಶ್ರೀ ಆರ್ಮುಗಂ ಅವರು ಗಮನಕ್ಕೆ ತೆಗೆದುಕೊಳ್ಳದೆ ಈ ಸರ್ಕಾರ ಅಭಾವ ಪೀಡಿತ ಪ್ರದೇಶಗಳಲ್ಲಿ ಏನೊಂದು ಮಾಡಿಲ್ಲ ಎಂದು ಹೇಳಿದ್ದಾರೆ. ನಮ್ಮ ಸರ್ಕಾರದವರು ಶಕ್ತಿಮೀರಿ ಕೆಲಸ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು.

10 A.M.

ನಮ್ಮ ಹಾಸನ ಜಿಲ್ಲೆಯ ಕೆಲವು ಭಾಗದಲ್ಲೂ ಕೂಡ ಅಭಾವ ಪರಿಸ್ಥಿತಿ ಇತ್ತು. ಆ ಪ್ರದೇಶದಲ್ಲಿ ಸರ್ಕಾರದವರು ಕೂಡಲೆ ೪೩ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಜನರಿಗೆ ಕೆಲಸ ಕೊಡುವುದರ ಮೂಲಕ ರಿಲೀಫ್ ಕಾಮಗಾರಿಗಳನ್ನು ನಡೆಸಿ ಜನರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ನಮ್ಮ ಮಂತ್ರಿ ಮಂಡಲ ದಕ್ಷತೆಯಿಂದ ಕ್ಷಾಮಪರಿಸ್ಥಿತಿಯನ್ನು ಎದುರಿಸಿದೆ, ತನ್ನ ಕೈಲಾದ ಎಲ್ಲಾ ಪ್ರಯತ್ನಗಳನ್ನು ಮಾಡಿದೆ ಎನ್ನುವುದಕ್ಕೆ ಒಂದು ನಿದರ್ಶನ ಎಂದರೆ ನಮ್ಮ ಸರ್ಕಾರದವರು ವಿರೋಧ ಪಕ್ಷಕ್ಕೆ ಸೇರಿದ ಶ್ರೀ ಆರ್ಮುಗಂರವರ ಒಂದು ಏಕ ಸದಸ್ಯ ಆಯೋಗವನ್ನು ರಚನೆಮಾಡಿದ್ದೇ ಒಂದು ಅದಕ್ಕೆ ಒಂದು ಪ್ರತ್ಯಕ್ಷ ನಿದರ್ಶನವಾಗಿದೆ ; ಎಂದು ಹೇಳಿದರೆ ತಪ್ಪಾಗಲಾರದು. ಉತ್ತರ ಕರ್ನಾಟಕದಲ್ಲಿ ಅಲ್ಲಿ ಇರತಕ್ಕ ಅಭಾವ ಪರಿಸ್ಥಿತಿ ಅಲ್ಲಿ ಈಗತಾನೆ ಹೊಸದಾಗಿ ಏನೂ ಬಂದುದಲ್ಲ. ಅದಕ್ಕೆ ನಮ್ಮ ಸರ್ಕಾರ ಹೊಣೆಯೂ ಅಲ್ಲ. ಹಿಂದಿದ್ದ ಸರ್ಕಾರಗಳೆಲ್ಲಾ ಅಲ್ಲಿ ಏನೂ ಕೆಲಸಗಳನ್ನು ಮಾಡದಿರುವುದರಿಂದಲೇ ಈ ದಿವಸ ಅಲ್ಲಿ ಈ ಭೀಕರ ಕ್ಷಾಮವುಂಟಾಗಿದೆ ಎನ್ನಬಹುದು. ಅಲ್ಲಿ ಅನೇಕ ದೊಡ್ಡ ದೊಡ್ಡ ನದಿಗಳು—ಕೃಷ್ಣಾ, ಮಲಪ್ರಭಾ, ಘಟಪ್ರಭಾ, ಭೀಮಾ ಇತ್ಯಾದಿ ನದಿಗಳು ಹರಿಯುತ್ತಿದ್ದರೂ ಅಲ್ಲಿ ಹಿಂದಿದ್ದ ಸರ್ಕಾರಗಳು ನೀರಾವರಿ ಕಾಮಗಾರಿಗಳಿಗೆ ಆದ್ಯತೆ ಕೊಡದೆ ಇದ್ದುದರಿಂದ ಇಂದು ಅಲ್ಲಿ ಕ್ಷಾಮ ಬರುವುದಕ್ಕೆ ಕಾರಣವಾಯಿತು. ಹಾಗೆ ಹಿಂದಿದ್ದ ಸರ್ಕಾರಗಳೇನು ತಪ್ಪನ್ನು ಮಾಡಿವೆ ಅದನ್ನು ನಮ್ಮ ಸರ್ಕಾರದ ಮೇಲೆ ಈಗ

ಪೂರೈಸುವುದಕ್ಕೆ ವಿರೋಧ ಪಕ್ಷದವರು ಪ್ರಯತ್ನ ಮಾಡುತ್ತಿರುವುದು ಸರಿಯಾದ್ದಲ್ಲ. ಉತ್ತರ ಕರ್ನಾಟಕದಲ್ಲಿ ಜನರಿಗೆ ಈ ದಿವಸ ಬಹಳ ಕಷ್ಟ ಬಂದಿದೆ ಅನ್ನುವುದು ನಿಜ. ಅದನ್ನು ಯಾರೂ ಇಲ್ಲವೆನ್ನುವುದಿಲ್ಲ. ಅದಕ್ಕೆ ನಮ್ಮ ಸರ್ಕಾರದವರು ಕೇಂದ್ರದಿಂದ ಹೆಚ್ಚಿನ ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಆದರೆ ನಮ್ಮ ಪಕ್ಕದ ದೇಶವಾದ ಮಹಾರಾಷ್ಟ್ರದವರು ಕೇಂದ್ರದಲ್ಲಿ ತಮ್ಮ ಪ್ರಭಾವವನ್ನು ಬೀರಿ ಇಲ್ಲಿಯವರೆಗಾಗಲೇ ೮೬ ಕೋಟಿ ಸಹಾಯವನ್ನು ಪಡೆದು ಅವರಿನ್ನೂ ೧೩೬ ಕೋಟಿ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಆದರೆ ನಾಳೆ ಇಲ್ಲಿಗೂ ಒಂದು ಸ್ಟಡೀ ಟೀಮು ಬರುತ್ತೆ. ಆ ಕಾಲಕ್ಕೆ ನಮ್ಮ ಸರ್ಕಾರದವರೂ ಕೂಡ ಈ ಸದಸ್ಯರ ಪ್ರಾರ್ಥನೆಗಳನ್ನೂ ಅವರ ಮುಂದಿಟ್ಟು ಹೆಚ್ಚಿನ ಹಣವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಆದರೆ ಈ ದಿವಸ ಆಬರಗಾಲಕ್ಕೆ ತುತ್ತಾಗಿರತಕ್ಕ ಜನರು ನಾನಾ ಕಡೆಗೆ ವಲಸೆ ಹೋಗುತ್ತಿದ್ದಾರೆ. ಅಲ್ಲಿ ದನಗಳಿಗೂ ಕೂಡ ಮೇವು ಸಿಕ್ಕುತ್ತಿಲ್ಲ. ಆದಕ್ಕಾಗಿ ನನ್ನ ಒಂದು ಸಲಹೆ ಸರ್ಕಾರಕ್ಕೆ ಕೊಡುವುದೇನೆಂದರೆ ಅಲ್ಲಿ ಕಷ್ಟಗೀಡಾಗಿರತಕ್ಕ ಜನರಲ್ಲಿ ಒಂದು ಸಾವಿರ ಜನರನ್ನು ನಮ್ಮ ಮಲೆನಾಡಿಗೆ ಕಳುಹಿಸಿಕೊಟ್ಟರೆ ನಾವು ಕೆಲವು ಕಾಲ ಅಲ್ಲಿ ಮಳೆಬೆಳೆಗಳಾಗುವವರೆಗೆ ಅವರಿಗೆ ಮತ್ತು ಜಾನುವಾರುಗಳಿಗೆ ಅಗತ್ಯವಾದ ಹುಲ್ಲನ್ನೂ ಜನರಿಗೆ ಜೀವನಕ್ಕೆ ಅಗತ್ಯವಾದುದನ್ನೆಲ್ಲಾ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ನಮ್ಮ ಸಕಲೇಶಪುರ ತಾಲ್ಲೂಕಿಗೆ ಒಂದು ಸಾವಿರ ಜನರನ್ನು ಸರ್ಕಾರದವರು ಕಳುಹಿಸುವುದಕ್ಕೆ ಏರ್ಪಾಡನ್ನು ಮಾಡಬಹುದೆಂದು ನಾನು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ನಾನು ಆಗಲೇ ಹೇಳಿದಂತೆ ಕೇಂದ್ರದಿಂದಲೂ ಹೆಚ್ಚಿನ ಹಣ ಪಡೆದು ಅವರಿಗೆ ರಕ್ಷಣೆಯನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿ ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಅನೇಕ ಮಾನ್ಯ ಸದಸ್ಯರು ಬಿಜಾಪುರ, ಬೀದರ್, ರಾಯಚೂರು ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಇರತಕ್ಕ ಕ್ಷಾಮ ಪರಿಸ್ಥಿತಿಯ ಬಗ್ಗೆ ಅನೇಕ ವಿವರಣೆಗಳನ್ನೂ ಮತ್ತು ಅನೇಕ ಉಪಯುಕ್ತ ಸಲಹೆಗಳನ್ನೂ ಸರ್ಕಾರಕ್ಕೆ ಇತ್ತಿದ್ದಾರೆ. ಆದುದರಿಂದ ಅವರಾಗಲೇ ಪ್ರಸ್ತಾಪ ಮಾಡಿರತಕ್ಕ ವಿಚಾರಗಳನ್ನು ನಾನು ಮತ್ತೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಶ್ರೀ ಆರ್ಮುಗಂರವರು ಅಲ್ಲಿಗೆ ಹೋಗಿ ತಾವು ಕಂಡ ಅಲ್ಲಿನ ನಿಜಪರಿಸ್ಥಿತಿಯ ಬಗ್ಗೆ ಒಂದು ವರದಿಯನ್ನ ತಯಾರಿಸಿ ಅದನ್ನು ಚರ್ಚೆಗೆ ಇಲ್ಲಿ ಸರ್ಕಾರದವರು ಇಟ್ಟಿದ್ದಾರೆ. ಆದರೆ ಹಿಂದಿನಿಂದ ಸರ್ಕಾರದವರು ಸರಿಯಾದ ರೀತಿಯಲ್ಲಿ ಪ್ರಯತ್ನಪಟ್ಟಿದ್ದರೆ ಈ ದಿವಸ ಆ ಜನರನ್ನು ಅಲ್ಲಿ ಕಷ್ಟದಿಂದ ಸುಲಭವಾಗಿ ಪಾರುಮಾಡಬಹುದಾಗಿತ್ತೆಂದು ನನಗೆ ಅನ್ನಿಸುತ್ತಿದೆ. ಅಲ್ಲಿಗೆ ಈ ಕ್ಷಾಮ ಹೊಸದಾಗಿ ಏನು ಬಂದುದಲ್ಲ. ಅಲ್ಲದೆ ಅದೇನೂ ಅಷ್ಟು ಅನಿರೀಕ್ಷಿತವಾಗಿ ಬಂದದ್ದೂ ಅಲ್ಲ. ಆ ಪ್ರದೇಶ ಕಳೆದ ಅನೇಕ ವರ್ಷಗಳಿಂದ ಪದೇ ಪದೇ ಕ್ಷಾಮಕ್ಕೆ ತುತ್ತಾಗುತ್ತಲೇ ಬಂದಿದೆ. ಅದಕ್ಕೆ ಸರ್ಕಾರದವರು ಮೊದಲಿಂದಲೂ ಒಂದು ಸರಿಯಾದ ಪ್ರೋಗ್ರಾಂ ಮಾಡಿಕೊಂಡು ಅದನ್ನು ಆ ಕ್ಷಾಮದ ದವಡೆಯಿಂದ ಪಾರು ಮಾಡುವುದಕ್ಕೆ ಪ್ರಯತ್ನ ಮಾಡಿದ್ದರೆ ಅದನ್ನು ಮಾಡುವುದಕ್ಕೆ ಸಾಧ್ಯವಿತ್ತು. ಅಲ್ಲಿ ಈ ದಿವಸ ನಡೆಯುತ್ತಿರುವುದೇನು ? ಮಳೆ ಇಲ್ಲ—ಬೆಳೆ ಇಲ್ಲ. ಆದಕ್ಕಾಗಿ ಜನರ ಜೀವನಕ್ಕಾಗಿ ಮಳೆ ಬೀಳುವವರೆಗೂ ಅಲ್ಲಿ ಜನರಿಗೆ ರಸ್ತೆ ಕೆಲಸ ಸೇತುವೆ ಕೆಲಸ ಇತ್ಯಾದಿ ಕೆಲಸಗಳನ್ನು ಒದಗಿಸಿ ಅವರಿಗೊಂದು ಜೀವನಕ್ಕೆ ದಾರಿ ಮಾಡುತ್ತಿದ್ದಾರೆ. ಆದರೆ ನಾಳೆ ಅಲ್ಲಿ ಮಳೆ ಬಿದ್ದ ಕೂಡಲೆ ಸರ್ಕಾರದವರು ಅಲ್ಲಿ ನಡೆಸತಕ್ಕ ಕೆಲಸಗಳನ್ನು ನಿಲ್ಲಿಸಿಬಿಡುತ್ತಾರೆ. ಜನರೂ ಕೂಡ ಇವರು ಕೊಡತಕ್ಕ ಕೆಲಸಗಳಿಗೆ ಬರದೆ ಅವರು ತಮ್ಮ ತಮ್ಮ ಕೆಲಸಗಳಲ್ಲಿ ತೊಡಗುತ್ತಾರೆ. ಈ ಕಾರಣಗಳಿಂದಲೇ ಆ ಪ್ರದೇಶ ಪದೇಪದೇ ಕ್ಷಾಮಕ್ಕೆ ತಪ್ಪದೆ ತುತ್ತಾಗುತ್ತಿದೆ. ಇತ್ತ ಸರ್ಕಾರಕ್ಕೂ ಕೂಡ ಇದೊಂದು ವಿನಾ ಕಾರಣ ದೊಡ್ಡ ವಜೆಯನ್ನು ಹೊರಬೇಕಾಗಿದೆ. ನಮ್ಮ ಪಕ್ಕದ ರಾಜ್ಯವಾದ ಮಹಾರಾಷ್ಟ್ರದವರು ಅಲ್ಲಿ ೧೩೫ ಕೋಟಿ ರೂಪಾಯಿಗಳನ್ನು ಪಡೆಯುವುದಕ್ಕೆ ಒಂದು ಪ್ರಾರ್ಥನೆಯನ್ನು ಕೇಂದ್ರ ಸರ್ಕಾರದವರ ಮುಂದಿಟ್ಟಿದ್ದಾರೆ. ಇಲ್ಲಿ ನಮ್ಮ ಸರ್ಕಾರದವರೂ ಕೂಡ ಹಾಗೇ ಪ್ರಯತ್ನ ಮಾಡಿ ಹೆಚ್ಚಿನ ಹಣವನ್ನು ಕೇಂದ್ರ ಸರ್ಕಾರದವರಿಂದ ಪಡೆಯಬಹುದಿತ್ತು. ಇಲ್ಲಿ ೨೭ಕ್ಕೆ ೨೭ ಜನರು ರೂಲಿಂಗ್ ಕಾಂಗ್ರೆಸ್ಸಿಗೆ ಆರಿಸಿ ಬಂದಿರುವುದರಿಂದಲೂ ಮತ್ತು ಕೇಂದ್ರ-ರಾಜ್ಯಗಳೆರಡರಲ್ಲೂ ಒಂದೇ ಸರ್ಕಾರ ಇರುವುದರಿಂದಲೂ ಇವರು ತಮ್ಮ ವರ್ಚಸ್ಸನ್ನು ಬೀರಿ ಕೇಂದ್ರದಿಂದ ಹೆಚ್ಚಿನ ನೆರವನ್ನು ಪಡೆಯಬಹುದಿತ್ತು. ಆದರೆ ಈ ಭಾಗದಲ್ಲಿ ಸರ್ಕಾರದವರು ತಮ್ಮ ಕರ್ತವ್ಯದಲ್ಲಿ ಲೋಪಮಾಡಿದ್ದಾರೆ. ಮಹಾರಾಷ್ಟ್ರದ ಶ್ರೀ ಚವಾಣರವರು ಕೇಂದ್ರದಲ್ಲಿ ಅರ್ಥಸಚಿವರಾಗಿರುವುದರಿಂದಲೂ ಮತ್ತು ಆಂಧ್ರ ಸರ್ಕಾರದವರು ಅವರ ಒಂದು ಹೆಚ್ಚಿನ ಪ್ರಭಾವದಿಂದಲೂ ಕೇಂದ್ರ ಸರ್ಕಾರದಿಂದ ಈ ಎರಡೂ ರಾಜ್ಯಗಳೂ ಹೆಚ್ಚಿನ ಹಣ ಸಹಾಯವನ್ನು ಪಡೆದಿವೆ. ಆಂಧ್ರದಲ್ಲಿ ಕೆ. ಎಲ್. ರಾವ್ ಅವರು ಇರುವುದರಿಂದ ಅಲ್ಲಿಗೆ ೨೮ ಕೋಟಿ ರೂಪಾಯಿಗಳ ಸಹಾಯ ದೊರೆತಿದೆ. ನಮ್ಮ ಸರ್ಕಾರ ಕೂಡ ಏಕೆ ಅವರಂತೆ ತಮ್ಮ ವರ್ಚಸ್ಸನ್ನು ಬೀರಿ ಹೆಚ್ಚು ಹಣವನ್ನು ತಂದು ಆ ಜನರನ್ನು ಕ್ಷಾಮದ ದವಡೆಯಿಂದ ಪಾರುಮಾಡಲಿಲ್ಲ ?

(ಶ್ರೀ ಕೆ. ಎಚ್. ಹನುಮೇಗೌಡ)

ಹೊರದೇಶಗಳಿಂದ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ರಿಗ್ಸ್‌ಗಳನ್ನು ತರಿಸಿದ್ದಾರೆ. ಅದರಿಂದ ಕೆಲವು ಕಾಲ ಸರ್ಕಾರದವರು ಹಣವನ್ನು ರಸ್ತೆ ರಿಪೇರಿ ಸೇತುವೆ ಇತ್ಯಾದಿ ಕೆಲಸಗಳಿಗೆ ಹಾಕುವುದನ್ನು ನಿಲ್ಲಿಸಿ ಏಕೆ ಜನರಿಗೆ ಅನ್ನವನ್ನು ಒದಗಿಸತಕ್ಕಂಥ ನೀರಾವರಿ ಬಾಬಿಗೆ ಹಣವನ್ನು ಖರ್ಚುಮಾಡಬಾರದು ಎಂದು ಕೇಳುತ್ತಿದ್ದೇನೆ. ಇವರು ಆ ಕ್ಷಾಮಪೀಡಿತ ಪ್ರದೇಶಕ್ಕೆ ಹೋಗಿ ಅಲ್ಲಿ ಜನರಿಂದ ಹೂವಿನ ಹಾರಗಳನ್ನು ಹಾಕಿಸಿಕೊಂಡು ಮಾವಿನ ತೋರಣ-ಚಪ್ಪರಗಳನ್ನು ಹಾಕಿಸಿಕೊಂಡು ಅವರಿಗೆ ಭರವಸೆಗಳನ್ನು ಕೊಟ್ಟು ಬಂದಮೇಲೆ ಅತ್ತ ಕಡೆಗೆ ಗಮನ ಕೊಡದೆ ಕುಳಿತುಕೊಂಡಿರುವುದು ಸರ್ಕಾರದ Words expunged as ordered by the chair.

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಸಚಿವರು).—ಮಾನ್ಯ ಸದಸ್ಯರು ಕೆಲವರು ಇದನ್ನು ಸಭೆಯಲ್ಲಿ ಏಕಕಾಲಕ್ಕೆ ಮಾನ್ಯ ಸದಸ್ಯರುಗಳಾದ ಶ್ರೀ ಎಚ್. ಡಿ. ದೇವೇಗೌಡರು ಶ್ರೀ ಹನುಮೇಗೌಡರೂ, ಕೊಣಂದೂರು ಲಿಂಗಪ್ಪನವರೂ, ವಾಟಾಳ್ ನಾಗರಾಜ್ ಅವರೂ ಮತ್ತು ಶೀರನಾಳಿ ಚಂದ್ರಶೇಖರ್ ಅವರು ಇನ್ನೂ ಅನೇಕರು ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದರು.

ಅಧ್ಯಕ್ಷರು.—ವರದಿಗಾರರು ಈಗ ಇಲ್ಲಿ ನಡೆಯತಕ್ಕ ವಿದ್ಯಮಾನಗಳನ್ನು ರೆಕಾರ್ಡ್ ಮಾಡಬಾರದೆಂದು ಆಜ್ಞೆ ಮಾಡಿದ್ದೇನೆ.

ಅಧ್ಯಕ್ಷರು—.ಎಲ್ಲ ಮಾನ್ಯ ಸದಸ್ಯರುಗಳು ಚುನಾವಣೆಯಲ್ಲಿ ಗೆದ್ದು ಬಂದಿರುವುದರಿಂದಲೇ ಅವರನ್ನು ಸಭೆಯ ಒಳಗೆ ಬಿಟ್ಟಿರುವುದು. ಇಲ್ಲದಿದ್ದರೆ ಸಭೆಯ ಒಳಗೆ ಬಿಡುತ್ತಿರಲಿಲ್ಲ. ಮಾನ್ಯ ಹನುಮೇಗೌಡರೇ ಆಗಲಿ, ಬೇರೆ ಮಾನ್ಯ ಸದಸ್ಯರುಗಳೇ ಆಗಲಿ, ತಮಗೆ ಗಂಟಲು ಜಾಸ್ತಿ ಇದೆ ಎಂದುಕೊಂಡು ಇಲ್ಲಿ ಪ್ರದರ್ಶನ ಮಾಡಬೇಕಾಗಿಲ್ಲ. ಲಕ್ಷಣವಾಗಿ ಎಲ್ಲರಿಗೂ ಧ್ವನಿವರ್ಧಕ ಯಂತ್ರಗಳನು ಪ್ರೊವೈಡ್ ಮಾಡಿರುವುದರಿಂದ ಮಾನ್ಯ ಸದಸ್ಯರು ಮೆಲ್ಲನೆ ಮಾತನಾಡಿದರೂ ಸಹ ಎಲ್ಲರಿಗೂ ಕೇಳುತ್ತದೆ ಆದ್ದರಿಂದ ಸುಮ್ಮನೆ ಆರ್ಭಟ ಮಾಡುವುದು ಸರಿಯಲ್ಲ ಮಾನ್ಯ ಸದಸ್ಯರು ಮಾತನಾಡುವಾಗ ಆ ಪದವನ್ನು ಉಪಯೋಗಿಸಿದ್ದು ಸರಿಯಲ್ಲವೆಂದು ಹೇಳುತ್ತೇನೆ. ಈಗ ರೆಕಾರ್ಡ್‌ನಿಂದ ಆ ಪದವನ್ನು ತೆಗೆದುಹಾಕಿದ್ದೇನೆ.

ಶ್ರೀ ವಾಟಾಳ್‌ನಾಗರಾಜ್—.ಆದ್ದರಿಂದ ಆ ಪದವನ್ನು ಉಪಯೋಗಿಸಿದ್ದರಲ್ಲಿ ತಪ್ಪೇನೂ ಇಲ್ಲ ಇವರಿಗೆ ಆಡಳಿತ ನಡೆಸಲು ಯೋಗ್ಯತೆ ಇಲ್ಲ, ದಕ್ಷತೆ ಇಲ್ಲ, ಎಂದು ಹೇಳುವುದರಲ್ಲಿ ತಪ್ಪೇನಿದೆ. ಆವೇಶದಲ್ಲಿ ಆ ರೀತಿ ಹೇಳಿದರು.

ಅಧ್ಯಕ್ಷರು—.ನಾನು ಎದ್ದು ನಿಂತು ಮಾತನಾಡುತ್ತಿರುವಾಗ ತಾವು ಸಹ ನಿಂತುಕೊಂಡು ಮಾತನಾಡುವುದು ಸರಿಯಲ್ಲ.

SRI H. M. CHANNABASAPPA—.I am on a point of order. The Hon. Speaker is on her legs. There is continued speaking on the part of Sri Vatal Nagaraj and this not in order. I wish that the Chair will give a ruling that while the Speaker is on her legs the members should sit down.

ಶ್ರೀ ಎಚ್. ಡಿ. ದೇವೇಗೌಡ—.ಮಾನ್ಯ ಅಧ್ಯಕ್ಷರು ಹೇಳಿದನ್ನು ನಾವು ಒಪ್ಪುತ್ತೇವೆ. ತಮಗೆ ಗೌರವ ತೋರಿಸುವುದು ನಮ್ಮ ಧರ್ಮ. ಅದು ನಿರ್ವಿವಾದವಾದ ಮಾತು. ಇಂದು ಸಭೆ ಮುಕ್ತಾಯವಾಗುತ್ತದೆ ಕೊನೆಯ ದಿವಸದಲ್ಲಿ ಅನಾವಶ್ಯಕವಾಗಿ ಯಾರೂ ಲಂಬಿಸಿ ಮಾತನಾಡಿ ಕಹಿ ವಾತಾವರಣದಿಂದ ನಾವುಗಳು ಹೊರಗೆ ಹೋಗುವುದು ಬೇಡ. ಮಾನ್ಯ ಹನುಮೇಗೌಡರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ತಮ್ಮನ್ನು ವಿನಂತಿ ಮಾಡಿಕೊಂಡೆ. ಅದರಂತೆ ತಾವು ಅವಕಾಶ ಕೊಟ್ಟಿರಿ. ಅವರು ಮಾತನಾಡುವ ಕಾಲಕ್ಕೆ ಉಪಯೋಗಿಸಿದ ಒಂದು ಪದವನ್ನು ರೆಕಾರ್ಡ್‌ನಿಂದ ಕಿತ್ತುಹಾಕಬೇಕೆಂದು ತಾವು ಹೇಳಿದಿರಿ. ಅದನ್ನು ನಾವು ಒತ್ತಾಯ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಮಾನ್ಯ ಚೆನ್ನಬಸಪ್ಪನವರು ಮಾತನಾಡುತ್ತಾ ಇದೇ ಮಾನ್ಯ ಮಂತ್ರಿಗಳು ವಿರೋಧಪಕ್ಷದಲ್ಲಿ ಇದ್ದಾಗ ಆಗಿನ ಸರ್ಕಾರವನ್ನು ಷಂಡ ಸರ್ಕಾರ, ಷಂಡರು ಎಂಬ ಪದಗಳನ್ನು ಉಪಯೋಗಿಸಿದರು. ಆಗ ಆ ಪದ ಪಾರ್ಲಿಮೆಂಟರಿ ಅಥವಾ ಅನ್‌ಪಾರ್ಲಿಮೆಂಟರಿಯೋ ಎಂದು ತೀರ್ಮಾನವಾಗುವುದಿಲ್ಲ. ಅದು ರೆಕಾರ್ಡ್‌ನಲ್ಲಿದೆ.

ಶ್ರೀ ಎಚ್. ಸಿದ್ದವೀರಪ್ಪ.—ತೀರ್ಮಾನವಾಗಿದೆ.

ಶ್ರೀ ಎಚ್. ಡಿ. ದೇವೇಗೌಡ— ಆ ಪದ ಪಾರ್ಲಿಮೆಂಟರಿ ಎಂದು ತೀರ್ಮಾನವಾಗಿದೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಮಾನ್ಯ ವಿರೋಧಪಕ್ಷದ ನಾಯಕರು ಹಗಲೆಲ್ಲಾ ಆ ಒಂದು ಪದವನ್ನು ಬೊಟ್ಟು ಮಾಡಿ ತೋರಿಸುತ್ತಾರೆ. ವಿರೋಧಪಕ್ಷ ಇರಬೇಕು, ವಿರೋಧಪಕ್ಷ ಇಲ್ಲದಿದ್ದರೆ ಪ್ರಜಾಪ್ರಭುತ್ವ ಅಲ್ಲ ಎಂಬತಕ್ಕಂಥದ್ದನ್ನು ತಿಳಿದುಕೊಂಡವರ ಪೈಕಿ ನಾನೂ ಸಹ ಒಬ್ಬ. ಹಿಂದಿನ ಸರ್ಕಾರ ನಾಲ್ಕೂಕಾಲು ವರ್ಷ ಆಡಳಿತ ನಡೆಸಿದಾಗ ಮತ್ತು ಆ ಸಮಯದಲ್ಲಿ ಅಸೆಂಬ್ಲಿ ಸೇರಿಸಿದಾಗಲೆಲ್ಲಾ ನಾವು ಸೇರಿದವರಿಗೆಲ್ಲಾ ನಾವು ವಿರೋಧಪಕ್ಷದಲ್ಲಿ ಇದ್ದುಕೊಂಡು ಮಾತನಾಡುವಾಗ, ಯಾವುದೇ ಪದವನ್ನು ವಿತೆಡ್ರಾ ಮಾಡಿಕೊಳ್ಳಬೇಕು ಎಂದು ಹೇಳಿಸಿಕೊಂಡಿಲ್ಲ. ನೀವು ಸರಿಯಾಗಿ ಮಾತನಾಡುತ್ತಿಲ್ಲ. ಅನ್‌ಪಾರ್ಲಿಮೆಂಟರಿಯಾಗಿದೆ. ವಿತಡ್ರಾ ಮಾಡಿಸಿಕೊಳ್ಳಿ ಎಂದು ಹೇಳಿದಂತಹ ರಿಮಾರ್ಕ್ಸ್ ಇದ್ದರೆ ತೋರಿ ನಾವು ಒಪ್ಪಿಕೊಳ್ಳುತ್ತೇವೆ. ಏನು ಮಾತನಾಡಬೇಕಾದರೂ ಸರಿಯಾದ ರೀತಿಯಲ್ಲಿ ಒಬ್ಬರ ಮನಸ್ಸನ್ನು ನೋಯಿಸದ ಹಾಗೆ ಮಾಡಬೇಕು. ಟೀಕೆ ಮಾಡುವುದರಲ್ಲಿ ತಪ್ಪಿಲ್ಲ, ಆದರೆ ಅದಕ್ಕೆ ಇತಿಮಿತಿ ಇರಬೇಕು. ನಮಗೆ ನಾಟುವ ಹಾಗೆ ಮಾತನಾಡುವುದರಲ್ಲಿ ತಪ್ಪಿಲ್ಲ. ನಮ್ಮ ಕಣ್ಣಿಗೆ ಅಂಜನ ಹಾಕುವ ರೀತಿಯಲ್ಲಿ ಮಾತನಾಡಿದರೆ, ಅದರಿಂದ ನಮಗೆ ಒಳ್ಳೆಯದಾಗುತ್ತದೆ. ನಮ್ಮನ್ನು ತಿವಿಯುವುದಕ್ಕೆ ತಾವು ಇದ್ದೀರಿ ತಿವಿಯಿರಿ, ಆದರೆ ಅದಕ್ಕೂ ಒಂದು ಇತಿಮಿತಿ ಇದ್ದರೆ ಒಳ್ಳೆಯದು. ಮಾನ್ಯ ದೇವೇಗೌಡರಂತವರು ನಮಗೆ ವಿರೋಧಪಕ್ಷದ ನಾಯಕರಾಗಿ ಸಿಕ್ಕಿರುವುದು ನಮ್ಮ ಸುದೈವ. ಅವರು ಯಾವಾಗಲೂ ಸೌಮ್ಯವಾಗಿರುತ್ತಾರೆ. ಉಗ್ರ ರೂಪ ತಾಳುವುದಿಲ್ಲ. ಮಾನ್ಯ ವಾಟಾಳ್ ನಾಗರಾಜ್ ಅವರು ವಿರೋಧಪಕ್ಷದ ನಾಯಕರಾಗಿದ್ದರೆ ಏನಾಗುತ್ತಿತ್ತೋ ಗೊತ್ತಿಲ್ಲ. ಅವರು ಇನ್ನೂ ತರುಣರು. ಅದಕ್ಕೆ ಅವರು ಆ ರೀತಿ ಇದ್ದಾರೆ ಟೀಕೆ ಮಾಡುವುದು ಸರಿ. ಆದರೆ ಇನ್ನೊಬ್ಬರ ಮನಸ್ಸು ನೋಯದ ಹಾಗೆ ಮಾತನಾಡಬೇಕು,

ಶ್ರೀ ಎಚ್. ಡಿ. ದೇವೇಗೌಡ— ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಹಿಂದಿನ ಸರ್ಕಾರ ನಾಲ್ಕೂಕಾಲು ವರ್ಷ ಆಡಳಿತ ನಡೆಸುತ್ತಿದ್ದಾಗ ತಾವು ವಿರೋಧಪಕ್ಷದಲ್ಲಿ ಇದ್ದುಕೊಂಡು ಬಳಸಿದಂತಹ ಕೆಲವು ಮಾತುಗಳನ್ನು ಎಕ್ಸ್‌ಪಂಜ್ ಮಾಡಿಲ್ಲ. ಮತ್ತು ತಾವು ಯಾವುದೇ ಕಾಲದಲ್ಲಿಯೂ ವಿತೆಡ್ರಾ ಮಾಡಿಕೊಂಡಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ವಿತೆಡ್ರಾ ಮಾಡಿಕೊಳ್ಳುವಂತಹ ಪದಗಳನ್ನು ನಾವು ಉಪಯೋಗಿಸಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ— ತಾವು ಈ ಕಡೆ ಇದ್ದಾಗ ಕೆಲವು ಪದಗಳನ್ನು ಉಪಯೋಗ ಮಾಡುತ್ತಿದ್ದಿರೋ ಆ ಒಂದು ಸಂಪ್ರದಾಯದ ಆಧಾರದ ಮೇಲೆಯೇ ನಾವು ಸಹ ಇಂತಹ ಪದಗಳನ್ನು ಬಳಸುತ್ತಿದ್ದೇವೆ,

ಶ್ರೀ ಎಚ್. ಸಿದ್ದವೀರಪ್ಪ.—ನೀವು ಜಾಸ್ತಿ ಮಾಡುತ್ತಿದ್ದೀರಿ.

ಶ್ರೀ ಎಚ್. ಡಿ. ದೇವೇಗೌಡ.—ಷಂಡರ ಕೈಯಲ್ಲಿ ಸರ್ಕಾರ ಏತಕ್ಕೆ ಇರಬೇಕು ಎಂದು ಹೇಳಿದ್ದಿರಿ ಆ ಪದವನ್ನು ರೆಕಾರ್ಡಿನಿಂದ ತೆಗೆದುಹಾಕಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಸಹ ಇನ್ನೂ ಕಠೋರವಾದ ಮಾತನ್ನು ಆಡಿದ್ದಾರೆ. ಅಧ್ಯಕ್ಷರ ಪೀಠದಲ್ಲಿ ಬೇರೆಯವರು ಕುಳಿತಿದ್ದರೆ ಅವರು ಯಾವ ಮಾತನ್ನು ಹೇಳಿದರು ಎಂಬುದನ್ನು ಹೇಳುತ್ತಿದ್ದೆ.

ಶ್ರೀ ಎಚ್. ಸಿದ್ದವೀರಪ್ಪ.—ಇಂತಹವರು ಅಧ್ಯಕ್ಷರಾಗಿರುವುದು ನಮ್ಮ ಸುದೈವ. ಅಧ್ಯಕ್ಷರ ಮಾತಿಗೆ ಎಲ್ಲರೂ ಮನ್ನಣೆ ಕೊಡಬೇಕಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಯಾವ ಪದಗಳನ್ನು ಪ್ರಯೋಗ ಮಾಡಿದ್ದಾರೋ, ಆ ಪದವನ್ನು ಅಧ್ಯಕ್ಷರಿಗೆ ಅರ್ಜಿ ಈಗ ಮತ್ತೆ ನಾನು ಪ್ರಯೋಗ ಮಾಡುವುದಕ್ಕೆ ಹೋಗುವುದಿಲ್ಲ. ಹಿಂದೆ ವಿರೋಧ ಪಕ್ಷದಲ್ಲಿ ಇದ್ದುಕೊಂಡು ತಾವುಗಳು ಏನು ಒಂದು ಸತ್‌ಸಂಪ್ರದಾಯಗಳನ್ನು ಹಾಕಿಕೊಟ್ಟಿರೋ ಅದನ್ನೇ ನಾವು ಅನುಸರಿಸುತ್ತಿದ್ದೇವೆ.

ಅಧ್ಯಕ್ಷರು.—ಕೆಲವು ಪದಗಳನ್ನು ಆವೇಶದಲ್ಲಿ ಉಪಯೋಗಿಸಲಾಗುತ್ತದೆಂದು ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದರು. ಡಿಕ್ಷನರಿಯಲ್ಲಿ ಒಂದೊಂದು ಪದಕ್ಕೂ ನಾನಾ ಅರ್ಥಗಳಿರುತ್ತವೆ. ಸಮಯ, ಸನ್ನಿವೇಶ, ಕಾಲ ಇವುಗಳೆಲ್ಲಾ ಸೇರಿಸಿಕೊಂಡು ನೋಡಿದರೆ, ಒಂದೊಂದು ಪದಕ್ಕೂ ನಾನಾ ಅರ್ಥ ಬರುತ್ತದೆ, ದಯಮಾಡಿ ಆ ಕಡೆಯವರೇ ಆಗಲಿ, ಈ ಕಡೆಯವರೇ ಆಗಲೀ ಮಾನ್ಯ ಮಂತ್ರಿಗಳೇ ಆಗಲಿ, ವಿರೋಧ ಪಕ್ಷದ ನಾಯಕರೆ ಆಗಲಿ ಇನ್ನು ಮುಂದೆ ಮಾತನಾಡುವಾಗ ಇನ್ನೊಬ್ಬರಿಗೆ ನೋಯುವ ಹಾಗೆ ಮಾತನಾಡಬೇಡಿ, ಮಾನ್ಯ ಹನುಮೇಗೌಡರು ಯಾವಾಗಲೂ ನಿಧಾನವಾಗಿಯೇ ಮಾತನಾಡುತ್ತಾರೆ. ಅವರ ಮೇಲೆ ಇಂದು ಎಲ್ಲೋ ದೇವರು ಬಂದಿತ್ತೆಂದು ಕಾಣುತ್ತದೆ, ಆವೇಶ ಬಂದವರಂತೆ ಮಾತನಾಡಿದರು, ಆಕ್ರೋಶ ಮತ್ತು ಆವೇಶದ ದಾಟಿಯಲ್ಲಿ ಮಾತನಾಡಿದರು, ಆಗ ಆ ಪದವನ್ನು ಉಪಯೋಗ ಮಾಡಿದರು, ಅದೇ ರೀತಿಯಲ್ಲಿ ಮಾನ್ಯ ಮಂತ್ರಿಗಳು ಸಹ ಆವೇಶದಲ್ಲಿ ಒಂದು ಪದವನ್ನು ಉಪಯೋಗ ಮಾಡಿದರು, ಆ ಪದದಿಂದ ತಮ್ಮ ಮನಸ್ಸಿಗೆ ನೋಯ್ದರೆ, ಆ ಪದವನ್ನು ತೆಗೆಸುವುದಕ್ಕಾದರೆ ತೆಗೆಸುತ್ತೇನೆ,

† SRI C. M. ARUMUGAM. K. G. F. Madam Speaker.—At the outset, I want to express my thanks to the Hon. Chief Minister, the Leader of the Opposition and the members of this august House foe having named me to study the drought affected area in the Districts of Gulbarga, Bidar, Bijapur and Belgaum. As the time was very short, it was not possible for me to visit all the villages and taluks. Out of these areas. I have selected a few villages, which would reflect the entire taluks, and districts. Though the House has not prescribed the conditions under which I should visit and the form of report I should submit, however, I thought that it would be in order that I should visit these areas, see the people, study their conditions their sufferings, since how long they have been suffering and the ramedy-what are the relief measures taken by the Government, whether such relief measures were adequate or inadequate. With this in view, I have seen the people. I have heard the Officers. I believe the people of that area ; I believe their statements. I believe the Officers and the Government ; more than all these, I believe my eyes. For paucity of time, it was not possible for me to see all the affected villages in these districts. Suffice it to say that the codnitions in the parts I have seen would be the same as the conditions in the other areas which I have not visited. It was not possible for me to see and hear and have discussion with every one in those areas. There were a large number of peple assembled in the villages as well as on the road side as will as on taluk and district head quarters. I have seen them with my own eyes. I have given my impressions about these things. The findings were my own. In doing so, I might have omitted something which ought to have been there in the report, but I submit that I have not added anything which I have not seen or heard or verified. Therefore, the report is their before the House.

Of course, some action has been taken by the Government. That is also there. Action has been taken by the Government ; it has been on the increase now a days. Thought the work has increased, the sufferings are also on the increase. To meet the sufferings and calamities that have been created in these areas, more action is required. This is what my report says. I have mentioned several things in the report but some important points I have not mentioned.

The first thing is Law and Order in these areas. I pay my tribute to the people of these areas *viz.*, Bidar, Gulbarga, Bijapur and Belgaum and other drought-stricken areas. In spite of the sufferings for want of food, water and fodder for the cattle as well, they behaved like good people. I compliment them. On behalf of this house, I convey my sincere thanks to the well-behaved people of these four districts. I ought to have mentioned a word about the Law and Order situation in the report but for want of time I could not do so I am referring to it now before the House, so that the House can have a chance of discussion on that and so that Government might take some decision in the light of the discussion. Tha Law and Order situation in that area is quite normal. I compliment the people of these areas for their good behaviour. I am giving some figures in support of my view that Law and Order is quite normal in those areas. In Gulbarga District, from January 1971 up to November, 1971, there were 74 murders reported and detected. This year up to November 72, it is only 65. Dacoities up to November 1971 reported and detected : 13 cases. This year in Gulbarga it is only two. Robbeies last year were 7 ; this year they are three. House Breaking and Thefts last year were 139 and this year they are 49 House Thefts last year were 47 and this year they are 17. Thefts of ordinary character last year were 118 and this year they are 87. Cattle theft last year were 26 and this year they are 11. Last year there were 5 Cheating cases and this year there were three such cases. Criminal Breach of Trust cases last year were 13 and this year they are 13. Miscellaneous cases last year were 766 and this year they are 656.

In spite of the fact that the people are suffering for food, Crime is very much less than what it was last year. I want to submit one thing through you, Madam Speaker, to the Government of this state- Government will do well if they note down this point–*ie.*, if they do not do adequate work and prevent the people from sufferings-sufferings for want of food, sufferings for want of water–, they will have to face another problem. Now, the problem is to fight the scarcity conditions, to save the people from hunger and starvation to death. If they do not take adequate action, they would have another problem–and that problem would be the Law and Order problem.

10–30 A.M. If such conditions had prevailed in a country like France, people would have revolted against the Government. Although such deplorable conditions prevail in Karnataka, people are tolerating them ; because our people are good and calm they are tolerating them. Government also should know that there is a limit to peoples' patience and endurance of woes. I very much like the Government to take note of the law and order problem and take adequate measurs to help the people out of their present distress and not be complacent because law and order and crime situation is steady. If immediate and appropriate steps are not taken to tide over the

(SRI C. M. ARUMUGAM)

deteriorating situation and timely succour not given to the people by the Government, I am afraid Government will be facing a serious law and order problem.

The second point I wish to bring to the notice of the House is, owing to the short time at my disposal, it was not possible for me to see more number of working centres and all the affected places, ascertain the number of people employed, how they are employed and paid, etc. I thought it would be better to make a comparative study by knowing what is happening in Maharashtra because in Maharashtra the same conditions prevail in certain districts. So, while touring Bijapur District, when I was near South Sholapur border, I visited the village quite adjacent to our State border, lying in Maharashtra area. I visited that village in Maharashtra as a private person. I could see 2,000 men and women employed in a particular Centre. I could not see any such Centre in the District of Bidar, Gulbarga, Bijapur and Belgaum because in these four Districts no more than 200 to 300 were employed in a particular centre. In this village in Maharashtra I visited, 2000 men and women had been employed on a particular road work. I also ascertained that in Maharashtra worked under "64-Famine" are mostly executed by the District Development Board (Zilla Parishat). Powers are decentralised and this is, as it ought to be under a democratic Government. The District Development Board is an elected body and Government have naturally divested themselves of their powers and given them to the District Development Boarde The Chairman of this Board enjoys a high status. According to th. protocol there, the rank and status of the Chairman of the Districe Development Board is equal to that of a Deputy Minister of the State. A senior I.A.S. Officer works under the Chairman as Executive Officer of the District Development Board. These works are executed by the District Development Board and payments are made by the Revenue Department. Therefore the contract system, which is prevalent in our P.W.D., is not there. Task work system is not in vogue there. To a Considerable extent, relaxation has been shown to these workers. Our Government could consider whether they could adopt the system that is in vogue in Maharashtra.

Our Government may also consider whether contract system could be abolished, so that the workers may be assured of fair and reasonable wages and the middlemen may be eliminated. The middlemen are swallowing more than 30% of the expenditure incurre by the Government. I think the Middlemen could be avoided if the Government were to follow the procedure adopted by the Maharashtra Government.

In my Report, I have devoted a chapter on Starvation Deaths. There is probability of death by starvation ; we could safely say that there are deaths due to starvation. It has been argued that death due to starvation would result if a person is without food and water for 15 days. What is the difition of starvation ? A man will starve when he has no food ; he will have no food on account of poverty ; he will die due to insufficiency of food and malnutrition. When there is no food which gives nourishment people die. I was informed that for months together people have been taking food once in 3 or 4 days and that too insufficient food. Particularly in Gulbarga District, some of the deaths which have occurred are death due to starvation. A person aged about 50 to 60 years came to Chitapur with his wife and children and started crying bitterly. I was very much moved when he stated before an audience of 600 that he lost two of his daughters aged 15 and 12 about two weeks back, on account of starvation. When I made enquiries with the officers present, they agreed that there were two deaths but stated that the two daughters did not die on account of starvation but because they took stale food, prepared a week back. Food means not rice and curry ; it is wheat rotti minus ghee or butter. Food means a bare, dry wheat bread ; and that food had been prepared 8 days back. They ate that worst food which had become poisonous. That is the verdict of the Officers. Why did they eat ? They ate because they were so hungry. I also visited the work spots and inspected the food the labourers had brought. The roti they had brought was as thin as paper. I am not exaggerating. In certain places, these wage-earners doing hard work had not even *chatni* and *sambar* with them. In certain places there was no water to drink. That is the pathetic sight I have seen. Had I know that I would have to tour such areas afflicted with heart-rending sights. I would have declined my assignment to tour and study the scarcity situation. My eyes became wet full of tears when people narrated their distress and when I saw that they had to eat their bread without water and without *chatni* and *sambar*.

SRI H. SIDDAVEERAPPA (Minister for Health).—I do not think it finds a place in the Member's Report.

SRI C. M. ARUMUGHAM.—I have with me full information I think it is there. If it is not there and if need be, I will make an additional report.

SRI H. SIDDAVEERAPPA.—What the hon. Member has reported is : "Manual workers who toil hard are taking only two jowar or wheat rotis with chillies and salt." I can understand that conditions are as bad as they can be. There are no two opinions about it. But the say that so may things have happened there only on account of man, is not correct. There is a proverb which says : 'ಹರಕೊಲಾಗ್ವ ಪರಕಾಯ್ವನೇ' ಎಂದು ಸೋಮೇಶ್ವರ ಶತಕದಲ್ಲಿದೆ.

It is a visitation of God and of Nature. Let us fight it.

SRI C. M. ARUMUGHAM.—Madam Speaker, I have come across people weeping when there is death in their family or when they have lost huge property. I have not come across people crying for want of food. In the villages in Indi Taluk I visited, majority of the villagers started weeping because they had no food for four days prior to my visit. In fact. I visited the concerned Fair price Depot. There was no foodgrain in it. It was reported that on account of transport facilities, officials had not supplied foodgrains. In fact, at 1 O'clock when the hot sun was burning and when the road was so hot as to develop blisters, poor women folk at Gulbarga and north Karnatak area, were trekking their way on foot, wearing torn saris ; they were without blouse Does this speak well of a country which attaineds Independence 25 years' back ?

...our ladies wearing so many types of dresses and decorating themselves in all sorts of fashions in Bangalore and other towns ; I could see them with mere sorry, without blouse-half-naked-they were starving.

SRI PRABHAKAR THELKAR.—They may be voddars. They don't wear blouse. That is the custom.

SRI C.M. ARUMUGAM.—They are also human beings. They are part and parcel of our great nation.

SRI D.B. KALMANKAR.—These voddars by custom they do not use blouse.

SRI C.M. ARUMUGAM.—The custom was for Brahmins to keep to temples and worship. Now brahmins are ruling the country ! You must revolt against these customs and manners.

SRI D.B. KALMANKAR.—What I say is, voddars do not use blouse. If you are speaking about other people, I have no objection

SRI C. M. ARUMUGAM.—You should rise in revolt againt these customs.

MADAM SPEAKER. —That is a part of the social work.

SRI H.M. CHANNABASAPPA.—Madam Speaker, the Hon'ble Member Sri Arumugam has been at very great pains to give us a detailed report of what he felt about it Whatever he has been saying here. I should have no objection, my only appeal is, he should have tried to incorporate all that in this report, so that we would have benefited.

SRI H SIDDAVEERAPPA.—What I anticipated is some explanation what has been mentioned in the report. Now what we find is an amplification.

SRI M.S. KRISHNAN.—There should be no objection from the other side if he is trying to elaborate on the basis of the report.

SRI H. SIDDAVEERAPPA.—May I say, it is not elaboration but amplification?

SRI C.M. ARUMUGAM.—If anybody in this House is trying to prevent me from bringing out certain points which I have incroprated in the report, well I am prepared to abide by the Speaker's ruling.

I am saying that these ladies without blouse, they were lying on the hot road. They prevented my car from proceeding further.

MADAM SPEAKER.—I request Sri Armugam, not to mix up issues.

SRI C.M. ARUMUGAM.—It was difficult to persuade these people to leave the way clear. This is the condition prevailing in this area. I would certainly request the people's representatives from this district to issue a statement that people are helped and they are happy. That is what they can do. On the other hand, Madam, I have also seen migration-people moving from village to village. Certain villages I have visited, I found people have abandoned their articles and sold their roof also. Zinc forming the roof, have been sold I understand. One other information is about the school attendance. In Chincholi, school attendance shows it. What was the attendance In August, and what is the attendance in December? It has come down to nil. No body is attending the school because parents have left the village. In certain places, it has come down from 120 to 40. In some places, there were 2, in some places 2-5 and nil. The attendance in schools is very thin because parents have left. That clearly shows that the parents have left the villages.

Madam, I have said about the loan. Lift irrigation and also projects should be completed. All the rivers should be harnessed and their waters must be utilised for the benefit of the people of those four districts. This I have said in the light of the information I have got. It is said that irrigated land is 40 per cent in Tamil Nadu, in Andhra 35 to 40 per cent. In this district, particularly Gulbarga, it is 3 per cent against the State average of 11 13 per cent. Therefore, Government will do well to extend all possible irrigation facilities to that area. Loans should be given for sinking irrigation wells. I have mentioned that Government would consider the giving loans not only for deepening of wells for drinking water purpose, but also for irrigation and for sinking new wells. There is another feature. There is public co-operation in doing relief works in every village, but certain people go to court bring and stay order, against the formation of roads There is a little amount of apathy. Therefore, I have suggested that the Land Acquisition Act may be suitably amended if that is possible and if it is necessary, they can refer the matter to the Government of India if it needs amendment by Parliament.

Madam Speaker, Some Hon'ble Member, I think it is Mr. Patil representing Humnabad said that he has received a letter from Bidar that I spent more time in the Guest House. I do not know how to consider that letter written by some ex-MLA. He read out a letter supposed to have been received from an ex-MLA.

SRI M.S. KRISHNAN.—Mr. V.N. Patil read that letter. It was passed on to the Speaker.

SRI C.M. ARUMUGAM.—Any way, it has been said. I do not know who this ex-MLA is. I do not give much credence to a letter supposed to have been written by an ex-MLA of that area to a MLA who is residing in cities. At any rate, I wish to submit Madam, that I started early in the morning at 8 and we worked for 15:16 hours a day In spite of it, if Mr. Patel gets some letter and reads it in the House, well I leave it to you.

SRI M S. KRISHNAN.—It is no insinuation against the work of Mr. Arumugam. In fact, he gave compliments. He said he has some letter and it would be passed on to the Speaker.

SRI C.M. ARUMUGAM.—It would not be proper for me to incorporate them in my report. There are complaints. Some complaints were made that some members after election are residing in Bangalore City and that they visit their constitutencies along with Ministers. I thought it was not proper for me to mention it I may say that Iam born in a poor community, am brought up among the poor, live amongst the workers and as such I know their sufferings. So, working for sixteen hours is common to me Our staff also worked for sixteen hours We had our food at 5 or 6 P.M. and in the night at twelve or one.

The V.I.P. about whom I have mentioned in my report does not refer to any of the Ministers. I will pass on the information to the Chief Minister for him to verify and he may inform the House or take whatever action he deems fit.

In conclusion, I may inform the House that whatever was possible for me to do I have done without any bias. Whatever I have see I have presented. The Hon. Minister Sri Chikke Gowda said that there is certain amount of exaggeration in the report I am not in the habit of exaggerating things. As for me I have believed my own eyes more than what officers and others said. I am sorry to say that the condition is extremely bad; it may worsen also. Before it happens I submit to the Government to take measures to save the lives of human beings and cattle wealth in the affected areas.

† SRI H. SIDDAVEERAPPA, (Minister or Health).—Madam, before the Minister in charge replies I would just like to mention with your kind permission about what the hon. Member has mentioned about health hazards in that area. That is a very important point which he has stressed. He has also mentioned about diet and other things that are needed there.

About cholera epidemics and other things I have passed on the information to my colleague the Minister. he will make a reference to it. What he has said is that medical officers must take proper care from now on to see that remedial measures are taken up in time. After my return from that area, I have passed on the information to my Secretariat asking them to make arrangements from now on to meet the situation especially when water is scarce. Without food we can afford to live but without water no human being can live. Then alone when I went there was absolute scarcity. Nature is so unkind in that area that even rivers are getting dried up. When that is so, it is a matter which should baffle any Government. In spite of that steps have been taken and efforts have been made.

So far as the health problem is concerned, what Sri Arumugam has mentioned in his report at page 67 I have asked the Secretariat to examine it and see that proper steps are taken. I am making a pro posal to the Government to make an estimated expenditure of nearly 25 lakhs of rupees for taking steps to meet epidemics. A suggestion has been made that we have mobile hospitals in that area. We know the roads are bad I have also sent a proposal to have in each district not less than two or three mobile hospitals so that with a full complement they may move with necessary medicines, injections and other things from place to place or to work spots and see that medical relief is given. I am also making a request to the world organisations like the Rotary Club and others to make provision to give vitamin tablets and other things. Already in some areas the UNICEF and other organisations have taken steps to see that some help is given. So far as the health problem is concerned, I may assure the hon. Members that steps, both preventive as well curative, will be taken in ample measure, if necessary, by rushing the staff from other areas and see that in these areas proper steps are taken in time. This is what I wanted to submit.

Sri M.S. Krishnan—He also has said that particularly in taluk hospitals diet is not given whereas it is given in district hospitals. Without diet if you give medicine it will be of no help.

Sri H. Siddaveerappa.—So far as that is concerned, I have got it examined. Now I have to appoint about 200 cooks if the diet is to be prepared. After looking into the matter I have sent a note to my department and I have prepared a scheme which I am passing on to the Finance Department and other concerned departments so that we may take adequate steps.

11 A.M.

ಶ್ರೀ ಶರಣಪ್ಪ :—ಶ್ರೀಮಾನ್ ಆರ್ಮುಗಂರವರು ರಾಯಚೂರು ಜಿಲ್ಲೆಗೆ ಹೋಗಲು ವೇಳೆ ಸಿಕ್ಕಲೇ ಇಲ್ಲ, ಹೋಗಲಿಲ್ಲ ಎಂದು ಹೇಳಿದರು. ಡಿವಿಜನಲ್ ಕಮಿಷನರ ವರದಿ ತರಿಸಿ ಗುಲ್ಬರ್ಗ ಸುತ್ತಮುತ್ತಲೂ ಇರುವ ತಾಲ್ಲೂಕುಗಳಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಮತ್ತು ಆ ವಿಚಾರದಲ್ಲಿ ಮಾನ್ಯ ಸದಸ್ಯರು ಎತ್ತಿರುವ ಪ್ರಶ್ನೆಗಳಿಗೆ ಉತ್ತರ ಹೇಳಬೇಕು.

† ಶ್ರೀ ಎಚ್. ಎಂ. ಚನ್ನಬಸಪ್ಪ :— (ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆಯ ಸಚಿವರು). ಈ ಅಭಾವ ಪರಿಸ್ಥಿತಿ ವಿಷಯದಲ್ಲಿ ಮಾತನಾಡಿದ ವಿಷಯಗಳಮೇಲೆ ನಮ್ಮ ಮಂತ್ರಿಗಳಾದ ಶ್ರೀ ಹುಚ್ಚಮಾಸ್ತಿಗೌಡರು ಜನರಲ್ಲಾಗಿ ಎಲ್ಲಾ ವಿಷಯಗಳ ಬಗ್ಗೆ ಉತ್ತರ ಕೊಡುವರು. ಈಗ ನಾನು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ಟೀಕೆ ಏನು ಬಂದಿದೆ ಅದಕ್ಕೆ ಉತ್ತರ ಕೊಡುತ್ತೇನೆ.

ಮಾತನಾಡುವಾಗ ಕೆಲವು ಸದಸ್ಯರು ಬಹಳ ಉಗ್ರವಾಗಿ ಏನೂ ನಡೆದೇ ಇಲ್ಲ ಎಂಬ ರೀತಿಯಲ್ಲಿ ಮಾತನಾಡಿದರು. ಅದು ಸರಿಯಲ್ಲ ಎಂದು ಬಹಳ ನಮ್ರತೆಯಿಂದ ಅವರಿಗೆ ತಿಳಿಸುತ್ತಿದ್ದೇನೆ. ಬಹುಶಃ ಪಿ ಡಬ್ಲ್ಯು ಇಲಾಖೆ ಮತ್ತು ವಿದ್ಯುಚ್ಛಕ್ತಿ ಇಲಾಖೆ ಹಿಂದೆ ಕ್ಷಾಮ ಪರಿಸ್ಥಿತಿ ಬಂದಾಗ ಯಾವ ಕಾಲದಲ್ಲೂ ಇಷ್ಟು ಪ್ರಮಾಣದಲ್ಲಿ ಕೆಲಸ ನಡೆಸಿಲ್ಲ ಎಂಬುದು ಇದರ ಬಗ್ಗೆ ಕೊಡುವ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಶ್ರೀ ಆರ್ಮುಗಂರವರು ಪ್ರವಾಸ ಮಾಡಿ ಅಲ್ಲಲ್ಲಿ ಕಂಡ ವಿಷಯಗಳನ್ನು ಅವರು ತಿಳಿಸಿದ್ದಾರೆ. ತಮಗೆ ಗೊತ್ತುಂಟು, ಅವರಿಗೆ ಕಾಲ ಸಾಕಷ್ಟಿರಲಿಲ್ಲ. ಇರತಕ್ಕ ಅಲ್ಪ ಕಾಲದಲ್ಲಿ ಅವರು ಸಮಗ್ರವಾದ ಇಡೀ ಪ್ರಾಂತವನ್ನೆಲ್ಲಾ ಸುತ್ತಿ ಯಾರು ಯಾರು ಏನು ಸಮಾಚಾರ ಕೊಟ್ಟರು ಅದರಮೇಲೆ ಸಾಧ್ಯವಾದಷ್ಟು ನೋಡಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಅಂದಾಕ್ಷಣ ಅವರು ಪ್ರತಿಯೊಂದು ವಿಷಯದಲ್ಲೂ ವಿಶೇಷ ರೀತಿಯಲ್ಲಿ ಅಮೂಲಾಗ್ರವಾಗಿ ಪರಿಶೀಲನೆ ಮಾಡಲು ಕಾಲಾವಕಾಶವಿರಲಿಲ್ಲ. ಆದುದರಿಂದ ಅನೇಕವೇಳೆ ಅವರಿಗೆ ಸತ್ಯವಾದ ಸಮಾಚಾರ ಬರುವುದು, ಒಂದೊಂದುವೇಳೆ ಸರಿಯಾದ್ದು ಬರುವುದಿಲ್ಲ, ಇಂಥ ವಿಷಯಗಳನ್ನು ಸತ್ಯವೆಂದು ನಂಬುವುದು ಸ್ವಾಭಾವಿಕ.

ಈಗ ಕೆಲಸವನ್ನೊದಗಿಸುವುದು ಪ್ರಾಮುಖ್ಯವಾದ ವಿಷಯ. ಜನರಿಗೆ ಇಂಥ ಕಾಲ ಬಂದಾಗ ಅನ್ನ ನೀರು ಒದಗಿಸುವುದರ ಜೊತೆಗೆ ಸಂಪಾದನಾ ಶಕ್ತಿ ಕೊಡಲು ಕೆಲಸ ಒದಗಿಸುವುದು ಬಹಳ ಮುಖ್ಯವಾದುದು. ಇದಕ್ಕೆ ಒಂದು ಲಿಮಿಟೇಷನ್ ಇದೆ. ಒಂದು ಕೆಲಸ ಮುಗಿದಮೇಲೆ ಬೇರೆ ಕೆಲಸ ಎಲ್ಲಿ ಏನಿದೆ ಎಂದು ನೋಡಿ ಕೊಡಬೇಕು. ಕೆಲಸಗಳು ಊರ ಹತ್ತಿರ ಸಿಕ್ಕುವುದು ಕಷ್ಟ, ಇರುವ ಕೆಲಸಗಳು ಕೆಲವು ವೇಳೆ ಮುಗಿಯುವವು; ಆಮೇಲೆ ದೂರ ಹೋಗಬೇಕು, ಇದಕ್ಕೆ ಸರಕಾರ ವ್ಯವಸ್ಥೆ ಮಾಡಬೇಕು, ಗುಲ್ಬರ್ಗ ಬಿದರೆ, ಬಿಜಾಪುರ, ಧಾರವಾಡ, ರಾಯಚೂರು ಮತ್ತು ಬೆಳಗಾಂ ಈ ೬ ಜಿಲ್ಲೆಗಳು ಕ್ಷಾಮಪೀಡಿತವಾಗಿವೆ ಎಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ, ಇದರ ಬಗ್ಗೆ ಕೈಕೊಂಡಿರುವ ಕಾರ್ಯಕ್ರಮ ತಿಳಿಸುತ್ತೇನೆ. ಈ ಜಿಲ್ಲೆಗಳಲ್ಲಿ ಒಟ್ಟು ೧೬ ಸಾವಿರದ ೨೭ ಕಿಲೋಮೀಟರುಗಳಷ್ಟು ರಸ್ತೆ ಕೆಲಸ ಕೈಕೊಂಡು ಅದರಲ್ಲಿ ಬಹುಭಾಗ ಮುಗಿದಿದೆ ನಮ್ಮ ಪಿ. ಡಬ್ಲ್ಯು. ಇಲಾಖೆಯಿಂದ ಜನರಿಗೆ ಕೆಲಸ ಕೊಡಲು ಒಟ್ಟು ೭ ಕೋಟಿ ೫೭ ಲಕ್ಷದ ೪೮ ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ, ರೂರಲ್ ಕಮ್ಯೂನಿಕೇಷನ್, ಪಿ. ಡಬ್ಲ್ಯು. ರಸ್ತೆ, ಮುಂತಾದುವುಗಳ ಬಗ್ಗೆ ಬರೇ ಕೆಲಸ ಒದಗಿಸುವುದಕ್ಕಾಗಿ ಇಷ್ಟು ಹಣ ವೆಚ್ಚವಾಗಿದೆ ೧೬ ಸಾವಿರದ ೨೭ ಕಿಲೋಮೀಟರು ರಸ್ತೆಯಾಗಿದೆ. ಇರುವ ರಸ್ತೆ ರಿಪೇರಿ ಜೊತೆಗೆ ಇಷ್ಟು ಕೆಲಸವಾಗಿದೆಯೆಂದ ಮೇಲೆ ಏನು ಬೃಹತ್ ಪ್ರಮಾಣದಲ್ಲಿ ಈ ಕೆಲಸಗಳು ಈ ನಾಲ್ಕಾರು ತಿಂಗಳಲ್ಲಿ ನಡೆದಿವೆ, ಜನರಿಗೆಷ್ಟು ಉದ್ಯೋಗ ಕೊಡಲಾಗಿದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇನ್ನೂ ಉದ್ಯೋಗಕ್ಕೆ ಅವಕಾಶ ಕಲ್ಪಿಸಬೇಕು ಎಂಬುದರಲ್ಲಿ ವಾದವಿವಾದವಿದೆ. ಮಾನ್ಯ ಸದಸ್ಯರು ಟೀಕೆಮಾಡುವಾಗ ಸರಕಾರದವರು ಸರಿಯಾಗಿ ಗಮನಕೊಟ್ಟಿಲ್ಲ ಎಂಬ ರೀತಿಯಲ್ಲಿ ಜನರಿಗೆ ಒಂದು ಭಾವನೆ ಬರುವ ರೀತಿಯಲ್ಲಿ ಟೀಕೆ ಮಾಡಿದ್ದು ಸರಿಯಲ್ಲ ಎಂದು ಬಹಳ ನಮ್ರತೆಯಿಂದ ಹೇಳುತ್ತಿದ್ದೇನೆ. ಸರಕಾರ ಈ ಬಗ್ಗೆ ಬಹಳ ಉತ್ಸಾಹದಿಂದ ಎಷ್ಟು ಕೆಲಸ ಮಾಡಿಸಲು ಸಾಧ್ಯವಾಗಿದೆಯೋ ಅಷ್ಟನ್ನೆಲ್ಲಾ ಮಾಡಲು ಪ್ರಯತ್ನಮಾಡಿದೆ. ಅದನ್ನು ಪ್ರತಿಪಾದಿಸಲು ಬೃಹತ್‌ಪ್ರಮಾಣದಲ್ಲಿ ಹಣ ಖರ್ಚಾಗಿದೆ, ಅಷ್ಟೇ ಅಲ್ಲ, ಅದರ ಪ್ರತಿಕ್ರಿಯೆ ಲಾಭ ರೂಪವಾಗಿ ಆಗಿದೆ ಎಂಬುದು ಕೂಡ ಸ್ಪಷ್ಟವಾಗಿದೆ.

ಇನ್ನು ಮೈನರ್ ಇರಿಗೇಷನ್. ಇದರಲ್ಲಿ ಆಕ್ಟೋಬರ್ ಕೊನೆಗೆ ಒಟ್ಟು ೧೧ ಕೋಟಿ ೧೪ ಲಕ್ಷದ ೫೬ ಸಾವಿರ ರೂಪಾಯಿಗಳನ್ನು ಈ ೬ ಜಿಲ್ಲೆಗಳಿಗೆ ಖರ್ಚಾಗಿದೆ. ಇದರಲ್ಲಿ ೭ ಕೋಟಿ ೫೭ ಲಕ್ಷ ಮತ್ತು ೧ ಕೋಟಿ ೧೪ ಲಕ್ಷ ಅಂದರೆ ಒಟ್ಟು ೮ ಕೋಟಿ ೭೧ ಲಕ್ಷ ಎರಡು ರೀತಿಯಲ್ಲಿ ಈ ೬ ಜಿಲ್ಲೆಗಳಿಗೆ ಮುಟ್ಟಿದೆ. ಮತ್ತು ಈಗ ಈ ಕೆಲಸಗಳು ಮುಗಿದಮೇಲೆ ಕೆಲಸ ಒದಗಿಸಲು ಗುಲ್ಬರ್ಗ, ಬಿದರೆ, ಬಿಜಾಪುರ, ಬೆಳಗಾಂ, ರಾಯಚೂರು ಧಾರವಾಡ ಮುಂತಾದ ಪ್ರದೇಶಗಳಲ್ಲಿ ಬಜೆಟ್ ಕೆಲಸವೇನಿದೆ ಮೈನರ್ ಇರಿಗೇಷನ್ ಕೆಲಸವೇನಿದೆ ಅಂದರೆ ೨ ಕೋಟಿ ೫೭ ಲಕ್ಷದ ೬೨ ಸಾವಿರ ರೂಪಾಯಿಗಳ ಬಜೆಟ್ ಕೆಲಸವೇನಿದೆ, ಅದರಿಂದ ಸುಮಾರು ೪೮೮೬೬ ಎಕರೆ ನೀರಾವರಿಯಾಗುವುದು, ಅದನ್ನು ನಮ್ಮ ಸರಕಾರದ ಮಂಜೂರಾತಿ ನಿರೀಕ್ಷೆ ಮಾಡದೆ ನಿರೀಕ್ಷೆಯಮೇಲೆ ಕೆಲಸ ಆ ಪ್ರದೇಶದಲ್ಲಿ ಪ್ರಾರಂಭಿಸಬಹುದು ಎಂದು ಆಜ್ಞೆ ಮಾಡಲಾಗಿದೆ. ಇದರ ಜೊತೆಗೆ ಈ ಕೆಲಸಗಳು ಸಾಲದೇಹೋದ ಪಕ್ಷದಲ್ಲಿ ಎಸ್ಟಿಮೇಟ್ ತಯಾರಾಗಿ ಫೈನಾನ್ಷಿಯಲ್ ಮತ್ತು ಟೆಕ್ನಿಕಲ್ ಫೀಸಿಬಲಟಿ ಇರುವ ೮೯ ಕೆಲಸಗಳು ಈ ೬ ಜಿಲ್ಲೆಗಳಲ್ಲಿವೆ, ಇದಕ್ಕೆ ೪ ಕೋಟಿ ೯೭ ಲಕ್ಷದ ೮೦

ಸಾವಿರ ರೂಪಾಯಿಗಳ ಅಂದಾಜಿದೆ, ಈ ಕೆಲಸಗಳು ಫೈನಾನ್ಷಿಯಲಿ ಮತ್ತು ಟೆಕ್ನಿಕಲಿ ಆಗಿರುವುದರಿಂದ ಮಂಜೂರಾತಿಗೆ ಕಾದಿವೆ. ಅವುಗಳ ಕೆಲಸ ಪ್ರಾರಂಭಿಸಬಹುದು ಎಂದು ಆಜ್ಞೆ ಕೊಟ್ಟಿದೆ. ಮೈನರ್ ಇರಿಗೇಷನ್ ಕೆಲಸ ಮಾಡಲು ಎರಡು ಕಂಡೀಷನ್ ಸರಕಾರ ಹಾಕಿದೆ. ಒಂದು ಭೂಮಿ ಸಿದ್ಧವಾಗಿರಬೇಕು, ಕೆಲಸಮಾಡುವ ಕ್ಷೇತ್ರವಲ್ಲ, ಅಮರ್ಗಂರವರು ಹೇಳಿದಂತೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲು ತೊಂದರೆ ಇದೆ. ಎರಡನೆಯದು ಕನಸಾಲಿಡೇಷನ್ನಿಗೆ ನೀರಿಲ್ಲದಿದ್ದರೆ, ಒಂದೆರಡು ಮೈಲಿ ದೂರದಲ್ಲಿದ್ದರೆ ತಂದು ಹಾಕಿ ಕೆಲಸಮಾಡಬಹುದು, ನೀರು ಸಿಕ್ಕದಿರುವ ಕಡೆ ಮೈನರ್ ಇರಿಗೇಷನ್ ಕೆಲಸ ಮಾಡುವುದರಿಂದ ಹಣ ಪೋಲಾಗುತ್ತದೆ ಎಂದು ಎರಡು ಕಂಡೀಷನ್ ಹಾಕಿ ಆಜ್ಞೆ ಮಾಡಲಾಗಿದೆ.

ಇನ್ನು ರೂರಲ್ ವಾಟರ್ ಸಪ್ಲೈ ರಿಪೋರ್ಟ್‌ನಲ್ಲೂ ಕೂಡಹೇಳಿದ್ದಾರೆ. ಅಲ್ಲಿ ೦ ಪರ್ಸೆಂಟ್ ಕೊಡಬೇಕು ಅಂತ ಏನು ಇದೆ ಅದು ಎನ್ ಆರ್ ಡಬ್ಲ್ಯು. ಸ್ಕೀಮ್‌ನಲ್ಲೂ ಇತ್ತು. ಆದುದರಿಂದ ನೀವು ಈಗ ಕೇಳತಕ್ಕಂಥಾದ್ದು ಸರಿಯಲ್ಲ. ಎನ್. ಆರ್. ಡಬ್ಲ್ಯು ಸ್ಕೀಮ್‌ನಲ್ಲಿ ಬಾವಿ ತೆಗೆಯುವುದು ಒಂದೇ ಅಲ್ಲ. ಪ್ರತಿ ಮನೆಗಳಿಗೂ ನಲ್ಲಿಗಳನ್ನು ಕೊಡತಕ್ಕಂಥಾದ್ದು ಇದೆ. ಈಗ ನಾವು ರಿಗ್ಸ್‌ಗಳನ್ನು ಉಪಯೋಗ ಮಾಡಿ ಅಲ್ಲಿ ನೀರನ್ನು ಒದಗಿಸಲಾಗುತ್ತಿದೆ. ನಾವು ಯಾರನ್ನೂ ಒಂದಾಣೆ ಕೇಳುತ್ತಾ ಇಲ್ಲ. ಆದುದರಿಂದ ನೀವು ಈ ಬಗ್ಗೆ ಕಳವಳ ಪಡಬೇಕಾದ್ದಿಲ್ಲ. ಇದರಲ್ಲಿ ಈ ವರ್ಷದಲ್ಲಿ ಖರ್ಚಾಗಿರತಕ್ಕಂಥಾದ್ದು ೬ ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದೆ. ಎನ್.ಆರ್.ಡಬ್ಲ್ಯು. ಮತ್ತು ೬೪ ಫ್ಯಾಮಿನ್‌ನಲ್ಲಿ ನೀರನ್ನು ಒದಗಿಸುವುದಕ್ಕೆ ೮೫ ಲಕ್ಷ ೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಇನ್ನು ಟ್ರಾನ್ಸ್‌ಮಿಷನ್ ಲೈನ್ ವಿಷಯ ಅನೇಕರು ಹೇಳಿದರು. ಶ್ರೀಮಾನ್ ಚೆನ್ನಬಸಪ್ಪನವರು ಎಲ್ಲಾ ಕಡೆ ಬಂದು ಏನು ಮಾತು ಕೊಟ್ಟರೋ ಅದರಂತೆ ನಡೆದು ಕೊಂಡಿಲ್ಲಾ ಎಂದು ಕೆಲವರು ಹೇಳಿದರು. ನೀವು ಅಲ್ಲಿಗೆ ಹೋದಾಗ ಅನೇಕ ಜನ ಬರುತ್ತಾರೆ. ಅನೇಕ ರೀತಿಯಲ್ಲಿ ಹೇಳುತ್ತಾರೆ, ಅದು ಸರಿಯೋ ತಪ್ಪೋ ಎನ್ನುವುದನ್ನು ತಿಳಿದು ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನೀವೆ ಖುದ್ದಾಗಿ ಹೋಗಿ ಪ್ರತಿಯೊಂದನ್ನು ನೋಡುವುದಕ್ಕಾಗುವುದಿಲ್ಲ. ಈ ಸಬ್ ಟ್ರಾನ್ಸ್‌ಮಿಷನ್ ಲೈನ್‌ನ್ನು ನದಿ ದಂಡೆಯಲ್ಲಿ ಎಳೆಯುವುದಕ್ಕೆ ಏರ್ಪಾಡು ಮಾಡಿ ೧೭೨ ಕಿಲೋ ಮೀಟರ್ ಉದ್ದದ ಲೈನ್‌ನ್ನು ಎಳೆದಿದ್ದಾರೆ. ಇನ್ನು ಭೀಮಾ ಮತ್ತು ಅಪ್ಪರ್ ಕೃಷ್ಣ ನದಿ ದಂಡೆಗಳಲ್ಲಿ ಈಗಾಗಲೇ ಲೈನ್‌ನ್ನು ಎಳೆಯುತ್ತಿದ್ದಾರೆ. ಅನೇಕ ಕಡೆ ಸುಮಾರು ೭೦-೭೫ ರಷ್ಟು ಕೆಲಸ ಪೂರೈಸಿದೆ. ಅದು ಈ ತಿಂಗಳ ಕೊನೆ ಒಳಗೋ ಅಥವಾ ಆದಕ್ಕಿಂತ ಹೆಚ್ಚು ಎಂದರೆ ಮುಂದಿನ ತಿಂಗಳು ಮೊದಲನೇ ವಾರದೊಳಗೋ ಅದು ಸಿದ್ಧವಾಗುವುದರಲ್ಲಿದೆ.

ಶ್ರೀ ಎಸ್. ವೈ. ಪಾಟೀಲ್ : ಈಗ ತಾವು ಒಟ್ಟು ೧೭೨ ಕಿಲೋ ಮೀಟರ್ ಉದ್ದದಷ್ಟು ಲೈನ್ ಎಳೆದಿದ್ದಾರೆ ಎಂದು ಹೇಳುತ್ತೀರಿ. ಭೀಮಾ ನದಿ ದಂಡೆ ಹತ್ತಿರ ಯಾವ ಯಾವ ಊರು ಕಡೆ ಲೈನ್ ಎಳೆದಿದ್ದೀರಾ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ಅಲ್ಲಿ ನೀವು ಹೋಗಿ ನೋಡಿದರೆ ಕಾಣುತ್ತದೆ. ಗುಲ್ಬರ್ಗ ಜಿಲ್ಲೆ ಒಳಗೆ ೧೫ ಕಿಲೋ ಮೀಟರ್, ಗುಲ್ಬರ್ಗದ ಹತ್ತಿರ ಭೀಮಾ ನದಿ ದಂಡೆ ೫೬ ಕಿಲೋ ಮೀಟರ್ ಅಷ್ಟು ಲೈನ್ ಎಳೆದಿದ್ದಾರೆ.

ಶ್ರೀ ಎಸ್. ವೈ. ಪಾಟೀಲ್ : ಇಂಡಿ ಮತ್ತು ಸಿಂಧಗಿ ತಾಲ್ಲೂಕಿಗೆ ಲೈನ್ ಎಳೆದಿದ್ದೀರಾ ? ವಿಧಾನಸೌಧಕ್ಕೆ ಲೈಟ್ ಹಚ್ಚಿದರೆ ನಮ್ಮ ಮನೆಗೆ ಲೈಟ್ ಹಚ್ಚಿದ ಹಾಗಾಯಿತೆ ಎಂದು ಕೇಳುತ್ತೇನೆ.

ಶ್ರೀ ಹೆಚ್. ಎಂ ಚೆನ್ನಬಸಪ್ಪ : ನಿಮ್ಮ ಊರಿಗೂ ಬರುತ್ತದೆ. ಬೀದರ ಜಿಲ್ಲೆಯ ಮಂಜ್ರಾನದಿ ದಂಡೆ ಹತ್ತಿರ ೩೨ ಕಿಲೋ ಮೀಟರ್, ಬಿಜಾಪುರದಲ್ಲಿ ೫೬ ಕಿಲೋ ಮೀಟರ್, ಕೃಷ್ಣಾಕ್ಕೆ ೪ ಕಿಲೋ ಮೀಟರ್ ಮತ್ತು ರಾಯಚೂರು ಡಿಸ್ಟ್ರಿಕ್ಟ್‌ನಲ್ಲಿ ಸುಮಾರು ೮೦ ಕಿಲೋ ಮೀಟರ್ ಒಟ್ಟು ೧೭೨ ಕಿಲೋ ಮೀಟರ್ ಲೈನ್ಸ್ ಎಳೆದಿದ್ದಾರೆ. ಆದಕ್ಕಾಗಿ ಒಟ್ಟು ೧೭ ಲಕ್ಷ ೨೦ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಈ ಕೆಲಸ ನಡೆದಿದೆ. ಇನ್ನು ೮-೧೦ ವರ್ಷದಲ್ಲಿ ಈ ವಿದ್ಯುಚ್ಛಕ್ತಿ ಕೆಲಸ ಪೂರೈಸುತ್ತದೆ. ಆಗ ವಿದ್ಯುಚ್ಛಕ್ತಿ ಎಲ್ಲರಿಗೂ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಇದು ಸ್ಪಷ್ಟವಾದ ವಿಷಯ ಎಂದು ಹೇಳುತ್ತೇನೆ. ಮತ್ತೆ ಶ್ರೀಮಾನ್ ವಿ. ಎನ್. ಪಾಟೀಲರು ಹೇಳಿದರು. ವಿದ್ಯುಚ್ಛಕ್ತಿಯು ೩ ದಿವಸದಲ್ಲೇ ಬಂದುಬಿಡುತ್ತೆ ಎಂದು ಮಾನ್ಯ ಸಚಿವರು ಹೇಳಿದರು ಅಂತ ಹೇಳಿದರು. ಆದಕ್ಕೆ ನಾನು ಮೊದಲೇ ಉತ್ತರ ಕೊಟ್ಟಿದ್ದೇನೆ. ಮನುಷ್ಯನಾದವನು ಎಷ್ಟು ವೇಗದಲ್ಲಿ ಕೆಲಸ ಮಾಡಬೇಕೋ ಅಷ್ಟು ವೇಗದಲ್ಲಿ ಕೆಲಸ ಮಾಡಿದ್ದಾನೆ ಎಂದು ನಾನು ಸ್ಪಷ್ಟಪಡಿಸುತ್ತೇನೆ.

SRI H. D. DEVEGOWDA : You are a Superhuman.

ಶ್ರೀ ಎಚ್. ಎಂ. ಚೆನ್ನಬಸಪ್ಪ : ನಾನು ಸೂಪರ್‌ಹ್ಯೂಮನ್ ಅಲ್ಲ. ನಾನು ಒಬ್ಬ ಸಾಮಾನ್ಯ ಮನುಷ್ಯನಾಗಿರುವುದರಿಂದ ಈಗ ನಿಮ್ಮ ಜೊತೆಯಲ್ಲಿ ಕುಳಿತು ಕೊಂಡಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್ : ಪವರ್ ಕಟ್‌ನಿಂದ ಏನಾದರೂ ತೊಂದರೆ ಬಂದಿಯೋ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ವ್ಯವಸಾಯಕ್ಕೆ ಪವರ್ ಕಟ್ ಅನ್ವಯಿಸುವುದಿಲ್ಲ.

ಶ್ರೀ ಎಸ್. ವೈ. ಪಾಟೀಲ್ : ನೀವು ಬಹಳ ವೇಗದಲ್ಲಿ ಮಾಡಿದ್ದೇವೆ ಎಂದು ಹೇಳಿದ್ದೀರಿ. ಈ ವೇಗಕ್ಕೆ ಈಗ ಯಾವ ತೊಂದರೆಗಳು ಬಂದಿವೆ ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ಆ ವೇಗದಲ್ಲಿ ಹೋಗಲು ಈಗಲೂ ಏನೂ ತೊಂದರೆ ಇಲ್ಲ. ಆದರೆ ಈಗ ಇರತಕ್ಕಂಥ ತೊಂದರೆ ಏನು ಎಂದರೆ ಸೌತ್ ಕೆನರಾದಿಂದ ಪೋಲುಗಳನ್ನು ಭದ್ರಾ ಗುಲ್ಬರ್ಗಾ ಜಿಲ್ಲೆಗಳಿಗೆ ಕಳುಹಿಸಬೇಕು ಎಂದರೆ ಸಾಮಾನ್ಯ ಕೆಲಸವೇ ? ಅವಕ್ಕೆ ಬೇಕಾದ ಸಾಮಾನುಗಳು ತಕ್ಷಣಸಿಕ್ಕುತ್ತವೆಯೋ ? ಪ್ರಾಜೆಕ್ಟ್‌ಗಳು ಸ್ಯಾಂಕ್ಷನ್ ಆಗಿದ್ದ ಮಾತ್ರಕ್ಕೇ ಪ್ರಾಜೆಕ್ಟ್‌ಗಳ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಕಾಲಾವಕಾಶ ಬೇಡವೇ ? ಗುಲ್ಬರ್ಗಾಕ್ಕೆ ಸಾಮಾನುಗಳನ್ನು ಕಳುಹಿಸಬೇಕಾದರೆ ಕಾಲಾವಕಾಶ ಬೇಡವೇ ? ಪೋಲುಗಳನ್ನು ಹೊತ್ತುಕೊಂಡು ಹೋಗಬೇಕಾದರೆ ಸಾಮಾನ್ಯವಾದ ಲಾರಿಗಳಲ್ಲಿ ಆಗುವುದಿಲ್ಲ. ಅದಕ್ಕೆ ಸ್ಪೆಷಲ್ ಲಾರಿಗಳಲ್ಲಿ ಕಳುಹಿಸಬೇಕಾಗುತ್ತದೆ. ಆ ಲಾರಿಗಳು ಇರುವುದು ಅತ್ಯಲ್ಪ. ಆ ಲಾರಿಗಳಲ್ಲಿ ಹಗಲೂರಾತ್ರಿ ಹೇರಿಕೊಂಡು ಹೋಗಬೇಕು. ಅಲ್ಲದೆ ಭೀಮಾ, ಕಾರಂಜಾ ಮಂಜ ಮತ್ತು ಅಪ್ಪರ್ ಕೃಷ್ಣಾ ಇವುಗಳಿಗೆ ಹೋಗುವ ರಸ್ತೆಗಳು ಸರಿಯಾಗಿಲ್ಲ. ಅಂಥಾ ಕಡೆ ಬಹಳಕಷ್ಟಪಟ್ಟು ಈ ಪೋಲುಗಳನ್ನು ತೆಗೆದುಕೊಂಡು ಹೋಗಬೇಕು. ಅಲ್ಲಿ ವೈರ್ ಹಾಕಬೇಕು, ಪೋಲ್ಸ್ ಹಾಕಬೇಕು, ಟೆಕ್ನಿಕಲ್ ಫೀಸಬಿಲಿಟಿ ಇದನ್ನೆಲ್ಲಾ ಎಕ್ಸಾಮಿನ್ ಮಾಡಬೇಕು. ಸರ್ವೆ ಮಾಡಬೇಕು, ಪೊಟೆನ್‌ಷಿಯಾಲಿಟಿ ಮಾಡಬೇಕು, ಈ ರೀತಿಯ ಅನೇಕ ಕಷ್ಟಗಳು ಇವೆ.

ಇನ್ನು ಲಿಫ್ಟ್ ಇರ್ರಿಗೇಷನ್ ಸ್ಕೀಮ್ ಬಗ್ಗೆ ಹೇಳಿದ್ದಾರೆ. ನಾನು ಆ ಪ್ರಾಂತದಲ್ಲಿ ಪ್ರವಾಸ ಮಾಡಿದ ಕಾಲದಲ್ಲಿ ಅಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಈ ನದಿ ದಂಡೆಗಳಲ್ಲಿ ಮಾಡಬೇಕು ಎಂದು ಹೇಳಿರುವುದು ನಿಜ. ಶ್ರೀಮಾನ್ ಹುಚ್ಚಮಾಸ್ತಿಗೌಡರೂ ಕೂಡ ಹೇಳಿದ್ದಾರೆ. ಈಗ ನಮ್ಮಲ್ಲಿ ೬ ಜಿಲ್ಲೆಗಳಲ್ಲಿ ೨೬ ಲಕ್ಷ ರೂಪಾಯಿಯಷ್ಟು ಲಿಫ್ಟ್ ಇರ್ರಿಗೇಷನ್ ವರ್ಕ್ಸನ್ನು ತೆಗದುಕೊಂಡಿದ್ದೇವೆ. ಮತ್ತು ಅದರ ಎಸ್ಟಿಮೇಟೆಡ್ ಕಾಸ್ಟ್ ೧೪೨-೮೮ ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಕೆಲಸ ನಡೆಯುತ್ತಾ ಇದೆ. ಮತ್ತು ೧೬ ಲಿಫ್ಟ್ ಇರ್ರಿಗೇಷನ್ ಸ್ಕೀಮುಸ್ ೪೨.೩೫ ಲಕ್ಷ ರೂಪಾಯಿ ಅಂದಾಜಿನಲ್ಲಿ ಸ್ಯಾಂಕ್ಷನ್ ಆಗಿವೆ. ಅದು ಕೆಲವು ಫೆಬ್ರವರಿಯಲ್ಲಿ ಕಮೀಷನ್ ಆಗುತ್ತದೆ, ಕೆಲವು ಮಾರ್ಚಿನಲ್ಲಿ ಕಮೀಷನ್ ಆಗುತ್ತವೆ. ಈಗ ನಮ್ಮಲ್ಲಿ ಸುಮಾರು ೧೫೧ ಸ್ಕೀಮುಗಳು ತಯಾರಾಗಿವೆ. ಅದಕ್ಕೆ ಎಸ್ಟಿಮೇಟೆಡ್ ಕಾಸ್ಟ್ ೧ ಕೋಟಿ ೬೮ ಲಕ್ಷ ೩.೬೮ ಸಾವಿರ ರೂಪಾಯಿ ಆಗುತ್ತದೆ. ಅದನ್ನು ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ. ಎಲ್ಲೆಲ್ಲಿಗೆ ಮತ್ತು ಎಷ್ಟರಮಟ್ಟಿಗೆ ಇದನ್ನು ಒದಗಿಸಿ ಕೊಡಬೇಕು ಎಂಬುದು ಸರ್ಕಾರದ ಪರಿಶೀಲನೆಯಲ್ಲಿದೆ ಪಿ. ಡಬ್ಲ್ಯು. ಇಲಾಖೆಯಲ್ಲಿ ಎಷ್ಟರಮಟ್ಟಿಗೆ, ಎಷ್ಟು ಪ್ರಮಾಣದಲ್ಲಿ ಕೆಲಸ ನಡೆದಿದೆ ಎನ್ನುವ ಬಗ್ಗೆ ಇಷ್ಟು ವಿಷಯ ಮಾತ್ರ ಹೇಳಿದ್ದೇನೆ.

ಇನ್ನು ಈ ಮಧ್ಯೆ ಕಾರಂಜಿ ಪ್ರಾಜೆಕ್ಟ್ ಕೆಲಸ ಶುರು ಮಾಡಿ ಈಗ ಅಲ್ಲಿ ಜನಗಳು ಹೋಗಿ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಕೆಲಸ ನಡೆಯುತ್ತಾ ಇದೆ. ಮತ್ತು ಸಾಧ್ಯವಾದಷ್ಟು ಮಟ್ಟಿಗೆ ಜನಗಳಿಗೆ ಎಷ್ಟು ಪ್ರಮಾಣದಲ್ಲಿ ಕೆಲಸವನ್ನು ಕೊಡವುದಕ್ಕೆ ಸಾಧ್ಯವೋ ಅಷ್ಟು ಮಟ್ಟಿಗೆ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಅಲ್ಲಿ ಎಕ್ಸಿಕ್ಯೂಟೀವ್ ಇಂಜನೀಯರು ೩ ಸಾವಿರ ಜನರ ಮೇಲೆ ಕೆಲಸ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ.

ಶ್ರೀ ಹೆಚ್. ಎಂ. ಚೆನ್ನಬಸಪ್ಪ : ೩ ಸಾವಿರ ಜನಕ್ಕಿಂತಲೂ ಹೆಚ್ಚು ಜನ ಇದ್ದರೆ ಅಂಥಾವರಿಗೆ ಎಲ್ಲಿ ಕೆಲಸಕೊಡಬೇಕು ಎನ್ನುವುದನ್ನು ಆಮೇಲೆ ನೋಡೋಣ.

ಶ್ರೀ ಬಾಪೂಗೌಡ ರಾಯಪ್ಪ : ಅಲ್ಲಿ ಇರುವವರು ೨೫೦೦. ಜನರು ಹಳೇ ಲೇಬರರ್ಸ್. ಈಗ ಹೊಸದಾಗಿ ಲೇಬರಲ್ಸ್‌ನ್ನು ತೆಗೆದುಕೊಂಡಿಲ್ಲ.

ಶ್ರೀ ಹೆಚ್. ಎಂ ಚೆನ್ನಬಸಪ್ಪ : ಈಗ ಚೀಫ್ ಇಂಜನೀಯರ್‌ರವರಿಂದ ವರದಿ ಬಂದಿದೆ. ಇನ್ನು ಸಾಕಷ್ಟು ಜನ ಅಲ್ಲಿಗೆ ಬೇಕು ಎಂದು ಅವರು ಕೇಳಿದ್ದಾರೆ. ಮತ್ತು ಇನ್ನು ಅಷ್ಟು ಸಂಖ್ಯೆಯಲ್ಲಿ ಇಂಜನೀಯರ್ಸ್‌ನ್ನು ಈ ಹೊತ್ತು ಸಂಜೆ ಒಳಗೋ ಅಥವಾ ನಾಳೆ ಸಂಜೆಯ ಒಳಗೋ ಕಳುಹಿಸಿ ಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ : ತಾವು ಸಂಜೆ ಒಳಗೋ ಅಥವಾ ನಾಳೆ ಸಂಜೆ ಒಳಗೋ ಅವರನ್ನು ಕಳುಹಿಸಿ ಕೊಡುತ್ತೇನೆ ಎಂದು ಹೇಳುತ್ತೀರಿ. ಒಂದು ವೇಳೆ ಸಾವಕಾಶ ವಾದರೆ ಮುಂದಿನ ಅಸೆಂಬ್ಲಿ ಸೇರಿದಾಗ ನಾವು ಕೇಳಿದರೆ ಅವರುಗಳು ಅಷ್ಟು ದೂರ ಬಸ್ಸಿನಲ್ಲಿ ಪ್ರಯಾಣ ಮಾಡಬೇಕಾದರೆ ಸಾಕಷ್ಟು ಟೈಂ ಬೇಡವೇ, ಅವರು ಇಲ್ಲಿಂದ ಅಲ್ಲಿಗೆ ಹೋಗಬೇಡವೇ? ಈ ರೀತಿ ಏನಾದರೂ ಒಂದು ಕಾರಣ ಹೇಳುತ್ತೀರಾ ?

ಶ್ರೀ ಎಚ್.ಎಂ. ಚನ್ನಬಸಪ್ಪ.— ಇಂಜಿನಿಯರ್ಸ್ ಎಲ್ಲಿ ಸಾಲದು ಎಂದು ತಿಳಿಸಿದ್ದಾರೆ ಅಲ್ಲಿಗೆ ಇಂಜಿನಿಯರ್ಸ್‌ಗಳನ್ನು ಪ್ರೊಮೋಟ್ ಮಾಡುವುದಕ್ಕೆ ಅನೇಕ ಅಡ್ಡಿ ಆತಂಕಗಳನ್ನು ತಂದಿರುವವರು ನೀವೆ. ಈಗ ಪ್ರಮೋಟ್ ಮಾಡಿ ಎಷ್ಟು ಜನ ಇಂಜಿನಿಯರ್ಸ್‌ಗಳು ಬೇಕು ಕಳುಹಿಸಿಕೊಡುತ್ತೇವೆ. ಎಷ್ಟು ಬೃಹತ್ ಪ್ರಮಾಣದಲ್ಲಿ ಕೆಲಸ ಜನಗಳಿಗೆ ಒದಗಿಸಬೇಕೋ ಅಷ್ಟು ಒದಗಿಸುತ್ತೇವೆ ಎಂಬ ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಕಾಳಿನದಿ ಪ್ರಾಜೆಕ್ಟ್‌ನಲ್ಲಿ ೧೦ ಸಾವಿರ ಜನಗಳಿಗೆ ವ್ಯವಸ್ಥೆ ಮಾಡುವುದಕ್ಕೆ ಆಜ್ಞೆ ಮಾಡಿದ್ದೇನೆ. ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಯಿಂದ ಪುಕ್ಕಸಾಟೆ ಹೋಗುವುದಕ್ಕೆ ಬರುವುದಕ್ಕೆ ಏರ್ಪಾಟು ಮಾಡಿದ್ದೇವೆ ಮನೆಗಳ ವ್ಯವಸ್ಥೆ ಮಾಡಿಕೊಡುತ್ತೇವೆ. ವಿದ್ಯುಚ್ಛಕ್ತಿ ಪುಕ್ಕುಸಾಟೆ ಸರಬರಾಯಿ ಮಾಡುತ್ತೇವೆ. ಕುಡಿಯುವ ನೀರು ಸರಬರಾಯಿ ಮಾಡುತ್ತೇವೆ ಎಲ್ಲಾ ಅನುಕೂಲಗಳನ್ನು ೬ ತಿಂಗಳವರೆಗೆ ಸಮಗ್ರವಾಗಿ ಒದಗಿಸುತ್ತೇವೆ. ದಯವಿಟ್ಟು ಯಾವಯಾವ ಜಿಲ್ಲೆಯಿಂದ ಎಷ್ಟೆಷ್ಟು ಜನ ಬರುತ್ತಾರೆ ತಿಳಿಸಿ. ಅಲ್ಲಿಂದ ಕರೆದುಕೊಂಡು ಹೋಗಿ ಕೆಲಸ ತೀರದ ಮೇಲೆ ಸೌಖ್ಯವಾಗಿ ಅವರನ್ನು ವಾಪಸ್ ಕರೆದುಕೊಂಡು ಬರುವ ಜವಾಬ್ದಾರಿಯನ್ನು ಪವರ್ ಕಾರ್ಪೊರೇಷನ್ ವಹಿಸಿಕೊಳ್ಳುತ್ತದೆ.

ಶ್ರೀ ಬಾಪೂಗೌಡ ರಾಯಪ್ಪ — ೧೦ ಸಾವಿರ ಮಂದಿ ಸಲುವಾಗಿ ಸ್ಪೆಷಲ್ ಟ್ರೈನ್ ಏರ್ಪಾಡು ಮಾಡಿ ೧೦ ಸಾವಿರ ಮಂದಿ ಗುಲ್ಬರ್ಗ ಜಿಲ್ಲೆಯಿಂದ ನೇರವಾಗಿ ಅಲ್ಲಿಗೆ ಹೋಗತಕ್ಕ ಜನಗಳನ್ನು ಕೊಡತಕ್ಕ ಆಶ್ವಾಸನೆ ಕೊಡುತ್ತೇನೆ. ಲಾರಿಯಲ್ಲಿ ಬರಲಿಕ್ಕಿಲ್ಲ. ಒಂದು ಟ್ರೈನ್ ಲೋಡ್ ೨ ಟ್ರೈನ್ ಲೋಡ್ ವ್ಯವಸ್ಥೆ ಮಾಡಿ ಗುಲ್ಬರ್ಗ ಸ್ಟೇಷನ್ನಿಗೆ ತಂದು ಬಿಡತಕ್ಕ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್.ಎಂ. ಚನ್ನಬಸಪ್ಪ — ಅಷ್ಟು ಜವಾಬ್ದಾರಿ ತೆಗೆದುಕೊಳ್ಳುವುದಾದರೆ ಸಂತೋಷ. ಪ್ರಶ್ನೆ ಏನೆಂದರೆ ಕೆಲಸ ಆಗಬೇಕು. ೧೦ ಸಾವಿರ ಜನರು ಒಂದೇ ಊರಿನಲ್ಲಿ ಸಿಕ್ಕುವುದಿಲ್ಲ.

ಶ್ರೀ ಬಾಪೂಗೌಡ ರಾಯಪ್ಪ. — ಗುಲ್ಬರ್ಗ ಜಿಲ್ಲೆ ಎಲ್ಲಾ ತಾಲ್ಲೂಕುಗಳಿಂದ ಸೇರಿಸಿಕೊಡುತ್ತೇನೆ

ಶ್ರೀ ಎಚ್.ಎಂ. ಚನ್ನಬಸಪ್ಪ. — ನೀವು ಜನಗಳನ್ನು ಕರೆದುಕೊಂಡು ಬಂದರೆ ಕೆಲಸ ಒದಗಿಸುತ್ತೇವೆ. ಮಧ್ಯಾಹ್ನ ಬನ್ನಿ ಆಫೀಸಿನಲ್ಲಿ ಕೂತುಕೊಂಡು ಚರ್ಚೆಮಾಡಿ ಯಾವಯಾವ ರೀತಿ ಆಗಬೇಕು ಬಸ್ಸು ಹೊರಡಿಸಬೇಕು ಯಾವಯಾವ ಊರಿನಿಂದ ರೈಲು ಮಾಡಬೇಕು ಎಂಬುದನ್ನು ನಿರ್ಧಾರಮಾಡಿ ಹಾಗೆ ಮಾಡೋಣ. ೧೦ ಸಾವಿರ ಜನಗಳಿಗೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಬಾಪೂಗೌಡ ರಾಯಪ್ಪ. — ನಾವು ಕತೆ ಹೇಳುವುದಿಲ್ಲ ಇದ್ದ ಮಾತು ಹೇಳುತ್ತಿದ್ದೇನೆ. ಗುಲ್ಬರ್ಗಾದಿಂದ ಟ್ರೈನ್ ಹೊರಡುವುದು ಇದೆ ಎಂದು ಜನಗಳಿಗೆ ಪಾಂಪ್‌ಲೆಟ್ ಹಂಚಿ ತಿಳಿಸುತ್ತೇವೆ. ಅವರನ್ನು ಕರೆದುಕೊಂಡು ಬಂದು ಟ್ರೈನಿಗೆ ಕೂರಿಸುತ್ತೇವೆ.

SRI H.M. CHANNABASAPPA.— I am making an announcement on the floor of the house requesting you to help me to collect people and give me those people. I will transport them and make arrangement for providing work for period of six months 150 ಲಿಫ್ಟ್ ಇರಿಗೇಷನ್ ಸ್ಕೀಮುಗಳಿಗೆ ೬ ಕೋಟಿ ೮೦ ಲಕ್ಷ ರೂಪಾಯಿ ವೆಚ್ಚವಾಗುತ್ತದೆ.

ಶ್ರೀ ಶರಣಪ್ಪ. — ಲಿಫ್ಟ್ ಇರಿಗೇಷನ್ ಸ್ಕೀಂಗಳು ಬೇರೆ ಯಾವುವೂ ಪ್ರಾರಂಭವಾಗಿಲ್ಲ.

ಶ್ರೀ ಎಚ್.ಎಂ. ಚನ್ನಬಸಪ್ಪ. — ನಾವು ಚರ್ಚೆ ಮಾಡುವುದು ಬೇಡ. ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಇದರ ಜೊತೆಯೊಳಗೆ ಹೇಗೆ ಆಗಬೇಕು ಎಂಬುದನ್ನು ಚರ್ಚೆಮಾಡಿ ಆ ರೀತಿ ಮಾಡೋಣ. ಅದೇನು ದೊಡ್ಡ ವಿಷಯವಲ್ಲ. ಕಂಟ್ರಾಕ್ಟರ್‌ಗಳ ವಿಷಯ ಮಾನ್ಯ ಶ್ರೀ ಕೃಷ್ಣನ್‌ರವರು ಪ್ರಸ್ತಾಪ ಮಾಡಿದ್ದಾರೆ. ನಾನು ಸ್ಪಷ್ಟಪಡಿಸುತ್ತಿದ್ದೇನೆ ಪಿ.ಡಬ್ಲ್ಯೂ.ಡಿಯಲ್ಲಿ ಏನು ಕಲಸ ನಡೆಯುತ್ತಾ ಇದೆ ಎಂದರೆ ಕಂಟ್ರಾಕ್ಟರ್ ಮೂಲಕ ನಡೆಯುತ್ತಾ ಇಲ್ಲ. ಪೀಸ್ ವರ್ಕರ್ಸ್ ಕೂಡ ರೆಗ್ಯೂಲರ್ ಕಂಟ್ರಾಕ್ಟರ್‌ಗಳನ್ನು ಹಿಡಿದುಕೊಂಡಿಲ್ಲ. ಎಲ್ಲೆಲ್ಲಿ ಗ್ಯಾಂಗ್ ಲೀಡರ್ಸ್, ವಿಲೇಜ್ ಲೀಡರ್ ಇದ್ದಾರೆ ಜನಗಳು ಯಾರು ಕೆಲಸ ಮಾಡುತ್ತಾರೆ ಅಂತಹವರಿಗೆ ಕೆಲಸಮಾಡಿಸಿ ಎಂದು ಹೇಳಿ ಅವರ ಕೈಗೆ ಕೊಡುತ್ತೇವೆ. ಅದು ಈಗ ಇರತಕ್ಕ ಪದ್ಧತಿ. ಮತ್ತೆ ಲಿಸ್ಟ್ ಮೆಯಿಂಟೇನ್ ಮಾಡಿ ೬ಳಿ ಫ್ಯಾಮಿನ್ ಪ್ರಕಾರ ಯಾವ ರೀತಿ ಕೆಲಸ ನಡೆಯಬೇಕು ಆ ರೀತಿ ನಡೆಸುತ್ತಿದ್ದೇವೆ.

SRI H.D. DEVEGOWDA— Don't try to mislead the house, Actual payment is made based on the work turned out. It will be measured. ಅದು 64 famine ನಲ್ಲಿ ಇದೆ.

SRI C.M. ARUMUGAM— All the works are given to the regular PWD contractors and not to the piece workers. In Ramadurg Taluk 75% of the work has been given to the regular PWD contractors.

ಶ್ರೀ ಎಚ್.ಎಂ. ಚನ್ನಬಸಪ್ಪ— ಕಂಟ್ರಾಕ್ಟರ್‌ಗಳಿಗೆ ಕೊಡತಕ್ಕದ್ದು ಏಕೆಂದರೆ ಅದಕ್ಕೆ ಕೆಲವು ಪ್ರೊಸೀಜರ್ಸ್ ಇವೆ.

ಶ್ರೀ ಎಚ್.ಡಿ. ದೇವೇಗೌಡ— ೧೦ ಸಾವಿರ ಪೀಸ್ ವರ್ಕರ್ ಕಲೆಕ್ಟ್ ಮಾಡಬಹುದು.

ಶ್ರೀ ಎಚ್.ಎಂ. ಚನ್ನಬಸಪ್ಪ.— ವಿಲೇಜ್ ಲೀಡರ್ಸ್ ಏನು ಇದ್ದಾರೆ ಅವರನ್ನು ಪೀಸ್ ವರ್ಕರ್ಸ್ ಎಂದು ಕನ್ಸಿಡರ್ ಮಾಡಿಕೊಂಡು ಅವರಿಗೆ ಕೊಡುತ್ತಿದ್ದೇವೆ. ಇದರ ಜೊತೆಗೆ ಅವರು ಕಂಟ್ರಾಕ್ಟ್ ಮಾಡುವ ಹಾಗಿಲ್ಲ, ಕೂಲಿ ಎಷ್ಟೆಷ್ಟು ದೊರಕಬೇಕು ಎನ್ನುವ ಬಗ್ಗೆ ಲಕ್ಷಾಂತರ ಪಾಂಪ್‌ಲೆಟ್ಸ್ ಪ್ರಿಂಟ್ ಮಾಡಿ ಹಳ್ಳಿ ಹಳ್ಳಿಯಲ್ಲಿ ಮೂಲೆಮೂಲೆಗೆ ತಲುಪುವಂತೆ ಮಾಡಿದ್ದಾರೆ. ಅದು ಪ್ರತಿಯೊಬ್ಬ ಮನುಷ್ಯ ನಿಗೂ ಗೊತ್ತು. ಅಭಾವ ಪರಿಸ್ಥಿತಿ ಕಾಲದಲ್ಲಿ ಯಾವನಾದರೂ ಎರಡೂವರೆ ರೂಪಾಯಿ ಕೂಲಿ ಸಂದಾಯವಾಗುವ ಕಾಲದಲ್ಲಿ ೫೦ ಪೈಸೆ ಬಂದರೆ ಸುಮ್ಮನೆ ಇರುತ್ತಾನೆಯೇ?

ಶ್ರೀ ಎಚ್.ಡಿ. ದೇವೇಗೌಡ— ಅದು ನೋಡಿ, ಇಲ್ಲವೆ ಈ ಒಂದು ಇಷ್ಟರ ಮೇಲೆ ರಾಜಿನಾಮೆ ಕೊಡಿ ಎಂದು ಹೇಳುತ್ತೇನೆ. It is not a question of saying some thing here.

ಶ್ರೀ ಎಚ್.ಎಂ. ಚೆನ್ನಬಸಪ್ಪ.— ನಾನು ರಾಜೀನಾಮೆ ಕೊಡುವುದರಿಂದ ಬಹಳ ಒಳ್ಳೆಯದಾಗು ವುದು ಇದ್ದರೆ ನನ್ನ ಅಭ್ಯಂತರವಿಲ್ಲ.

ಶ್ರೀ ಎಚ್.ಡಿ. ದೇವೇಗೌಡ.— ನೀವು ಕೊಡುತ್ತೀರಿ What you have been telling us is not correct.

SRI H.M. CHANNABASAPPA.— It is the naked truth.

SRI H.D. DEVEGOWDA.— You say it is naked truth, it is an information that you have received.

ಶ್ರೀ ಎಚ್.ಎಂ. ಚನ್ನಬಸಪ್ಪ— ನಾವು ಕಡ್ಡಾಯವಾಗಿ ಎಲ್ಲಾ ಆಫೀಸರ್‌ಗಳಿಗೂ ಸ್ಪಷ್ಟವಾಗಿ ಅನುಮಾನಕ್ಕೆ ಎಡೆ ಇಲ್ಲದಂತೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇವೆ ಆಗಿಂದಾಗ್ಗೆ ವೆರಿಫೈ ಮಾಡಿಕೊಳ್ಳುತ್ತಾ ಇದ್ದೇವೆ. ಇದು ತಮಗೆ ತಿಳಿಸುತ್ತೇನೆ ಎಲ್ಲಿಯೂ ಹೆಚ್ಚು ಕಡಿಮೆಯಾಗಿಲ್ಲ ೧೦೦ಕ್ಕೆ ನೂರಷ್ಟು ಸರಿಯಾಗಿ ನಡೆಯುತ್ತಿದೆ ಎಂದು ಹೇಳುವುದಿಲ್ಲ. ಅಲ್ಲಲ್ಲಿ ಹ್ಯೂಮನ್ ವೀಕ್‌ನೆಸ್ ಇರುತ್ತದೆ. ಅದು ದೇಶದಲ್ಲಿ ಇರು ತ್ತದೆ. ರೂಲ್ಸ್ ಇಲ್ಲಿ ಮಾಡಿದ್ದರೂ ಕಳ್ಳತನ ಮಾಡುವವರೂ ಬೇಕಾದಷ್ಟು ಜನ ಇದ್ದಾರೆ. ಪೋಲೀಸ್ ಇದ್ದರೂ ಕಳ್ಳತನ ಮಾಡುವವರು ಇದ್ದಾರೆ. ಕಳ್ಳತನ ಇಲ್ಲವೇ ಇಲ್ಲ ಎಂದು ಹೇಳುವುದಿಲ್ಲ. To the best of our ability we also collect the information and verify the things ವಿಲೇಜ್ ಲೀಡರ್ ಅಥವಾ ಗ್ಯಾಂಗ್ ಲೀಡರ್ ಯಾರು ಇದ್ದಾರೆ ಅವರ ಮುಖಾಂತರ ಕೆಲಸ ಕೊಡುತ್ತೇವೆ. ಆತನಿಗೆ ೧೦ ಪರ್ಸೆಂಟ್ ಕೊಡುತ್ತಿದ್ದೇವೆ. ೧೦ ಪರ್ಸೆಂಟ್ ಬೇಡ ೫ ಪರ್ಸೆಂಟ್ ಮಾಡಬೇಕು ಎಂದು ಶ್ರೀ ಆರ್ಮುಗಂ ರಿಪೋರ್ಟಿನಲ್ಲಿ ಹೇಳಿದ್ದಾರೆ. ಅದನ್ನು ವಿಚಾರಣೆಮಾಡಿ ನೋಡೋಣ. ಎರಡನೆಯದು ಇನ್ನೊಂದು ಸಲಹೆ ಮಾಡಿದ್ದಾರೆ. ಎಲ್ಲೆಲ್ಲಿ ಬಾವಿಗಳು ಒಣಗಿ ಹೋಗಿವೆ ಅಲ್ಲಿಗೆ ಲೈನ್ ಮಿನಿಮಂ ವಜಾ ಮಾಡಬೇಕು ಎಂದು ಸಲಹೆ ಮಾಡಿದ್ದಾರೆ. ಅದು ಸಲಹೆ ಮಾಡುವುದಕ್ಕೆ ಒಂದೆರಡುದಿವಸ ಮುಂಚಿತವಾಗಿ ಅದನ್ನು ರಿಟ್ರಾಸ್‌ಪೆಕ್ಟೀವ್ ಎಫೆಕ್ಟ್ ಕೊಡಬೇಕೆಂದು ಯಾವತ್ತೂ ಅಭಾವ ಪರಿಸ್ಥಿತಿ ಉಂಟಾಯಿತು ಅವತ್ತಿನ ದಿವಸದಿಂದ ಯಾವ ಬಾವಿಯಲ್ಲಿ ನೀರು ಇಲ್ಲ ಅಥವಾ ಅಲ್ಪಸ್ವಲ್ಪ ನೀರು ಇದೆ ಸಾಕಷ್ಟು ನೀರು ಇಲ್ಲ ಅಂತವುಗಳಿಗೆ ಆ ಲಾಗಾಯಿತು ಲೈನ್ ಮಿನಿಮಂ ವಜಾಮಾಡಬೇಕು ಎಂದು ಎಂಎಸ್‌ಇಬಿಗೆ ಆಜ್ಞೆ ಕೊಟ್ಟಿದ್ದೇವೆ. ಈ ವಿಷಯದಲ್ಲಿ ಸಾಮಾನ್ಯವಾಗಿ ಸರ್ವೆಸಾಧಾರಣವಾಗಿ ನಮಗೆ ನಿಮಗೆ ಭಿನ್ನಾಭಿಪ್ರಾಯ ಬರುವುದಕ್ಕೆ ಯಾವ ಕಾರಣವೂ ಇಲ್ಲ. ಇತರ ವಿಚಾರದಲ್ಲಿ ಹಣ ಅಡ್ಡಿ ಬರತಕ್ಕದ್ದು ಅಲ್ಲ ಎಂದು ಒಪ್ಪಿ ಕೊಳ್ಳುತ್ತೇನೆ. ಎಲ್ಲಿ ಕೆಲಸ ಪೂರೈಸಿ ಆಗಿದೆ ಎಂದರೆ ಅಲ್ಲಿಂದ ಬೇರೆ ಕಡೆ ಕೆಲಸ ಕೊಡಿ ಎಂದು

ಕೇಳತಕ್ಕದ್ದು ನ್ಯಾಯ ಇದೆ. ಕೊಡತಕ್ಕದ್ದು ನ್ಯಾಯ ಇದೆ. ಕಾಳಿನದಿ, ಬೆಡ್ತಿ ಮತ್ತು ವರಾಹಿ ಅಲ್ಲಿ ಕೂಡ ರಸ್ತೆ ಮಾಡತಕ್ಕದ್ದು, ಮನೆಗಳನ್ನು ಕಟ್ಟತಕ್ಕದ್ದು ಜಂಗಲ್ ಕ್ಲಿಯರ್ ಮಾಡತಕ್ಕದ್ದು ಈ ಕೆಲಸ ಪ್ರಾರಂಭ ಮಾಡುವುದಕ್ಕೆ ವಿಚಾರ ಮಾಡುತ್ತಿದ್ದೇವೆ. ಆದ್ದರಿಂದ ನಮ್ಮ ಪಿಡಬ್ಲ್ಯುಡಿಯ ಇಲಾಖೆಯು ಕಡೆಯಿಂದ ಹೇಳುವುದಾದರೆ ತಾವು ಯಾವಯಾವ ಸಲಹೆಗಳನ್ನು ಕೊಡುತ್ತೀರೊ ಅವನ್ನೆಲ್ಲವನ್ನೂ ಪರಿಶೀಲನೆಮಾಡುತ್ತೇವೆ. ಆದರೆ ತಾವು ಅದರಲ್ಲಿ ಒಂದು ಸಲಹೆ ಮಾತ್ರ ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ ಏಕೆಂದರೆ ತಾವು ಒಂದು ಲಿಸ್ ಆಫ್ ಟ್ಯಾಂಕ್ಸ್ ಕೊಡುತ್ತೀರಿ, ಅವುಗಳನ್ನೆಲ್ಲ ಇನ್‌ವೆಸ್ಟಿಗೇಟ್‌ಮಾಡಿ ಟೆಕ್ನಿಕಲ್ ಫೀಸ್‌ಬಲ್ ಆಗಿರಲಿ ಆಗಿಲ್ಲದೆ ಇರಲಿ ಮಾಡಿ ಎಂದರ ಹೇಗೆ?

11-30 A.M.

ಶ್ರೀ ಕೆ.ಎಚ್.ಹನುಮೇಗೌಡ–ಡಿಪಾರ್ಟ್‌ಮೆಂಟಿನವರು ಎಸ್ಟಿಮೇಟ್ ಮಾಡಿ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಎಚ್.ಎಂ. ಚನ್ನಬಸಪ್ಪ.— ತಾವು ಅಸಮರ್ಪಕವಾಗಿ ಮಾಹಿತಿ ತೆಗೆದುಕೊಂಡು ಎಸ್ಟಿಮೇಟ್ ಮಾಡಿದ್ದಾರೆ ಎಂದು ಹೇಳುತ್ತೀರಿ.

ಶ್ರೀ ಕೆ.ಎಚ್. ಹನುಮೇಗೌಡ.— ನಮ್ಮ ಇಲಾಖೆಯಿಂದ ಎಸ್ಟಿಮೇಟ್ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಎಚ್.ಎಂ. ಚನ್ನಬಸಪ್ಪ.— ಎಸ್ಟಿಮೇಟಿನಲ್ಲಿ ಲೈನ್ ಎಸ್ಟಿಮೇಟ್ ಇದೆ, ಪ್ರಿಲಿಮಿನರಿ ಎಸ್ಟಿಮೇಟ್ ಇದೆ, ಡೀಟೇಲ್ಡ್ ಎಸ್ಟಿಮೇಟ್ ಇದೆ, ಇದು ತಮಗೆ ಗೊತ್ತಿರಬಹುದು ತಾವು ಅಸಿಸ್ಟೆಂಟ್ ಇಂಜಿನಿಯರ್ ಹತ್ತಿರ ಹೋಗಿ ಕೇಳುತ್ತೀರಿ, ಅವರು ಎಸಿಮೇಟ್ ಮಾಡಿದ್ದೇವೆ ಎಂದು ಹೇಳುತ್ತಾರೆ, ಅವರು ಮಾಡಿರುವುದು ಲೈನ್ ಎಸ್ಟಿಮೇಟ್ ಅಥವಾ ಪ್ರಿಲಿಮಿನರಿ ಎಸ್ಟಿಮೇಟ್. ಇಲ್ಲಿ ಬಂದು ನಮ್ಮನ್ನು ಗೋಳು ಹೊಯ್ಯುತ್ತೀರಿ.

ಶ್ರೀ ಎಂ.ಎಸ್. ಕೃಷ್ಣನ್.— ನಿಮ್ಮ ಡಿಪಾರ್ಟ್‌ಮೆಂಟಿನವರು ೧೮ ಕೆರೆಗಳ ಲಿಸ್ಟ್ ಮಾಡಿ ಎಸ್ಟಿಮೇಟ್ ಮಾಡಿ ಆದ ಮೇಲೆ ಪುನ: ಮೇಲಿನ ಅಧಿಕಾರಿಗಳು ೧೮ ಕೆರೆಗಳು ಆಗುವುದಿಲ್ಲ, ಎಂದು ಕಟ್‌ಮಾಡಿ ೭ ಕೆರೆಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ೪ ಕೆರೆಗಳ ಕೆಲಸವನ್ನು ಆಗಲೇ ತೆಗೆದುಕೊಂಡಿರುವುದು ಆಗಿದೆ. ಈ ವಿಷಯವನ್ನು ಮೊನ್ನೆ ಮಾನ್ಯ ಸದಸ್ಯರಾದ ವಿ.ಎನ್. ಪಾಟೀಲರು ಹೇಳುತ್ತಾರೆ, ಇಂಜಿನಿಯರ್ ಇನ್ ಚೀಫ್ ಅವರು ಸಭೆ ಸೇರಿದಾಗ ೧೮ ಕೆರೆಗಳು ಆಗುವುದಿಲ್ಲ ೭ ಕೆರೆಗಳನ್ನು ಮಾತ್ರ ದುರಸ್ತಿ ಮಾಡುತ್ತೇವೆಂದು ಹೇಳಿದ್ದಾರೆ. ಅದರಲ್ಲಿ ನಾಲ್ಕು ಕೆರೆಗಳು ಹಿಂದೆ ದುರಸ್ತಿ ಮಾಡಿದ್ದಂಥಾದ್ದು. ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಎಚ್ ಎಂ. ಚೆನ್ನಬಸಪ್ಪ.— ಒಂದು ಪುಸ್ತಕವನ್ನು ನಾವು ಹಿಂದೆ ಪ್ರಿಂಟ್ ಮಾಡಿಸಿದ್ದೇವೆ, ಯಾವ ಯಾವುದು ಸರ್ಕಾರಕ್ಕೆ ವರದಿ ಬಂದಿದೆಯೋ ಅದಕ್ಕೆ ಟೆಕ್ನಿಕಲಿ ಫೀಸಿಬಲ್ ಆಗಿದ್ದರೆ ಫೈನಾನ್ಷಿಯಲಿ ಫೀಸಿಬಲ್ ಆಗಿದ್ದರೆ, ಲಿಸ್ಟಿನಲ್ಲಿ ಇಲ್ಲದಿದ್ದರೂ ಕೂಡ ಹೊಸದಾಗಿ ತೆಗೆದುಕೊಂಡು ಈ ಆರು ಜಿಲ್ಲೆಗಳಲ್ಲಿ ಕೆಲಸ ಮಾಡಿಸುತ್ತೇವೆ. ಕೆಲಸ ಒದಗಿರತಕ್ಕದ್ದು ಪ್ರಾಮುಖ್ಯವಾದುದು ಕಾಳಿ ನದಿ ಪ್ರಾಜೆಕ್ಟಿನಿಂದ ಆರು ತಿಂಗಳು ಕೆಲಸ ಸಿಕ್ಕುವ ಹಾಗಿದ್ದರೆ ಜನರನ್ನು ಅಲ್ಲಿಗೆ ಕಳುಹಿಸಿ ಕೆಲಸ ಕೊಡಿಸುವುದರಿಂದ ನಿಮಗೆ ಸಂತೋಷವಾಗುವುದಿಲ್ಲವೇ ?

ಶ್ರೀ ಶರಣಪ್ಪ.— ಕೆರೆಗಳ ಡಿಸಿಲ್ಟಿಂಗ್ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಎಚ್.ಎಂ, ಚೆನ್ನಬಸಪ್ಪ.— ನಾವು ಖರ್ಚು ಮಾಡತಕ್ಕ ಹಣ ಒಂದಲ್ಲ ಒಂದು ರೀತಿಯಲ್ಲಿ ದೇಶಕ್ಕೆ ಪ್ರಯೋಜನವಾಗಬೇಕು. ಒಂದು ಯೂನಿಟ್ ನೀರನ್ನು ನಿಲ್ಲುವಂತೆ ಮಾಡಬೇಕಾದರೆ ಹತ್ತು ಸಾವಿರ ಚದರ ಗಜ ಮಣ್ಣನ್ನು ತೆಗೆಯಬೇಕು ಅದಕ್ಕೆ ಸುಮಾರು ೨೦ ಸಾವಿರ ರೂಪಾಯಿ ಖರ್ಚು ಆಗುತ್ತದೆ, ಒಂದು ಎಕರೆಗೆ ನೀರು ಕೊಡುವುದಕ್ಕೆ ೨೦ ಸಾವಿರ ರೂಪಾಯಿ ಖರ್ಚು ಮಾಡತಕ್ಕದ್ದು ಯೋಗ್ಯವೇ ಎಂದು ತಾವೇ ಪರಿಶೀಲಿಸಬೇಕು,

ಶ್ರೀ ಶರಣಪ್ಪ.— ಕೆರೆಯ ಆಯಕಟ್ಟು ೫೦೦ ಎಕರೆ ಇದ್ದುದು ಕೆರೆ ಮುಚ್ಚಿಹೋಗಿರುವುದರಿಂದ ೧೦೦ ಎಕರೆಗೆ ಬಂದಿದೆ,

ಶ್ರೀ ಎಚ್.ಎಂ. ಚೆನ್ನಬಸಪ್ಪ.— ಒಂದು ಎಕರೆಗೆ ನೀರು ಒದಗಿಸಬೇಕಾದರೆ ಒಂದು ಯೂನಿಟ್ ನೀರು ಬೇಕು ಒಂದು ಯೂನಿಟ್ ನೀರು ಎಂದರೆ ಅದು ಸಾಧ್ಯವಾಗುವುದಿಲ್ಲ. Now I have given a glimps of the works that have been done and the amounts that have been spent. The Government will not hesitate to spend further amounts to the exten/necessary on all constructive works which would provide employment to the people and at the same time result some benefit to the country,

ಶ್ರೀ ಬಿ. ಪುಟ್ಟಸ್ವಾಮಯ್ಯ.— ಸರ್ಕಾರದವರು ೧೬ ಜಿಲ್ಲೆಗಳಲ್ಲಿ ಅಭಾವ ಇದೆಯೆಂದು ಘೋಷಣೆ ಮಾಡಿ ಈಗ ಆರು ಜಿಲ್ಲೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಘೋಷಣೆ ಆಗಿರತಕ್ಕ ಇತರ ಜಿಲ್ಲೆಗಳ ಬಗ್ಗೆ ಲವಲೇಶವೂ ಪ್ರಸ್ತಾಪ ಮಾಡಿಲ್ಲ, ಇದರ ಬಗ್ಗೆ ತುಂಬಾ ಶಂಕೆ ಇದೆ, ಪಬ್ಲಿಕ್ ವರ್ಕ್ಸ್ ಕಾಮಗಾರಿಗಳು ಸ್ಥಗಿತವಾಗಿವೆ ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಕೆ ಎಚ್. ಹನುಮೇಗೌಡ.— ಅಭಾವ ಪ್ರದೇಶದ ೧೧ ಜಿಲ್ಲೆಗಳಲ್ಲಿ ಸಾವಿರಾರು ಬಾವಿಗಳನ್ನು ತೆಗೆದು ಬಾವಿಯಲ್ಲಿ ನೀರು ಇದೆ, ಈ ಬಾವಿಗೆ ಪಂಪುಸೆಟ್ಟು ಹಾಕಿಕೊಳ್ಳುವುದಕ್ಕೆ ಪವರ್ ಕೊಟ್ಟಿಲ್ಲ. ಇಂಥ ಬಾವಿಗಳಿಗೆ ಪವರ್ ಕೊಡಲಿಕ್ಕೆ ಎಲೆಕ್ಟ್ರಿಕಲ್ ಲೈನ್ ಎಳೆದು ಕೊಡುತ್ತೀರಾ?

ಶ್ರೀ ಎಚ್.ಎಂ. ಚೆನ್ನಬಸಪ್ಪ.— ಆರು ಜಿಲ್ಲೆಗಳ ಬಗ್ಗೆ ಏತಕ್ಕೆ ಪ್ರಸ್ತಾಪ ಮಾಡಿದ್ದೇವೆ ಎಂದರೆ ಶ್ರೀಮಾನ್ ಆರ್ಮುಗಂ ಅವರ ವರದಿಯಲ್ಲಿ ಚರ್ಚೆಯಾಗುತ್ತಾ ಇರುವುದು ಆರು ಜಿಲ್ಲೆಗಳು ಮಾತ್ರ ನಾನು ಕೊಟ್ಟ ಮಾಹಿತಿಗಳು ಆರು ಜಿಲ್ಲೆಗಳಿಗೆ ಮಾತ್ರ ಸೀಮಿತವಾಗಿದೆ.

ಶ್ರೀ ಎಚ್.ಡಿ. ದೇವೇಗೌಡ.— ಈ ರಿಪೋರ್ಟಿನಲ್ಲಿ ಶೇಕಡ ೩೦ ರಷ್ಟು ಹಣ ವೇಸ್ಟ್ ಆಗಿದೆ ಯೆಂದು ಹೇಳಿದ್ದಾರೆ ಮಧ್ಯಸ್ಥಗಾರರ ಕೈಗೆ ೩೦ ಪರ್ಸೆಂಟ್ ಹಣ ಹೋಗುತ್ತಾ ಇದೆ ಕೂಲಿಗಾರರಿಗೆ ಪೂರ್ತಿ ಹಣ ಸಿಕ್ಕುತ್ತಾ ಇಲ್ಲ ಎಂದು ಆರ್ಮುಗಂ ಅವರ ವರದಿಯಲ್ಲಿ ತಿಳಿಸಿದ್ದಾರೆ. ಪೀಸ್ ವರ್ಕ್ ಮೇಲೆ ಕಂಟ್ರಾಕ್ಟ್ ಕೊಡುತ್ತಾ ಇದ್ದಾರೆ ಅದಕ್ಕೆ ವೇಸ್ಟ್ ಆಗಿದೆ ಎಂದು ತಿಳಿಸಿದ್ದಾರೆ. ನಮಗೂ ನಿಮಗೂ ಇರುವ ಭಿನ್ನಾಭಿಪ್ರಾಯ ಇಷ್ಟೆ, ಈಗ ಬಿಲ್ಲನ್ನು ಪಿಡಬ್ಲ್ಯೂಡಿ ಕೆಲಸಕ್ಕೆ ಯಾವ ರೀತಿ ಮಾಡುತ್ತಾರೆ ಎಂದರೆ ಕೆಲಸ ಎಷ್ಟು ಮಾಡುತ್ತಾರೆ ಅದನ್ನು ಮೆಷರ್ ಮಾಡಿ ಅದರ ಪ್ರಕಾರ ರೇಟ್ ಏನು ಇದೆ ಅದನ್ನು ಬಿಲ್ ಮಾಡಿ ಕಂಟ್ರಾಕ್ಟರಿಗೆ ಕೊಡುತ್ತಾರೆ ಪೀಸ್ ವರ್ಕ್ ಪದ್ಧತಿ ಮೇಲೆ ಕೆಲಸ ಮಾಡಿಸಿ ಅದಕ್ಕೂ ಇದೇ ಪದ್ಧತಿಯನ್ನು ಅಪ್ಲೈ ಮಾಡಿರುವುದು. ಇವತ್ತು ೩೦ ಪರ್ಸೆಂಟ್ ಅಪವ್ಯಯವಾಗಿದೆ ಇದನ್ನು ಸರಿ ಮಾಡುವುದಕ್ಕೆ ತಾವು ಏನು ಹೇಳುತ್ತೀರಿ ? ಮಹಾರಾಷ್ಟ್ರದಲ್ಲಿ ಜಿಲ್ಲಾ ಪರಿಷತ್ ಮುಖಾಂತರ ಎನ್‌ಆರ್. ಬೇಸಿಸ್ ಮೇಲೆ ಪೂರ್ತಿ ಹಣ ಲೇಬರರ್ಸ್ ಕೈಗೆ ಹೋಗುವ ವ್ಯವಸ್ಥೆ ಮಾಡಿದ್ದಾರೆ.

ಶ್ರೀ ಎಚ್.ಎಂ. ಚೆನ್ನಬಪ್ಪ.— ಕೆಲಸ ಮಾಡಿಸುವುದಕ್ಕೆ ನಾನಾ ಬಗೆಗಳು ಇವೆ. ೧. ಡಿಪಾರ್ಟ್‌ಮೆಂಟ್ ಮುಖಾಂತರ ನಾಮಿನಲ್ಲ್ ರೋಲ್ ಬೇಸಿಸ್ ಮೇಲೆ ಇಂಜಿನಿಯರ್ಸ್‌ಗಳು ಕೆಲಸ ಮಾಡಿಸಬಹುದು. ೨. ಇಲ್ಲವೇ ಪೀಸ್ ವರ್ಕ್ ಪದ್ಧತಿಯ ಮೇಲೆ ಮಾಡಿಸಬಹುದು. ೩. ಕಂಟ್ರಾಕ್ಟರ್‌ಗಳ ಮುಖಾಂತರ ಮಾಡಿಸಬಹುದು ನನ್ನ ಅಲ್ಪ ಅನುಭವದಲ್ಲಿ ಹೇಳವುದಾದರೆ ಪ್ರತಿಯೊಂದು ಕಾಮಗಾರಿಯಲ್ಲೂ ಒಂದೊಂದು ಲೋಪ ಇದೆ ಯಾವ ಕ್ರಮದಲ್ಲಿಯೂ ಲೋಪ ಇಲ್ಲ ಎನ್ನುವುದು ಇಲ್ಲ. ಈಗ ತಾವು ಹೇಳಿದರೆ ನಾಮಿನಲ್ ರೋಲ್‌ನಲ್ಲಿ ಇಂಜಿನಿಯರ್ಸ್ ಮುಖಾಂತರ ಕೆಲಸ ಮಾಡಿಸಬಹುದು. ಆದರೆ ಅದರಲ್ಲಿಯೂ ಬೇಕಾದಷ್ಟು ಲೋಪಇದೆ ನಾವು ತೂಕಮಾಡಿ ಲೋಪ ಯಾವುದರಲ್ಲಿ ಲೋಪ ಕಡಿಮೆ ಇದೆ ಅದನ್ನು ಅಕ್ಸೆಪ್ಟ್ ಮಾಡಬೇಕು ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ೨–೩ ವರ್ಷದ ಹಿಂದೆ ಧಾರವಾಡ ಜಿಲ್ಲೆಯಲ್ಲಿ ಇಂಜಿನಿಯರ್ ನಾಮಿನಲ್ ರೋಲ್‌ನಲ್ಲಿ ಕೆಲಸ ಮಾಡಿಸಿದಾಗ ಆಗಿರತಕ್ಕ ಅನಾಹುತವನ್ನು ಅರಿಕೆ ಮಾಡಿದ್ದಾರೆ. ನಮ್ಮ ಇಂಜಿನಿಯರ್ಸ್ ಮೂರು ಜನ ಕೆಲಸಗಾರರು ಬಂದಿದ್ದರೆ ೧೫೦ ಜನ ಬಂದಿದ್ದಾರೆ ಎಂದು ಎಡಗೈ ಬಲಗೈ ಹೆಬ್ಬೆಟ್ಟನ್ನು ಹಾಕಿಸಿ ೫೦ ಪರ್ಸೆಂಟ್ ಹಣವನ್ನು ಕೆಲವು ಕಡೆ ೧೦೦ ಪರ್ಸೆಂಟ್ ಹಣ ತೆಗೆದುಕೊಂಡಿರುತ್ತಾರೆ. ಅದು ನಮಗೆ ಗೊತ್ತಿದೆ. ಆದ್ದರಿಂದ ಪ್ರತಿಯೊಂದರಲ್ಲಿಯೂ ಲೋಪ ಇದೆ. I do not say that this is the foolfroof. ಇರುವುದರಲ್ಲಿ ಯಾವ ಕ್ರಮದಿಂದ ಹೆಚ್ಚು ಪ್ರಯೋಜನವಾಗುತ್ತದೆ ಯಾವ ಕ್ರಮದಲ್ಲಿ ಕಡಿಮೆ ಲೋಪವಾಗುತ್ತದೆ ಎನ್ನುವುದನ್ನು ವಿಚಾರ ಮಾಡಿದ್ದೇವೆ. ಒಂದು ವೇಳೆ ಈ ಸಭೆಯಲ್ಲಿ ಅದೇ ಒಳ್ಳೆಯದು ಎಂದರೆ ಅದನ್ನೆ ಯೋಚನೆ ಮಾಡೋಣ. ಮೊನ್ನೆ ಎರಡು ವರ್ಷಗಳ ಹಿಂದೆ ಕೆಲಸ ಮಾಡಿಸಿದ್ದನ್ನು ಇನ್‌ವೆಸ್ಟಿಗೇಟ್ ಮಾಡಿಸಿದಾಗ ಗಂಗೇಗೌಡ, ಬೋರೇಗೌಡ, ಭೀಮೇಗೌಡ ಎಂದು ಹೆಬ್ಬೆಟ್ಟು ಹಾಕಿಸಿ ಲಕ್ಷಗಟ್ಟಲೆ ಹಣ

ಸರ್ಕಾರಕ್ಕೆ ಹಣ ನಷ್ಟವಾಗಿದೆ ನಾವು ಹೇಳುವ ಕೆಲಸದಲ್ಲಿ ಲೋಪ ಇದೆಯೆಂದು ಹೇಳವುದಿಲ್ಲ, ೩೦ ಪರ್ಸೆಂಟ್ ವೇಸ್ಟ್ ಆಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ, ಒಪ್ಪಿಕೊಳ್ಳೋಣ. ನಾನು ಅವರ ವರದಿಯಲ್ಲಿ ಏನು ಹೇಳಿದ್ದಾರೆ ಅದನ್ನು ಪರೀಕ್ಷೆ ಮಾಡಿಸುವುದಕ್ಕೋಸ್ಕರ ಒಂದು ವಿಶೇಷ ಸಿಬ್ಬಂದಿಯನು ನೇಮಕ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.— ಕೆಲಸವಲ್ಲ, ಎಸ್ಟಿಮೇಟ್ ಅಲ್ಲ ರಾಜಕಾರಣಿಗಳು ಹೇಳಿ ಕೆಲಸ ಮಾಡಿಸಿದ್ದಾರೆ. ಮಾನ್ಯ ಹುಚ್ಚಮಾಸ್ತಿಗೌಡರ ಹತ್ತಿರ ಬಂದು ಬಿಲ್ ಕೊಡಿಸುತ್ತಾರೆ. ಫಾರ್ ಗಾಡ್ ಸೇಕ್ ಈ ಸಭೆಯಲ್ಲಿ ಹೇಳುವಾಗ ಯಾವುದನ್ನು ಉತ್ಪ್ರೇಕ್ಷೆಮಾಡಿ ಹೇಳುವುದು ಬೇಡ. ಎಸ್ಟಿಮೇಟ್ ಇಲ್ಲದೆ ಕೆಲಸ ಮಾಡುತ್ತಿದ್ದಾರೆ. I would like to make a suggestion, at random select one taluk, and let us say how the work is done, whether estimate has been sanctioned or approved.

ಶ್ರೀ ಎಚ್. ಎಂ. ಚನ್ನಬಸಪ್ಪ—ನೀವು ಹತ್ತು ಉದಾಹರಣೆ ಕೊಡಿ, ನಾನು ಅದನ್ನು ಪರಿಶೀಲಿಸುತ್ತೇನೆ. ಲೋಪವಾಗಬಾರದೆಂಬುದಕ್ಕೆ ನಿಮಗೆಷ್ಟು ಕಾತುರತೆ ಇದೆಯೋ ನಮಗೂ ಕೂಡ ಅಷ್ಟೇ ಕಾತುರತೆ ಇದೆ. ಯಾರೂ ದುರುಪಯೋಗ ಮಾಡಬಾರದೆಂಬುದೇ ನನ್ನ ಸ್ಪಷ್ಟವಾದ ಅಭಿಪ್ರಾಯ. ಎಲ್ಲಾ ಕ್ರಮಗಳಲ್ಲೂ ಒಂದಲ್ಲ ಒಂದು ಲೋಪವಿದೆ, ಎಂದರೆ ತಾವು ಅದನ್ನು ಗಮನಕ್ಕೆ ತರಬಹುದು, ಲೋಪವಿದ್ದರೆ ನಾನು ಒಪ್ಪಿ ಕೊಳ್ಳುತ್ತೇನೆ. ಇದು ಪ್ರೆಸ್ಟೀಜ ಪ್ರಶ್ನೆಯಲ್ಲ, ಎಲ್ಲಾದರೂ ಲೋಪದೋಷವಿದ್ದರೆ ಅದನ್ನು ಸರಿಪಡಿಸುತ್ತೇವೆ. I can give you an assurance that I will get it examined. You give me one or two instances. Within 2 or 3 days as the case may be, I will have them verified by an independent authority and get the report and presented to the House.

ಶ್ರೀ ಎಚ್. ಡಿ. ದೇವೇಗೌಡ—ಅಜೆಂಡಾದಲ್ಲಿ ಇನ್ನೂ ಕೆಲವು ಕಾರ್ಯಕ್ರಮಗಳಿರುವುದರಿಂದ ಅದನ್ನು ತೆಗೆದುಕೊಳ್ಳಲು ಮಧ್ಯಾಹ್ನವೂ ಅವಕಾಶ ಕೊಡಬೇಕು.

ಅಧ್ಯಕ್ಷರು—ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಈ ದಿನ ಸಭೆ ಮುಗಿಯಲು ಒಪ್ಪಿಕೊಂಡಿದ್ದಾರೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು)—ಇಲ್ಲಿ ಕಾಲ ನಿಯಮವನ್ನು ದೃಷ್ಟಿಯಲ್ಲಿಟ್ಟು ಕೆಲಸಮಾಡಬೇಕಾಗಿದೆ. ಆದುದರಿಂದ ದಯಮಾಡಿ ಅದರಂತೆ ನಡೆಯಲು ಸಹಾಯ ಮಾಡಬೇಕೆಂದು ಎದುರು ಪಕ್ಷದ ನಾಯಕರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ—ಅಸಹಕಾರದ ಪ್ರಶ್ನೆಯಲ್ಲ ಇನ್ನೂ ಕೆಲವು ಐಟಂಗಳಿವೆ, ಅವುಗಳಿಗೆ ಒಂದೆರಡು ಗಂಟೆ ಕೊಡಬೇಕು, ಮಧ್ಯಾಹ್ನ ಕುಳಿತಾದರೂ ಅದನ್ನು ಮುಗಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ—ಮಾನ್ಯ ಅಧ್ಯಕ್ಷರೇ, ಮಾನ್ಯ ಆಮರ್ಗಂರವರು ಈ ಸಭೆಯ ಪರವಾಗಿ ಅಭಾವಪೀಡಿತ ಪ್ರದೇಶಗಳಲ್ಲಿ ಸಂಚಾರಮಾಡಿ ನಮ್ಮ ಮುಂದೆ ವರದಿಯನ್ನಿಟ್ಟಿದ್ದಾರೆ. ಆ ಭಾಗದಲ್ಲಿ ಅವರು ಸಂಚಾರ ಮಾಡುವಾಗ ಅನೇಕ ಸ್ಥಳಗಳನ್ನು ಭೇಟಿಮಾಡಿ ನೂರಾರು ಜನರ ಜೊತೆ ಚರ್ಚೆಮಾಡಿ ತಾವು ಖುದ್ದು ನೋಡಿ ಬಂದಿದ್ದ ಅನೇಕ ವಿಷಯಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅವರೀಗತಾನೆ ಮಾತನಾಡುತ್ತಾ ಪ್ರತಿ ದಿವಸ ೧೬–೧೮ ಗಂಟೆ ಹೊತ್ತು ಕೆಲಸಮಾಡಿದೆ ಎಂದು ತಿಳಿಸಿದರು. ಅವರು ವಹಿಸಿದಂಥ ಈ ಶ್ರಮಕ್ಕೆ ನಾನು ಅವರನ್ನು ಅಭಿನಂದಿಸುತ್ತೇನೆ. ಈ ವರದಿಯಲ್ಲಿ ತಿಳಿಸಿರುವುದರ ಜೊತೆಗೆ ಅವರು ಈಗ ತಾನೆ ಭಾಷಣ ಮಾಡುತ್ತಾ ಅವರು ನೋಡಿರುವ ಚಿತ್ರವೇನು ಎಂದು ತಿಳಿಸಿದರು. ಹಿಂದೆಂದೂ ಇಂಥ ಚಿತ್ರವನ್ನೇ ಅವರು ನೋಡದೆ ಇರುವ ಹಾಗೆ ವರ್ಣಿಸಿದ್ದು ನೋಡಿ ಆಶ್ಚರ್ಯವಾಯಿತು. ಈ ದೇಶದಲ್ಲೇ ಅಲ್ಲದೆ ಈ ರಾಜ್ಯದಲ್ಲಿ ಕೂಡ ನೂರಕ್ಕೆ ೮೦ ಭಾಗ ಜನರು ಬಡತನದಿಂದ ಬಹಳ ಕೆಳಮಟ್ಟದಲ್ಲಿದ್ದಾರೆ. ಅವರಿಗೆ ತಿಂಗಳಿಗೆ ೨೦ ರೂಪಾಯಿ ಕೂಡ ಸಂಪಾದನೆ ಇಲ್ಲ. ಇಂಥ ಚಿತ್ರ ನಮ್ಮ ಮುಂದಿದೆ. ಅರೆಹೊಟ್ಟೆ ತಿಂದು ಬಟ್ಟೆ ಸರಿಯಾದ್ದಿಲ್ಲದಿರುವ ಜನ ಇದೊಂದೇ ಕಡೆಯಲ್ಲಿಲ್ಲ, ಇಡೀ ರಾಷ್ಟ್ರದಲ್ಲಿ ಎಲ್ಲಾ ಭಾಗಗಳಲ್ಲೂ ಇದ್ದಾರೆ. ಇದನ್ನು ಒತ್ತಿ ಒತ್ತಿ ಹೇಳಿ ಇರತಕ್ಕ ಚಿತ್ರವನ್ನು ವರ್ಣಿಸಿದರು. ಇದನ್ನು ಸತತವಾಗಿ ನೋಡುತ್ತಿದ್ದೇವೆ. ಇದರಲ್ಲಿ ಅಷ್ಟು ವಿಶೇಷವೇನೂ ಕಾಣುವುದಿಲ್ಲ ಎಂಬುದು ನನ್ನ ಅಭಿಪ್ರಾಯ. ಏಕೆಂದರೆ ನಾನು ಹಳ್ಳಿಗಾಡಿನಿಂದ ಬರುವವನು, ನೂರಾರು ಸ್ಥಳಗಳಲ್ಲಿ ಹಳ್ಳಿಗಾಡಿನಲ್ಲಿ ಇರುವ ಜನಜೀವನವನ್ನು ಸಹ ನಾನು ನೋಡಿದ್ದೇನೆ. ಈ ಪರಿಸ್ಥಿತಿಯೇನೂ ಹೊಸದಲ್ಲ. ಅವರು ಅಭಾವ ಪರಿಸ್ಥಿತಿ ಇರುವ ಕಡೆ ಕಾಣುವ ದೃಶ್ಯವನ್ನು ಮನಸ್ಸಿಗೆ ತಟ್ಟುವ ಹಾಗೆ ಗಮನಕ್ಕೆ ತಂದರು. ಅರೆಹೊಟ್ಟೆ ಅರೆಬಟ್ಟೆ ಇರುವವರನ್ನು ನೋಡಿ ಅವರ ವಿಷಯದಲ್ಲಿ ಅನುಕಂಪ ತೋರಿ ಆಮರ್ಗಂರವರಿಗೆ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಸಾಕಷ್ಟು ವ್ಯಥೆಯಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಅವರು ಇಂಥ ಜನರನ್ನು ನೋಡಿ ಮರುಗಿದ್ದಾರೆ. ಇದನ್ನು ವರದಿಯಲ್ಲಿ ಸೂಚಿಸಿರುವುದೂ ಅಲ್ಲದೆ ತಮ್ಮ ಭಾಷಣದಲ್ಲಿ ಸಹ ಹೇಳಿದ್ದಾರೆ. ಇವಕ್ಕಾಗಿ ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಸಾರ್ವಜನಿಕ ಕ್ಷೇತ್ರದಲ್ಲಿ ಕೆಲಸಮಾಡುವವರಿಗೆ ಕಷ್ಟದೆಶೆಯಲ್ಲಿರುವವರನ್ನು ನೋಡಿದರೆ ಸಂಕಟವಾಗುವುದು ಸ್ವಾಭಾವಿಕ. ಅವರು ತೆಗೆದುಕೊಂಡಿರುವ ಕಾಲ ಸಾಲದು, ಇನ್ನೂ ಹೆಚ್ಚು ಸಂಚಾರಮಾಡಿ ಹೆಚ್ಚು ವಿಷಯಗಳನ್ನು ಸಂಗ್ರಹಿಸಿ ಏನೇನು ಕೆಲಸ ವಾಗಿದೆ, ಇನ್ನೂ ಹೆಚ್ಚು ಎಲ್ಲೆಲ್ಲಿ ಆಗಬೇಕಾದ್ದಿದೆ ಎಂಬುದನ್ನೆಲ್ಲಾ ಅಧ್ಯಯನಮಾಡಿ ಬಂದಿದ್ದರೆ ಇನ್ನೂ ಹೆಚ್ಚು ಸಹಾಯವಾಗುತ್ತಿತ್ತು ಎಂದು ಭಾವಿಸುತ್ತೇನೆ. ಅವರು ಬಹಳ ಅವಸರದಲ್ಲಿ ವರದಿ ಕೊಡ ಬೇಕಾಗಿತ್ತು. ಈ ಶಾಸನಸಭೆ ಮುಗಿಯುವುದರೊಳಗೆ ಅವರ ವರದಿ ಬಂದು ಇಲ್ಲಿ ಚರ್ಚೆಯಾಗಿ ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಕಾಲಾವಕಾಶ ಹೆಚ್ಚು ಇಲ್ಲದಿದ್ದುದರಿಂದ ಅವಸರದಲ್ಲಿ ಅವರು ಸಂಚಾರಮಾಡಿ ಅವಸರದ ವರದಿ ಕೊಡಬೇಕಾಯಿತು. ಇಲ್ಲಿಯವರೆಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳನ್ನೂ ಅದರಲ್ಲೂ ೪ ತಿಂಗಳಿಂದೀಚೆಗೆ ನಡೆದಿರುವ ಕೆಲಸವನ್ನೂ ಅವರು ಸ್ವಲ್ಪ ಅವಲೋಕಿಸಿದ್ದರೆ ಚೆನ್ನಾಗಿತ್ತು ಎಂದು ಭಾವಿಸುತ್ತೇನೆ. ಈ ಸಭೆ ಆಗಸ್ಟ್ ತಿಂಗಳಲ್ಲಿ ಸೇರಿದಾಗ ಅನೇಕ ಸದಸ್ಯರು ಈ ವಿಷಯವನ್ನು ಪ್ರಸ್ತಾಪಿಸಿದರು. ನಾನು ಇದರ ಬಗ್ಗೆ ಕೆಲವು ಅಂಕಿಅಂಶಗಳನ್ನು ಹೇಳಿದಾಗ ಅವರಿಗೆ ಅನುಮಾನ ಬಂದು ಅನೇಕ ವಿಷಯಗಳು ಸತ್ಯಕ್ಕೆ ದೂರವಾಗಿವೆ, ಅಲ್ಲಿ ಅಷ್ಟು ಕೆಲಸವಾಗುತ್ತಿಲ್ಲ ಎಂದು ಹೇಳಿರುವುದು ಮಾನ್ಯ ಸದಸ್ಯರಿಗೆ ಜ್ಞಾಪಕವಿರಬಹುದು. ಅದನ್ನು ತಿಳಿದ ಕೂಡಲೇ ಆಗಸ್ಟ್ ೪ ರಿಂದ ೧೪ ಗವರೆಗೆ ಸಭೆ ನಡೆಯುತ್ತಿರಲಿಲ್ಲ, ಆ ಸಮಯದಲ್ಲಿ ಮಾನ್ಯ ಸದಸ್ಯರು ನೋಡಿ ಬಂದರು, ಅದೇ ಕಾಲದಲ್ಲಿ ನಾನು ಬೆಳಗಾಂ, ಬಿಜಾಪುರದ ಕೆಲವು ಭಾಗ, ಗುಲ್ಬರ್ಗದ ಕೆಲವು ಭಾಗ, ಬಿದರೆಯ ಕೆಲವು ಭಾಗ ಖುದ್ದಾಗಿ ನೋಡಿದೆ. ಅಲ್ಲಿ ಜನರಿಗೆ ಬಹಳ ತೊಂದರೆಯಾಗಿದೆ. ಕೆಲಸವಿಲ್ಲ, ದಿನಸಿ ಕೂಡ ಇಲ್ಲ ಎಂದು ಜನರು ಹೇಳಿದರು. ಕೆಲವಾರು ಕಡೆ ನೋಡಿದಾಗ ಸಾಯಿಲ್ ಕನಸರ್ವೇಷನ್ ಕೆಲಸ ಪ್ರಾರಂಭವಾಗಿ ನಡೆಯುತ್ತಿತ್ತು. ಇನ್ನೂ ಹೆಚ್ಚು ಕೆಲಸವಾಗಬೇಕೆಂದು ಮನವಿ ಮಾಡುತ್ತಿದ್ದರು. ಅದನ್ನು ನೋಡಿ ಅಲ್ಲಿಂದ ಬಂದಮೇಲೆ ನಮ್ಮ ಮಂತ್ರಿಗಳನೇಕರು ಹೋಗಿ ಸಂಚಾರಮಾಡಿ ಹೆಚ್ಚು ವಿಷಯ ಸಂಗ್ರಹಮಾಡಿದರು, ಮಂತ್ರಿ ಮಂಡಲ ಕೂಡ ಸಭೆ ಸೇರಿ ಒಬ್ಬೊಬ್ಬ ಮಂತ್ರಿ ಒಂದೊಂದು ಜಿಲ್ಲೆಯಲ್ಲಿ ಅನ್ವೇಷಿಸಿ ಏನು ಕೆಲಸವಾಗಬೇಕು ಎಂದು ವಿವರವಾಗಿ ಅಂಕಿಅಂಶ ಸಂಗ್ರಹಿಸಿ ಅದರ ಪ್ರಕಾರ ಕಾರ್ಯಕ್ರಮ ತೆಗೆದು ಕೊಳ್ಳಬೇಕೆಂದು ನಿರ್ಧಾರಮಾಡಿ ಕೆಲಸ ಪ್ರಾರಂಭವಾಯಿತು.

ಪ್ರಾರಂಭದಲ್ಲಿ ಅಲ್ಲಿಗೆ ಹೋಗಿದ್ದಾಗ ಅಲ್ಲಿ ಅವರು ಅನೇಕ ಜನರನ್ನು ಕಂಡು ಅವರ ಅಭಿಪ್ರಾಯಗಳನ್ನು ಕೇಳಿಕೊಂಡು ಬಂದಿದ್ದ ಮಾನ್ಯ ಮಂತ್ರಿಗಳ ಅಭಿಪ್ರಾಯವನ್ನು ಕೇಳಿದಾಗ ಅವರು ತಮ್ಮ ತಮ್ಮ ಸ್ಪಷ್ಟವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರೋ ಅದರಲ್ಲಿ ಬಹು ಭಾಗವನ್ನು ಅಂಗೀಕರಿಸಿ ಅದರಂತೆ ಅನೇಕ ಕೆಲಸಗಳನ್ನು ಅಲ್ಲಲ್ಲಿ ಪ್ರಾರಂಭ ಕೂಡ ಮಾಡಲಾಗಿದೆ. ಮಾನ್ಯ ಆರ್ಮುಗಂರವರ ವರದಿಯನ್ನು ಓದಿಕೊಂಡರೆ ಅಲ್ಲಿಯ ಜನತೆಗೆ ಮಾನ್ಯ ಸಚಿವರುಗಳು ಆ ಪ್ರದೇಶಕ್ಕೆ ಬೇಟಿ ಕೊಟ್ಟಿದ್ದಾಗ ಅವರಿಗೆ ಏನೊಂದು ಭರವಸೆಗಳನ್ನು ಕೊಟ್ಟು ಬಂದಿದ್ದರೋ, ಅವುಗಳಲ್ಲಿ ಬಹು ಭಾಗ ಕಾರ್ಯಗತವಾಗಿವೆ ಅನ್ನುವುದು ವೇದ್ಯವಾಗುತ್ತದೆ. ಆದರೆ ಇನ್ನು ಕೆಲವು ಕೆಲಸಗಳು ಅಷ್ಟು ತ್ವರಿತವಾಗಿ ಕಾರ್ಯಗತವಾಗದೆ ಇರುವುದಕ್ಕೆ ಕಾರಣಗಳೂ ಇದೆ. ಈಗಾಗಲೇ ಲೋಕೋಪಯೋಗಿ ಸಚಿವರಾದ ಮಾನ್ಯ ಎಚ್. ಎಂ. ಚನ್ನಬಸಪ್ಪನವರು ಅಲ್ಲಿ ಆ ಲಿಫ್ಟ್ ಇರಿಗೇಷನ್ ಕೆಲಸ ಸ್ವಲ್ಪ ನಿಧಾನವಾಗುವುದಕ್ಕೆ ಕಾರಣಗಳೇನು ಎಂಬುದಕ್ಕೆ ತಿಳಿಸಿದ್ದಾರೆ. ಅದರೆ ಮಂತ್ರಿಗಳು ಆ ಭಾಗಕ್ಕೆ ಪ್ರವಾಸಕ್ಕೆ ಹೋಗಿದ್ದಾಗ ಈ ಕೆಲಸಗಳನ್ನು ಬೇಗ ಮುಗಿಸುತ್ತೇವೆಂದು ಹೇಳಿರಬಹುದು, ಇಲ್ಲ ಎಂದು ಹೇಳುವುದಿಲ್ಲ. ಆದರೆ ಅವರು ಅಲ್ಲಿ ಹಾಗೆ ಹೇಳಿ ಇಲ್ಲಿಗೆ ವಾಪಸ್ ಬಂದ ನಂತರ ಇಲ್ಲಿನ ವಾಸ್ತವ ಸ್ಥಿತಿಗಳನ್ನು ನೋಡಿದಾಗ ಆ ಕೆಲಸಗಳ ಬಗ್ಗೆ ಇಲ್ಲಿ ಇನ್ನೂ ಎಸ್ಟಿಮೇಟ್ ಆಗಿರುವುದಿಲ್ಲ; ಇನ್ನು ಕೆಲವು ಫೀಜಿಬಲ್ಲ ಅಲ್ಲವೇ ಅನ್ನುವುದೂ ಕೂಡ ಗೊತ್ತಾಗಿರುವುದಿಲ್ಲ. ಇಂಥ ಕೆಲವು ಕಾರಣಗಳಿಂದ ಕೆಲಸಗಳು ನಿಧಾನವಾಗಿರುತ್ತವೆ. ಹಾಗೇ ಆ ವಿದ್ಯುಚ್ಛಕ್ತಿ ಲೈನನ್ನು ಹಾಕತಕ್ಕ ಕೆಲಸದಲ್ಲೂ ನಿಧಾನವಾಗಿದೆ. ಆ ಕೆಲಸಗಳನ್ನು ಅಷ್ಟು ಬೇಗ ಮಾಡು ವುದಕ್ಕೆ ಆಗುವುದಿಲ್ಲ. ಅಲ್ಲಿ ಆ ಲೈನನ್ನು ಎಳೆಯ ಬೇಕಾಗಿದ್ದರೆ ಅದರಿಂದ ಸಾಕಷ್ಟು ರಿಟರ್ನ್ ಬರುತ್ತದೆಯೆ ಇಲ್ಲವೇ ಎಂಬುದನ್ನು ನೋಡದೆ ಲೈನನ್ನು ಎಳೆಯುವುದಕ್ಕಾಗುವುದಿಲ್ಲ ಎಂಬುದನ್ನು ಎಲ್ಲಾ ಮಾನ್ಯ ಸದಸ್ಯರಿಗೂ ಚೆನ್ನಾಗಿ ಗೊತ್ತಿರತಕ್ಕ ವಿಷಯ ಇದು. ಆದರೆ ಈ ದಿವಸ ಅಲ್ಲಿ ಈ ಕೆಲಸವನ್ನು ರಿಟರ್ನ್ ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡುತ್ತಿಲ್ಲ. ಅದುದರಿಂದಲೇ ಅಲ್ಲಿ ಈ ಕೆಲಸ ನಿಧಾನವಾಗುವುದಕ್ಕೆ ಕಾರಣವಾಗಿದೆ.

ಇನ್ನು ಕೆಲವು ಮಾನ್ಯ ಸದಸ್ಯರುಗಳು ಸಭೆಗೆ ಕೆಲವು ವಿವರಗಳನ್ನು ತಿಳಿಸಬೇಕೆಂದು ಕೇಳಿದ್ದಾರೆ. ಕೆಲವು ಮಾನ್ಯ ಸದಸ್ಯರು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರಿಗೆ ಮೊದಲೇ ಕೊಡಬೇಕೆಂದು ಕೇಳಿದ್ದ ಹಣವೇ ಬಹಳ ಕಡಿಮೆ, ಇವರು ಹೆಚ್ಚು ಹಣವನ್ನು ಕೇಳಿದ್ದರೆ ಅವರು ಇನ್ನೂ ಹೆಚ್ಚಿನ ಹಣವನ್ನು ಕೊಡುತ್ತಿದ್ದರೆಂದು ಹೇಳಿದ್ದಾರೆ. ಆದರೆ ನನಗೆ ಗೊತ್ತಿರುವ ಪ್ರಕಾರ ಆ ಮಹಾರಾಷ್ಟ್ರದವರು ತಮಗೆ ೧೩೫ ಕೋಟಿ ರೂಪಾಯಿಗಳು ಬೇಕೆಂದು ಕೇಳಿದ್ದಾರೆ. ಆಂಧ್ರದವರು ೭೬.೫೫ ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಬಿಹಾರ್ ಸರ್ಕಾರದವರು ೩೨ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆ, ಗುಜರಾತ್ ಸರ್ಕಾರದವರು ೩೬ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆ. ನಮ್ಮ ಮೈಸೂರು ಸರ್ಕಾರದವರಾದ ನಾವು ೨೮ ಮುಕ್ಕಾಲು ಕೋಟಿ ಬೇಕೆಂದು ನಾವು ಕೇಳಿದ್ದೇವೆ. ನನ್ನಲ್ಲಿರುವ ದಾಖಲೆಗಳ ಪ್ರಕಾರ ನಾವು ತಾರೀಖು ೭ನೇ ನವೆಂಬರ್ ೧೯೭೨ಕ್ಕೇ ನಮಗೆ ೨೮ ಕೋಟಿ ಬೇಕೆಂದು ಕೇಳಿದ್ದೇವೆ. ನಮ್ಮ ಬೇಡಿಕೆಯನ್ನು ಅಷ್ಟು ಹಣಕ್ಕೆ ಕಳುಹಿಸಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ—ಮೊದಲು ಇಲ್ಲಿಗೆ ಆ ಕೇಂದ್ರದಿಂದ ಒಂದು ಸ್ಟಡಿ ಟೀಂ ಬಂದಿತಲ್ಲಾ ಆಗ ಅವರು ಇಲ್ಲಿ ಬಂದು ಅಂದಾಜು ಮಾಡಿದ ನಂತರ ನಮ್ಮ ಸರ್ಕಾರದವರು ಕೇಳಿದ ಹಣ ಎಷ್ಟು ?

ಶ್ರೀ ಎನ್. ಹುಚ್ಚಮಾಸ್ತಿಗೌಡ—ಆಗ ನಾವು ಕೇಳಿದ್ದು ಹದಿನಾರೂವರೆ ಕೋಟಿ ರೂಪಾಯಿ ಅನಂತರ ತಾರೀಖು ೭ನೇ ನವೆಂಬರ್ ೧೯೭೨ ರಂದು ಇಪ್ಪತ್ತೆಂಟೂ ಮುಕ್ಕಾಲು ಕೋಟಿ ರೂಪಾಯಿಗಳು ಬೇಕೆಂದು ಕೇಳಿದ್ದೇವೆ. ಶ್ರೀ ಆರ್ಮುಗಂ ಅವರು ತಮ್ಮ ವರದಿಯಲ್ಲಿ ೫೦ ಕೋಟಿ ರೂಪಾಯಿಗಳು ಬೇಕೆಂದು ಹೇಳಿದ್ದಾರೆ. ಅಂದರೆ ಅವರು ಕೇಳಿರತಕ್ಕದ್ದು ೭ ತಿಂಗಳಿಗೆ. ನಾವು ಕೇಳಿರತಕ್ಕ ಅಂದಾಜು ಆ ಇಪ್ಪತ್ತೆಂಟೂ ಮುಕ್ಕಾಲು ಕೋಟಿ ರೂಪಾಯಿ ಬರುವ ಮಾರ್ಚಿ ಆಖೈರಿನವರೆಗೆ ಮಾತ್ರ. ಅದಾದನಂತರ ನಾವು ಇನ್ನೂ ಹೆಚ್ಚಿಗೆ ಕೇಳಬೇಕಾಗುತ್ತದೆ ಅನ್ನುವುದು ನನಗೂ ಚೆನ್ನಾಗಿ ಗೊತ್ತಿದೆ.

ಆದರೆ ಆ ಬೊಂಬಾಯಿ ಅಧಿಪತ್ಯದಲ್ಲಿ ಇರತಕ್ಕ ಪರಿಸ್ಥಿತಿಯ ಬಗ್ಗೆ ಹಿಂದೂಸ್ಥಾನ್ ಪತ್ರಿಕೆಯಲ್ಲಿ ರಿಪೋರ್ಟಾಗಿದೆ. ಅಲ್ಲಿ ಸುಮಾರು ಈ ಭೀಕರ ಕ್ಷಾಮಕ್ಕೆ ೧೫ ಸಹಸ್ರ ಗ್ರಾಮಗಳು ಅಂದರೆ ಸುಮಾರು ೨೦ ಜಿಲ್ಲೆಗಳಲ್ಲಿ ಈ ತೊಂದರೆ ಉಂಟಾಗಿದೆ. ಅಂದರೆ ಮುಕ್ಕಾಲು ಭಾಗದ ರಾಜ್ಯ ತೊಂದರೆಗೊಳಗಾಗಿದೆ ಎಂಬುದಾಗಿ ವರದಿಯಾಗಿದೆ. ನಮ್ಮಲ್ಲಿರುವಂತೆ ಅಲ್ಲಿಯೂ ದನಗಳಿಗೆ ಮೇವಿಲ್ಲದೆ ಸಾಯುತ್ತಿವೆಯೆಂದೂ, ಜನರು ಹೊಟ್ಟೆಗೆ ಅನ್ನವಿಲ್ಲದೆ ಊರಿಂದ ಊರಿಗೆ ಅಲೆಯುತ್ತಿದ್ದಾರೆಂದೂ ವರದಿಯಾಗಿದೆ. ತಾವು ಯಾರು ಬೇಕಾದರೂ ಅವನ್ನು ಓದಬಹುದು. ಆದರೆ ಅಲ್ಲಿ ಒಂದು ಕಡೆ ಎರಡು ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ ಅಲ್ಲಿನ ಪರಿಸ್ಥಿತಿಗೂ ಇಲ್ಲಿ ನಮ್ಮ ಪರಿಸ್ಥಿತಿಗೂ ಏನಾದರೂ ವ್ಯತ್ಯಾಸವಿದೆಯೇ, ಅಲ್ಲಿ ಅವರು ಹೇಗೆ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ, ಜನರಿಗೆ ಕೆಲಸಗಳನ್ನು ಹೇಗೆ ಒದಗಿಸುತ್ತಿದ್ದಾರೆ, ಅವರಿಗೆ ಕೂಲಿಯನ್ನು ಹೇಗೆ ಕೊಡುತ್ತಿದ್ದಾರೆ, ಇಲ್ಲಿಗೂ ಅಲ್ಲಿಗೂ ಏನು ಈ ವಿಷಯಗಳಲ್ಲಿ ವ್ಯತ್ಯಾಸ ಇದೆ ಎಂಬುದನ್ನು ಅಧ್ಯಯನ ಮಾಡಿಕೊಂಡು ಬರುವುದಕ್ಕಾಗಿ ನಮ್ಮ ಗುಲ್ಬರ್ಗಾ ಜಿಲ್ಲೆಯ ಡಿ. ಸಿ. ಅವರನ್ನು ಕಳುಹಿಸಲಾಗಿತ್ತು. ಆದರೆ ನಾವು ಇಲ್ಲಿ ಕೈಗೊಂಡಿರತಕ್ಕ ಮಾರ್ಗಗಳೇ ಉತ್ತಮವಾದುವುಗಳೆಂದೂ, ಅವರು ಕೊಡತಕ್ಕ ಆ ಕೂಲಿ ಪದ್ಧತಿಯಲ್ಲಿ ದೋಷವಿರುತ್ತೆಂದೂ ಅವರು ವರದಿ ಮಾಡಿದ್ದಾರೆ, ಮಾನ್ಯ ದಿಗಂಬರ ರಾಯರೂ ಕೂಡ ಆ ಮಾತನ್ನೇ ಹೇಳಿದ್ದಾರೆ. ಅಲ್ಲಿ ಕೆಲವು ಅಧಿಕಾರಿಗಳು ದುಡ್ಡನ್ನು ತಿಂದು ಹಾಕಿರುವುದರಿಂದ ಅವರ ಬಗ್ಗೆ ವಿಚಾರಣೆ ನಡೆಸತಕ್ಕ ಸಂದರ್ಭಗಳೂ ಕೂಡ ಅಲ್ಲಿವೆ ಎಂಬುದಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಅದಕ್ಕೆಲ್ಲಾ ಇಲ್ಲಿ ಅವಕಾಶ ಇರುವುದಿಲ್ಲ ಎಂಬುದಾಗಿ ಈಗಾಗಲೇ ಮಾನ್ಯ ಚನ್ನಬಸಪ್ಪನವರು ಹೇಳಿದ್ದಾರೆ. ಆದರೆ ನಾವೇನು ಈಗ ಕೇಂದ್ರ ಸರ್ಕಾರಕ್ಕೆ ಹಣವನ್ನು ಕೇಳಿದ್ದೇವೆ, ಅದಕ್ಕೂ ಹೆಚ್ಚಿನ ಹಣವನ್ನು ಕೇಳುವುದಕ್ಕೆ ನಮಗೆ ಇನ್ನೂ ಅವಕಾಶವಿದೆ. ಅದಕ್ಕೆ ಸಮಯ ಬರುತ್ತದೆ, ಆಗ ನಾವು ಅದನ್ನು ಕೇಳಬಹುದು. ಮಹಾರಾಷ್ಟ್ರಕ್ಕೆ ನನಗೆ ಬಂದಿರತಕ್ಕ ವರದಿಯ ಪ್ರಕಾರ ೩೨ ಕೋಟಿ ರೂಪಾಯಿಗಳು ಬಂದಿದೆ ಎಂದು ಗೊತ್ತಾಗಿದೆ. ನಾವು ೫೦ ಕೋಟಿ ಕೇಳಿದರೆ ಸಾಕಾಗಬಹುದೆಂದು ವರದಿಯಲ್ಲಿದೆ. ಆದರೆ ನಾವು ಕೇಳಿರತಕ್ಕ ೨೮ ಕೋಟಿ ರೂಪಾಯಿಗಳಿಗೆ ನಾನು ಸಧ್ಯದಲ್ಲಿ ವಿವರಗಳನ್ನು ಒದಗಿಸಬೇಕಾದುದಿಲ್ಲವೆಂದು ಭಾವಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ—ನಮ್ಮ ಸರ್ಕಾರದವರು ಆ ಬರಗಾಲ ಪೀಡಿತ ಪ್ರದೇಶದಲ್ಲಿ ಮಾರ್ಚಿ ತಿಂಗಳ ಆಖೈರುವರೆಗೆ ಎಷ್ಟು ಜನರಿಗೆ ಕೆಲಸವನ್ನು ಒದಗಿಸಬೇಕಾಗುತ್ತದೆ ಎಂಬುದಕ್ಕೆ ಎಷ್ಟು ಅಂದಾಜು ಮಾಡಿದ್ದಾರೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ—ನಾಲ್ಕು ಲಕ್ಷಕ್ಕೆ ಮೀರಿ ಆರು ಲಕ್ಷಕ್ಕೆ ಹತ್ತಿರ ಹತ್ತಿರ ಅಷ್ಟು ಜನರಿಗೆ ಕೆಲಸವನ್ನು ಒದಗಿಸಬೇಕಾಗುತ್ತದೆಂದು ಲೆಕ್ಕ ಹಾಕಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ—ನಿಮ್ಮ ಪಕ್ಷದ ಶ್ರೀಮತಿ ವಿಜಯಾ ದೇಸಾಯಿ ಅವರು ಅಲ್ಲಿ ೬ ಲಕ್ಷ ಜನಕ್ಕೆ ಗುಲ್ಬರ್ಗಾ ಒಂದು ಜಿಲ್ಲೆಯಲ್ಲಿ ಕೆಲಸ ಒದಗಿಸಬೇಕಾಗುತ್ತದೆಂದು ಹೇಳಿದ್ದಾರಲ್ಲಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ—ಸರ್ಕಾರದವರು ಬೀದರ್, ಬಿಜಾಪುರ ಗುಲ್ಬರ್ಗಾ ಮತ್ತು ಬೆಳಗಾಂ ಜಿಲ್ಲೆಯಲ್ಲಿ ಕ್ಷಾಮಕ್ಕೆ ತುತ್ತಾಗಿರತಕ್ಕ ತಾಲ್ಲೂಕಿನ ಜನರನ್ನು ಮಾತ್ರ ಲೆಕ್ಕ ಹಾಕಿ ನಾವು ಅಷ್ಟು ಎಂದು ಹೇಳಿದ್ದೇವೆ.

ಶ್ರೀ ಎಸ್. ವೈ. ಪಾಟೀಲ್ : ನಮ್ಮ ಅಂದಾಜು ತಪ್ಪಿದರೆ, ನಾವು ಅಲ್ಲಿ ಹೋಗಿ ವ್ಯವಸಾಯ ಮಾಡುವುದು ಹೇಗೆ ? ಇದು ಒಂದು ದೊಡ್ಡ ಪ್ರಶ್ನೆಯಾಗಿದೆ. ಇದು ಏನಾಗುತ್ತದೆಂದರೆ ಊಟಕ್ಕೆ ಬರುವ ಸಂಖ್ಯೆಯನ್ನು ಕಡಿಮೆ ಮಾಡುತ್ತಾ ಹೋದರೆ ಊಟದ ವ್ಯವಸ್ಥೆ ಹೇಗೆ ನಡೆಯುತ್ತದೆ ? ಗುಲ್ಬರ್ಗಾಕ್ಕೆ ೬ ಲಕ್ಷ ರೂಪಾಯಿಗಳು ಬೇಕು ಅಂದಮೇಲೆ ಬಿಜಾಪುರಕ್ಕೆ ಎಷ್ಟು ಬೇಕಾಗುತ್ತದೆಂಬುದನ್ನು ಮೊದಲೆ ಮಂಜೂರು ಮಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಶ್ರೀ ಎಸ್.ವೈ. ಪಾಟೀಲ್ ಅವರಿಗೆ ಗೊತ್ತಿದೆ. ೧೯೨೬ನೇ ಇಸವಿಯಿಂದ ಇಲ್ಲಿಯವರೆಗೂ ಎಷ್ಟು ವೇಳೆ ಕ್ಷಾಮ ಬಂದಿದೆ ಆಗ ಪರಿಸ್ಥಿತಿ ಏನೇನಾಗಿದೆ, ಎಷ್ಟು ಜನ ಊರು ಬಿಟ್ಟಿದ್ದರು, ಹಿಂದೆ ಎಷ್ಟರಮಟ್ಟಿಗೆ ಕಷ್ಟಪಟ್ಟಿದ್ದಾರೆಂಬುದೂ ಅನೇಕರಿಗೆ ಗೊತ್ತಿದೆ. ಆದ್ದರಿಂದ ಇದೇನೂ ಹೊಸದಾಗಿ ೧೯೭೨ನೇ ಇಸವಿಯಲ್ಲಿ ಬಂದಂಥ ಪಾಪವಲ್ಲ. ಕಳೆದ ವರ್ಷ ೧೧೬ ತಾಲ್ಲೂಕು ಮೈಸೂರು ರಾಜ್ಯದಲ್ಲಿ ಕ್ಷಾಮ ಉಂಟಾಗಿದೆ. ಈ ವರ್ಷ ೧೭೫ ತಾಲ್ಲೂಕುಗಳಲ್ಲಿ ೧೩೧ ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿ ಇದೆ.

ಶ್ರೀ ಎಸ್. ವೈ. ಪಾಟೀಲ್ : ನಮ್ಮ ಪ್ರದೇಶಗಳಿಗೆ ಮಲತಾಯಿ ಧೋರಣೆ ಸಲ್ಲದು. ಅದು ಸರಿಯಲ್ಲ. ನಾವು ಇಲ್ಲಿ ಹುಡುಗಾಟಿಕೆಗಾಗಿ ಬಂದಿಲ್ಲ. ನಾನು ಅಧ್ಯಕ್ಷರನ್ನು ಪ್ರಾರ್ಥನೆ ಮಾಡಬೇಕಾಗಿದೆ ಕೇವಲ ಸ್ವಲ್ಪ ಹೊತ್ತು ಭಾಷಣ ಕೇಳಿಕೊಂಡು ಹೋಗತಕ್ಕದ್ದಲ್ಲ. ಇದೇನು ಕೊನೆಯ ದಿವಸವೆಂದು ಹೇಳಿಕೊಂಡು ಹೋಗಬೇಂದು ನಾನು ಬಂದಿಲ್ಲ. ನಾನು ಎಷ್ಟು ಘಂಟೆ ಬೇಕಾದರೂ ಇಲ್ಲಿ ಕೂತು ಕೊಳ್ಳುತ್ತೇನೆ.

ಅಧ್ಯಕ್ಷರು : ನಾನು ಏನಾದರೂ ಜಾಸ್ತಿ ಮಾತನಾಡಿ ಹೇಳಿದರೆ, ನನ್ನನ್ನು ಕಠೋರವಾಗಿ ಹೇಳಿದಿರಿ ಎಂದು ಹೇಳುತ್ತೀರಿ. ಮಾನ್ಯ ಮಂತ್ರಿಗಳು ಈಲ್ಡ್ ಆಗಿಲ್ಲ.

ಶ್ರೀ ಎಸ್. ವೈ. ಪಾಟೀಲ್ : ಮಾನ್ಯ ಮಂತ್ರಿಗಳು ಈಲ್ಡ್ ಆಗುವ ಪರಿಸ್ಥಿತಿ ಇಲ್ಲ. ಈ ಸಭೆಯನ್ನು ಅಡ್ಜರ್ನ್‌ಮಾಡಿ ಮುಗಿಸಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ : ಮಾನ್ಯ ಸದಸ್ಯರು ಇಲ್ಲಿಯವರೆಗೂ ಏನೇನು ವಿಷಯಗಳನ್ನು ಹೇಳಿದರೋ ಅವೆಲ್ಲವನ್ನೂ ಕೇಳಿದ್ದೇನೆ.

ಶ್ರೀ ಎಸ್. ವೈ ಪಾಟೀಲ್ : ದಯವಿಟ್ಟು ಒಂದು ಮಿನಿಟ್ ಈಲ್ಡ್ ಆಗಿ. ನಾನು ಹೆಚ್ಚಿನದನ್ನು ಹೇಳುವುದಿಲ್ಲ ಪಿ. ಡಬ್ಲ್ಯು. ಡಿ. ಯಲ್ಲಿ ೧೦ ಮೈಲಿ ರಸ್ತೆ ಕೆಲಸವನ್ನು ಎಷ್ಟು ಕಡೆ ಮಾಡಿದ್ದಾರೆ? ಬಿಜಾಪುರ ಜಿಲ್ಲೆಯಲ್ಲಿ ನಮ್ಮ ತಾಲ್ಲೂಕುಗಳಾದ ಇಂಡಿ ಮತ್ತು ಸಿಂಧಗಿ ವಿಷಯವಾಗಿ ಹೇಳಿ, ಫ್ಯಾಮಿನ್ ಇರತಕ್ಕಂಥ ಪ್ರದೇಶಗಳ ವಿಷಯವನ್ನು ಮಂತ್ರಿಗಳು ಮೊದಲು ಹೇಳಬೇಕು. ನಮ್ಮ ಪ್ರಾಂತಗಳಲ್ಲಿ ಬಹುಶ : ಫ್ಯಾಮಿನ್ ಬಹಳವಾಗಿದೆಯೆಂಬ ಅಭಿಪ್ರಾಯವನ್ನು ಎಲ್ಲ ಸದಸ್ಯರು ಈ ಸದನದಲ್ಲಿ ಹೇಳಿದ್ದಾರೆ. ಕೆಲಸ ಕೊಡುವ ವಿಷಯವಾಗಿ ಈ ಸರ್ಕಾರದವರು ಮತ್ತು ಕೇಂದ್ರ ಸರ್ಕಾರದವರು ಗಮನ ಕೊಡಬೇಕು ಮುಂದಿನ ಸೆಪ್ಟಂಬರ್—ಆಕ್ಟೋಬರ್‌ವರೆಗೆ ಮಾಡಬೇಕಾದ ಕೆಲಸ ಬೇಕಾದಷ್ಟು ಇದೆ. ಬೆಳಗಾಂ, ಬಿಜಾಪುರ, ಬಿದರ್, ಗುಲ್ಬರ್ಗಾ, ಜಿಲ್ಲೆಗಳು ತೀರಾ ಅಭಾವಕ್ಕೊಳಗಾಗಿರುವ ಪ್ರದೇಶಗಳು. ಈಗ ಆ ಜಿಲ್ಲೆಗಳಲ್ಲಿ ಎಷ್ಟು ಜನರಿಗೆ ಕೆಲಸಗಳನ್ನು ಒದಗಿಸಿಕೊಡುತ್ತಾರೆಂಬ ಅಂಶವನ್ನು ಸರ್ಕಾರದವರು ನನಗೆ ಸ್ಪಷ್ಟವಾಗಿ ಈ ದಿನ ಹೇಳಬೇಕು. ನಾವು ಗುಲ್ಬರ್ಗಾಕ್ಕೆ ಹೋದಾಗ ಅಧಿಕಾರಿಗಳ ಹತ್ತಿರ ಭೇಟಿ ಮಾಡಿ ಗುಲ್ಬರ್ಗಾ ಜಿಲ್ಲೆಯಲ್ಲಿ ೪ ಲಕ್ಷ ಜನರಿಗೆ ಕೆಲಸಕೊಡುತ್ತಾರೆಂದು ಹೇಳಿದ್ದೇವೆ. ಆದ್ದರಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಎಷ್ಟು ಜನರಿಗೆ ಕೆಲಸಗಳನ್ನು ಮುಂದೆ ಬರತಕ್ಕ ೯ ತಿಂಗಳುಗಳಲ್ಲಿ ಕೊಡಬೇಕಾಗುತ್ತದೆಂಬುದರಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಒಂದು ಚಿತ್ರವನ್ನು ಈ ಸಭೆಯಲ್ಲಿಡಬೇಕು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ : ನನ್ನ ದೃಷ್ಟಿಯಲ್ಲಿ ೬ ಲಕ್ಷ ಜನರಿಗೆ ಕೆಲಸಗಳನ್ನು ಒದಗಿಸಬೇಕೆಂದು ಕೇಳಿರುವುದು. ಈಗಿನ ಪರಿಸ್ಥಿತಿಯನ್ನು ನೋಡಿದರೆ ೬ ಲಕ್ಷ ಇರುವುದನ್ನು ೮ ೧೦ ಲಕ್ಷದವರೆಗೂ ಕೆಲಸಗಳನ್ನು ಕೊಡಬೇಕಾಗಿ ಬರುತ್ತದೆಂದು ಅಂದಾಜಾಗಿದೆ. ಆದರೆ ೬ ಲಕ್ಷ ಕೆಲಸಗಳನ್ನು ಒದಗಿಸಿದಮೇಲೆ ನಂತರ ಒಬ್ಬರಿಗೂ ಕೆಲಸ ಕೊಡುವುದಿಲ್ಲವೆಂದು ಹೇಳುವ ಹಾಗೆ ಇಲ್ಲ ಏಕೆಂದರೆ ಪರಿಸ್ಥಿತಿ ದಿನೇ ದಿನೇ ಹೆಚ್ಚು ಸಂಕಟಕ್ಕೆ ಒಳಗಾಗುತ್ತಿದೆ. ನನ್ನ ಅಭಿಪ್ರಾಯದಲ್ಲಿ ಡಿಸೆಂಬರ್ ಆಖೈರಿನೊಳಗೆ ೮ ಲಕ್ಷವಲ್ಲ, ೧೦ ಲಕ್ಷ ಕೆಲಸಗಳನ್ನು ಕೊಡಬೇಕಾಗಿ ಬರಬಹುದು. ನಾವು ಕೇಂದ್ರ ಸರ್ಕಾರದವರನ್ನು ಕೇಳುವುದಕ್ಕೆ ಏನು ಅಡ್ಡಿ ಇಲ್ಲ ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ಹಾಗೆ ಕೆಲಸಗಳು ಹೆಚ್ಚು ಸಂಖ್ಯೆಯಲ್ಲಿ ಒದಗಿಸುವುದು ಅವಶ್ಯಕವೆಂದು ನಾನು ಹೇಳುತ್ತೇನೆ. ನನಗೆ ಅದರ ಬಗ್ಗೆ ಏನು ಅಡ್ಡಿ ಇಲ್ಲ. ೧೦ ಲಕ್ಷವೇ ಅಲ್ಲ. ಅಲ್ಲಿ ಎಷ್ಟೆಷ್ಟು ಜನರಿಗೆ ಕೆಲಸಗಳನ್ನು ಒದಗಿಸುವುದಕ್ಕೆ ಸಾಧ್ಯವೋ ಅಷ್ಟನ್ನೂ ಒದಗಿಸಬೇಕೆಂದಿದ್ದೇವೆ. ಅಲ್ಲಿನ ಪರಿಸ್ಥಿತಿಯನ್ನು ನೋಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅದಕ್ಕೇನೂ ಮಿತಿ ಇಲ್ಲ.

ಇನ್ನು ಫ್ಯಾಮಿನ್ ಕೋಡಿನಲ್ಲಿರತಕ್ಕ ಕಲಂಗಳನ್ನು ಅನ್ವಯಿಸುವುದು ಬಹಳ ಒಳ್ಳೆಯದು ಅದರ ಪ್ರಕಾರ ಆಯಾ ಏರಿಯಾವನ್ನು ಫ್ಯಾಮಿನ್ ಎಂಬುದಾಗಿ ಡಿಕ್ಲೇರ್ ಮಾಡಬೇಕು. ಈ ಫ್ಯಾಮಿನ್ ಕೋಡ್ ಬಂದುದು ೧೯೪೪ರಲ್ಲಿ. ಆಗಿನ ಪರಿಸ್ಥಿತಿಯೋ ಬೇರೇ. ಆಗ ಬ್ರಿಟಿಷ್ ಸರ್ಕಾರ ಇತ್ತು. ಅವರು ತಮ್ಮ ಅಧಿಕಾರಿಗಳನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ಅವರನ್ನು ತುಂಬಾ ಹದ್ದುಬಸ್ತಿನಲ್ಲಿ ಇಟ್ಟುಕೊಂಡು ಹೋಗುತ್ತಿದ್ದರು. ಆದರೆ ಈಗಿನ ಪರಿಸ್ಥಿತಿಯೋ ಬೇರೇ. ಈಗಿನ ನಿಜವಾದ ಪರಿಸ್ಥಿತಿ, ಚಿತ್ರ ಏನಿದೆಯೆಂದರೆ, ಅಲ್ಲಿನ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು, ಅಲ್ಲಿನ ದನಕರುಗಳ ಸ್ಥಿತಿಯನ್ನು ಉತ್ತಮಗೊಳಿಸಬೇಕು. ಇಷ್ಟು ಕೆಲಸಗಳನ್ನು ಅಲ್ಲಿ ಮಾಡಬೇಕಾಗಿರುವುದರಿಂದ ಅಂತಹ ಸ್ಥಳಗಳಲ್ಲಿ ಫ್ಯಾಮಿನ್ ಎಂದು ಸುಮ್ಮನೆ ಡಿಕ್ಲೇರ್ ಮಾಡಿದರೆ ಇದೆಲ್ಲಾ ಬಗೆಹರಿಯುತ್ತದೆಂಬ ವಿಶ್ವಾಸ ನನಗೆ ಇಲ್ಲ. ಅಲ್ಲಿ ಏನೇನು ಕೆಲಸಗಳು ಆಗಬೇಕೋ ಅವೆಲ್ಲವನ್ನು ಈ ದಿವಸ ಕೈಗೊಂಡಿದ್ದೇವೆ, ಆ ಕೆಲಸಗಳನ್ನೆಲ್ಲಾ ಮಾಡುತ್ತಿದ್ದೇವೆ ಅಂದಮೇಲೆ ಫ್ಯಾಮಿನ್ ಕೋಡನ್ನು ಅನುಸರಿಸುವ ಸ್ಥಿತಿ ಇಲ್ಲ. ಆದ್ದರಿಂದ ಈಗ ಫ್ಯಾಮಿನ್ ಕೋಡ್ ಅವಶ್ಯಕವಿದ್ದರೆ ಇವತ್ತಿನ ಫ್ಯಾಮಿನ್‌ಗಳಿಗೆ ತಕ್ಕಂತೆ ಅದನ್ನು ಬದಲಾಯಿಸುವ ಕಾಲವೂ ಮುಂದೆ ಬರುತ್ತದೆಂದು ನಾನು ಭಾವಿಸುತ್ತೇನೆ. ಈಗ ಸದ್ಯದ ಪರಿಸ್ಥಿತಿಯಲ್ಲಿ ಅಲ್ಲಿನ ವಸ್ತುಸ್ಥಿತಿಯನ್ನು ನೋಡಿ ಅಲ್ಲಿರತಕ್ಕ ಅಂಶಗಳನ್ನು ಕಾರ್ಯಾಚರಣೆಗೆ ತರಬೇಕೆಂದು ನಾನು ಹೇಳುತ್ತೇನೆ.

ಇನ್ನು ಗ್ರಾಂಡ್ ವಾಟರ್ ಸರ್ವೆ ವಿಷಯದಲ್ಲಿ ಮಾನ್ಯ ಶ್ರೀ ಅಮರ್ಲಿಂಗಂ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ನಮ್ಮ ಮೈಸೂರು ರಾಜ್ಯದಲ್ಲಿ ತಕ್ಕ ಮಟ್ಟಿಗೆ ಈ ಕೆಲಸಗಳು ನಡೆದಿವೆ. ಈಗಾಗಲೇ ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ಮತ್ತು ಸೇಡಂ ತಾಲ್ಲೂಕುಗಳಲ್ಲಿ ಕೆಲಸಗಳು ಪೂರ್ತಿಯಾಗಿದೆ. ಈಗ ಆ ಕೆಲಸಗಳನ್ನು ತೆಗೆದುಕೊಂಡಿರುವ ತಾಲ್ಲೂಕುಗಳು ಅಂದರೆ, ಗುಲ್ಬರ್ಗಾ, ಅಫಜಲ್‌ಪುರ, ಷಹಪೂರ್, ಬಿದರ್ ಜಿಲ್ಲೆಯ ಹುಮನಾಬಾದ್ ಮತ್ತು ಔರದ್ ಮತ್ತು ಬಸವಕಲ್ಯಾಣ ಮತ್ತು ಬೆಳಗಾಂ ಜಿಲ್ಲೆಯ ಗೋಕಾಕ್, ಹುಕ್ಕೇರಿ, ರಾಮದುರ್ಗ, ರಾಯಬಾಗ್, ಅಥಣಿ, ಮತ್ತು ಚಿಕೋಡಿ, ಬಿಜಾಪುರ ಜಿಲ್ಲೆಯ ಜಮಖಂಡಿ, ಬಾದಾಮಿ, ಸಿಂಧಗಿ, ಇಂಡಿ,—ಈ ತಾಲ್ಲೂಕುಗಳಲ್ಲಿ ಸರ್ವೆ ಕಾರ್ಯಗಳು ನಡೆಯುತ್ತಿವೆ. ನಮ್ಮ ಮೈಸೂರು ರಾಜ್ಯದಲ್ಲಿ ಭೂಗರ್ಭ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳು ಸಾಕಾದಷ್ಟು ಪ್ರವೀಣತೆಯನ್ನು ಪಡೆದಿದ್ದಾರೆ. ಮೈಸೂರು ದೇಶದಲ್ಲಿ ಇರುವುದು ಇರಲಿ, ಇಡೀ ಭರತಖಂಡದಲ್ಲೇ ನಮ್ಮ ರಾಜ್ಯದ ಅಧಿಕಾರಿಗಳು ಒಳ್ಳೆಯ ಹೆಸರನ್ನು ಪಡೆದಿದ್ದಾರೆ.

ಶ್ರೀ ಕೆ. ಎಚ್. ಹನುಮೇ ಗೌಡ : ಜಿಯಲಾಜಿಕಲ್ ಡಿಪಾರ್ಟ್‌ಮೆಂಟಿನವರು ಮಾಡಿರತಕ್ಕ ಸಲಹೆ ನೇಕಡ ೯೦ರಷ್ಟು ಫೆಲ್ಯೂರ್ ಆಗಿದೆ. ಕಾರಣವೇನು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ ; ಬೇರೆ ಕಡೆ ಇದಕ್ಕಿಂತ ಫಲಿತಾಂಶ ಎಷ್ಟರ ಮಟ್ಟಿಗೆ ಇದೆಯೆಂಬುದನ್ನು ಮಾನ್ಯ ಸದಸ್ಯರು ಊಹೆ ಮಾಡಬೇಕು. ವರ್ಲ್ಡ್ ಆರ್ಗನೈಜೇಷನ್ನಿನವರು Water soil is considered to be the best and the organisation connected with it is well-staffed and equipped ಎಂಬ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಮ್ಮ ಅಧಿಕಾರಿಗಳು ಕೆಲಸ ಮಾಡುವುದರಲ್ಲಿ ಯಾವತ್ತೂ ಫೇಲ್ ಆಗುವುದಿಲ್ಲವೆಂದು ಹೇಳಬಹುದು ಭೂಗರ್ಭದಲ್ಲಿರತಕ್ಕ ಆಳವನ್ನು ನೋಡಿ ನಿರ್ಧಾರವಾಗಿ, ನಿಖರವಾಗಿ ತಿಳಿಸುವುದು ಕಷ್ಟ ಎನ್ನುವುದನ್ನು ನಾವು ತಿಳಿದು ಹೇಳುತ್ತೇವೆ. ಅದನ್ನು ಮಾನ್ಯ ಸದಸ್ಯರು ನಂಬಬೇಕಾಗುತ್ತದೆ. ಅಲ್ಲಿ ಪರಿಣತರಾಗಿರುವರೇ ಚೆನ್ನಾಗಿ ಕೆಲಸ ಮಾಡಿದ್ದಾರೆ. ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕು ಮತ್ತು ಅಲ್ಲಿರತಕ್ಕ ಗ್ರಾಮಗಳ ಪೈಕಿ ಅರ್ಧಗ್ರಾಮಗಳಲ್ಲಿ ಬಾವಿ ತೋಡಿಸದರೆ ನೀರು ಬರುವುದಿಲ್ಲವೆಂದು ಹೇಳಿದ್ದಾರೆ. ಅವುಗಳನ್ನು ಪರೀಕ್ಷೆಮಾಡಿ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ನೋಡಿದ್ದಾರೆ. ಬೋರ್‌ವೆಲ್‌ಗಳನ್ನು ಹಾಕಿರುವ ಕಡೆಗಳಲ್ಲಿ ಎಷ್ಟು ಬಾವಿಗಳು ಫೇಲ್ ಆಗಿವೆ, ಎನ್ನುವುದನ್ನು ವರದಿಯಲ್ಲಿ ಹೇಳಿದ್ದಾರೆ ಗುಲ್ಬರ್ಗಾದಲ್ಲಿ ೮೭ ಸಕ್ಸೆಸ್ ಆಗಿವೆ. ೯೭ ಫೇಲ್ ಆಗಿವೆ, ಬಿದರ್ ಜಿಲ್ಲೆಯಲ್ಲಿ ೬೬ ಸಕ್ಸೆಸ್ ಆಗಿವೆ. ೨೨ ಫೇಲ್ ಆಗಿವೆ. ಬೀಜಪುರದಲ್ಲಿ ೪೭ ಸಕ್ಸೆಸ್ ಆಗಿವೆ ೮ ಫೇಲ್ ಆಗಿವೆ. ಬೆಳಗಾಂನಲ್ಲಿ ೯೩ ಸಕ್ಸೆಸ್ ಆಗಿವೆ. ೪೭ ಫೇಲ್ ಆಗಿವೆ ಎಂಬುದಾಗಿ ವರದಿಯಲ್ಲಿ ಕಾಣಿಸಿದ್ದಾರೆ. ಹೀಗೆ ಕೆಲವು ಭಾಗಗಳಲ್ಲಿ ಅವರ ರಿಪೋರ್ಟನ್ನು ದೃಷ್ಟಿಯಲ್ಲಿಟ್ಟುಕೊಳ್ಳದೆ ಬಾವಿ ತೆಗೆದು ಕೊಳ್ಳುವುದು ಕಷ್ಟ. ಹಾಗೆ ಒಂದು ವೇಳೆ ತೆಗೆಸಿದರೂ ಹೀಗೆ ಅನಾನುಕೂಲಗಳಾಗುತ್ತವೆ. ಒಂದೊಂದು ಊರಿಗೆ ೧೦ ನೀರಾವರಿ ಬಾವಿಗಳನ್ನು ತೆಗೆಸಬೇಕೆಂದು ಕ್ಯಾಬಿನೆಟ್ ಡಿಶಿಶನ್ ಆದರೂ ಅದನ್ನು ಕಾರ್ಯಗತ ಮಾಡಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು ಹಾಗೆ ತೀರ್ಮಾನ ಮಾಡಿರುವುದು ನಿಜ. ಅದನ್ನು ಗುರಿಯಾಗಿಟ್ಟುಕೊಂಡು ನಾವು ಈಗಾಗಲೇ ಕೆಲಸ ಪ್ರಾರಂಭ ಮಾಡಿದ್ದೇವೆ ಈಗ ಎಷ್ಟು ಬಾವಿಗಳಾಗಿವೆ ಎಂಬುದನ್ನು ತಿಳಿಸುತ್ತೇನೆ ಈಗಾಗಲೇ ನಾವು ಒಟ್ಟು ೧೫ ಸಾವಿರ ಪ್ರೋಗ್ರಾಮನ್ನು ೩ ವರ್ಷದ ಅವಧಿಯಲ್ಲಿ ಇಟ್ಟುಕೊಂಡಿದ್ದೇವೆ. ಅದರ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ ೩,೪೦೦ ಬಾವಿಗಳು, ಬೀದಾರಿನಲ್ಲಿ ೧,೭೫೯ ಬಾವಿಗಳು, ಗುಲ್ಬರ್ಗದಲ್ಲಿ ೨೬೦೦ ಬಾವಿಗಳು ಬೆಳಗಾಂ ನಲ್ಲಿ ೧,೭೦೦ ರಾಯಚೂರಿನಲ್ಲಿ ೧,೬೦೦—ಇಷ್ಟು ಬಾವಿಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿ ಆಗಸ್ಟ್ ಒಂದನೇ ತಾರೀಕಿನಿಂದ ಡಿಸೆಂಬರ್ ವರೆಗೆ ಒಟ್ಟು ೩೫೫೮ ಬಾವಿಗಳ ಕೆಲಸಕ್ಕೆ ಈಗಾಗಲೇ ಸ್ಯಾಂಕ್ಷನ್ ಆಗಿದೆ; ಮತ್ತು ಹಣವನ್ನು ಸಹ ಒದಗಿಸಲಾಗಿದೆ. ಇದು ಯಾವ್ಯಾವ ಜಿಲ್ಲೆಯೊಳಗೆ ಬರುತ್ತದೆ ಎಂದು ಹೇಳುತ್ತೇನೆ. ಬೀಜಾಪುರ ಜಿಲ್ಲೆ ೧,೨೦೦ ಬೀದಾರ್—೬೬೦, ಗುಲ್ಬರ್ಗ—೫೦೧, ಬೆಳಗಾಂ—೩೨೧, ರಾಯಚೂರು—೭೦೬; ಇಷ್ಟು ಬಾವಿಗಳಿಗೆ ಈಗಾಗಲೇ ಮಂಜೂರಾತಿ ನೊರೆತು ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಇದರ ಜೊತೆಗೆ ಇನ್ನೂ ಅಷ್ಟಷ್ಟು ಭೂಗರ್ಭ ಇಲಾಖೆಯವರ ಅಭಿಪ್ರಾಯ ತೆಗೆದುಕೊಂಡು ಉಳಿದ ಬಾವಿಗಳ ಕೆಲಸವನ್ನು ತೆಗೆದು ಕೊಂಡು ಪ್ರತಿಯೊಂದು ಊರಿಗೂ ೧೦-೧೦ ಬಾವಿಗಳನ್ನು ಕೊಡುವ ಗುರಿಯನ್ನು ಇಟ್ಟುಕೊಂಡಿದ್ದೇವೆ ಅವುಗಳನ್ನು ಮಾಡುವುದಕ್ಕೆ ಸರ್ವ ಪ್ರಯತ್ನವನ್ನು ಮಾಡುತ್ತೇವೆ.

ಇನ್ನು ಬಾವಿಗಳನ್ನು ತೋಡತಕ್ಕ ಸಂದರ್ಭದಲ್ಲಿ ಭೂ ಅಭಿವೃದ್ಧಿ ಬ್ಯಾಂಕಿನವರು ಇದಕ್ಕೆ ಹಣ ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಮೂರು ತಿಂಗಳ ಹಿಂದೆ ಒಂದು ಅಭಿಪ್ರಾಯ ಇತ್ತು. ಅದರ ಬಗ್ಗೆ ಯಾವ ರೀತಿ ಕಾಲವನ್ನು ಕಡಿಮೆ ಮಾಡಬೇಕೆಂದು ಪರ್ಯಾಲೋಚನೆ ಮಾಡಿ ೧೫ ದಿವಸ ಅಥವಾ ಒಂದು ತಿಂಗಳೊಳಗೆ ಮಂಜೂರಾತಿ ಕೊಡುವ ಹಾಗೆ ಏರ್ಪಾಡು ಮಾಡುತ್ತಿದೇವೆ.

ಶ್ರೀ ಸಿ. ಬೈರೇಗೌಡ : ಗ್ರಾಂಡ್ ವಾಟರ್ ಸರ್ವೆ ಎಲ್ಲಿ ನಡೆದಿದೆ, ಅಲ್ಲಿ ಹಣ ಕೊಡಬೇಕೆಂದು ಇದೆ. ಸರ್ವೆ ನಡೆಯದ ಕಡೆ ಮಂಜೂರಾಗುತ್ತಿಲ್ಲ.

ಶ್ರೀ ಎನ್ ಹುಚ್ಚಮಾಸ್ತಿ ಗೌಡ : ಸದ್ಯಕ್ಕೆ ಗ್ರೌಂಡ್ ವಾಟರ್ ಸರ್ವೆ ಮಾಡುವುದರ ಜೊತಗೆ ಅಭಾವ ಪ್ರದೇಶದಲ್ಲಿ ಗ್ರಾಂಡ್ ವಾಟರ್ ಸರ್ವೆ ಆಗದಿದ್ದರೂ ಕೆಲಸ ಆಗಲೇ ಪ್ರಾರಂಭ ಮಾಡಿದ್ದೇವೆ. ಎಲ್ಲ ತೀರ ತೊಂದರೆಗೆ ಒಳಗಾದ ಪ್ರದೇಶಗಳಿವೆ, ಅಲ್ಲಿ ಸರ್ವೆ ಆಗದೆಯು ಕೆಲಸ ನಡೆದಿವೆ ಇಷ್ಟು ನೀರಾವರಿ ಬಾವಿಗಳ ವಿಚಾರ.
ಇನ್ನು ಬಾವಿಗಳ ಹೂಳು ತೆಗೆಯತಕ್ಕ ಕೆಲಸಕ್ಕೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಸಾಲ ಕೊಡುತ್ತೇದೆ. ಅದನ್ನು ಕೂಡ ಆದಷ್ಟು ಹೆಚ್ಚು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ವೈ ಪಾಟೀಲ್ : ಇವತ್ತು ನಿಮಗೆ ಬೇಕಾದವರಿಗೆ ಇದನ್ನು ಕೊಡುತ್ತಿದ್ದೀರಿ. ಅದನ್ನು ಎಷ್ಟು ತಿಂಗಳಲ್ಲಿ ಕೊಡುತ್ತೀರಿ ಎಂದು ಹೇಳಬೇಕು. ನಿಮಗೆ ಅಲ್ಲಿ ಏನಾದರೂ ಮಾಡಬೇಕೆಂದೆ ನೀವು ಮುಖ್ಯಮಂತ್ರಿಯವರು ಮತ್ತು ಪಿಡಬ್ಲ್ಯುಡಿ ಮಂತ್ರಿಯವರು ನಮ್ಮ ಪ್ರದೇಶಕ್ಕೆ ಬಂದು ಜನರಿಗೆ ಏನು ಸಮಾಧಾನ ಹೇಳುತ್ತೀರೋ, ಅದನ್ನು ಹೇಳಿ. ನೀವು ಗರೀಬಿ ಹಠಾವೋ ಎಂದು ಹೇಳತಕ್ಕಂತಹ ಜನರ ಮ್ಯಾನೇಜರ್‌ಸ್ ಇದ್ದೀರಿ. ಅದನ್ನು ನೀವು ಇವತ್ತು ಚಲೋ ರೀತಿಯಲ್ಲಿ ಹೇಳಬೇಕು.

Interruption

(ಅಧ್ಯಕ್ಷರು ಕೂತುಕೊಳ್ಳಿ ಎಂದು ಸದಸ್ಯರಿಗೆ ಹೇಳಿದರೂ ಶ್ರೀ ಎಸ್. ವೈ. ಪಾಟೀಲ್ ಅವರು ಒಂದೇ ಸಮನೆ ಕೂಗಾಡಿದರು)

ಶ್ರೀ ಎನ್. ಹುಚ್ಚಮಾಸ್ತಿಗೌಡ : ಇನ್ನು ಆಹಾರಧಾನ್ಯ ಒದಗಿಸುವ ವಿಷಯದಲ್ಲಿ ಮಾನ್ಯ ಆರುಮುಗಂ ರವರು ತಮ್ಮ ವರದಿಯಲ್ಲಿ ಇನ್ನೂ ಹೆಚ್ಚು ವಿಷಯ ಸಂಗ್ರಹಣೆ ಮಾಡಿ ಹೇಳಿದ್ದರೆ ಬಹಳ ಚೆನ್ನಾಗಿತ್ತು ಎಂದು ನನ್ನ ಭಾವನೆ. ನಾನು ಈ ಅಧಿವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಎರಡು ದಿವಸ ಜನರು ಕೆಲಸ ಮಾಡುತ್ತಿರುವ ೧೨೦ ಸ್ಥಳಗಳಿಗೆ ಭೇಟಿ ಕೊಟ್ಟು ಆಹಾರ ವಿತರಣೆಯ ಬಗ್ಗೆ ನೋಡಿ ಬಂದಿದ್ದೇನೆ; ಮತ್ತು ಕೆಲಸ ಮಾಡುವ ಜನರನ್ನು ಕೇಳಿ ದಾಗ ಆಹಾರಧಾನ್ಯದ ಬಗ್ಗೆ ಎಲ್ಲೂ ಕೊರತೆ ಹೇಳಿದ್ದಾರೆ ಇವರು ಯಾವುದೋ ಒಂದು ನಿದರ್ಶನವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾರ್ವತ್ರಿಕವಾಗಿ ಆಹಾರದ ಕೊರತೆ ಇದೆ ಎಂದು ಹೇಳುವುದು ಸರಿಯಲ್ಲವೆಂದು ಹೇಳುತ್ತೇನೆ ಈಗಾಗಲೇ ಗುಲ್ಬರ್ಗದಲ್ಲಿ ೧,೧೩೩ ಡಿಪೋಗಳು ಕೆಲಸ ಮಾಡುತ್ತಿವೆ. ಬೀಜಾಪುರದಲ್ಲಿ ೧,೧೬೨ ಡಿಪೋಗಳು ಕೆಲಸ ಮಾಡುತ್ತಿವೆ. ಬೀದರಿನಲ್ಲಿ ೫೦೦, ಬೆಳಗಾಂ ನಲ್ಲಿ ೧೦೫೬ ರಾಯಚೂರಿನಲ್ಲಿ ೬೨೬—ಇಷ್ಟು ನ್ಯಾಯ ಬೆಲೆಯ ಅಂಗಡಿ ಗಳಲ್ಲಿ ಧಾನ್ಯವನ್ನು ಕೊಡುತ್ತಿದ್ದಾರೆ. ಅದೇ ರೀತಿ ಗುಲ್ಬರ್ಗ ಜಿಲ್ಲೆಯಲ್ಲಿ ೧೨೮೯ ಟನ್ ಗೋಧಿ ಆಗಸ್ಟ್ ತಿಂಗಳಲ್ಲಿ ಖರ್ಚಾಗಿದೆ; ಸೆಪ್ಟಂಬರಿನಲ್ಲಿ ೨೬೨೫ ಟನ್, ಅಕ್ಟೋಬರಿನಲ್ಲಿ ೩,೨೮೩ ಟನ್, ಮತ್ತು ನವಂಬರಿನಲ್ಲಿ ೪೫೪೭ ಟನ್ ಖರ್ಚಾಗಿದೆ. ಪ್ರತೀ ತಿಂಗಳು ಅಲ್ಲಿ ಆಹಾರಧಾನ್ಯ ಹೆಚ್ಚು ಖರ್ಚಾಗುತ್ತಾ ಹೋಗುತ್ತಿದೆ. ನಾವು ಡಿಸೆಂಬರ್ ತಿಂಗಳಲ್ಲಿ ೬ ಸಾವಿರ ಟನ್ನಿಗೆ ಏರಿಸುವ ನಿರೀಕ್ಷೆ ಇಟ್ಟುಕೊಂಡು, ಅಷ್ಟನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಿದ್ದೇವೆ ಇದರ ಜೊತೆಗೆ ಅಕ್ಕಿಯನ್ನು ಸಹ ಅಲ್ಲಿ ಸಾಕಷ್ಟು ಒದಗಿಸಿದ್ದೇವೆ ಆಗಸ್ಟ್‌ನಲ್ಲಿ ೩೫ ಟನ್ ಮತ್ತು ನವಂಬರಿನಲ್ಲಿ ೫೩೪ ಟನ್ ಒದಗಿಸಲಾಗಿದೆ. ಬೀದರ್ ಜಿಲ್ಲೆಯಲ್ಲಿ ಆಗಸ್ಟ್‌ನಲ್ಲಿ ಗೋಧಿ ೬೨೪ ಟನ್. ಸೆಪ್ಟಂಬರಿನಲ್ಲಿ ೧೨೩೯ ಟನ್, ಅಕ್ಟೋಬರಿನಲ್ಲಿ ೧,೨೦೬ ಟನ್ ಒದಗಿಸಲಾಗಿದೆ. ಹಾಗೆಯೇ ಬಿಜಾಪುರ ಜಿಲ್ಲೆಯಲ್ಲಿ ಗೋಧಿ ಆಗಸ್ಟ್‌ನಲ್ಲಿ ೧,೧೪೬ ಟನ್, ಸೆಪ್ಟಂಬರಿನಲ್ಲಿ ೧೬೩೭ ಟನ್ ಅಕ್ಟೋಬರಿನಲ್ಲಿ ೨೧೩೫ ಟನ್ ನವಂಬರಿನಲ್ಲಿ ೨,೫೦೦ ಟನ್ ಒದಗಿಸಲಾಗಿದೆ,

(ಶ್ರೀ ಎಸ್. ವೈ. ಪಾಟೀಲ್ ರವರು ಎದ್ದು ನಿಂತು ಪ್ರತಿಭಟನೆ ಮಾಡಿದರು)

ಅಧ್ಯಕ್ಷರು : ತಾವು ಕುಳಿತುಕೊಳ್ಳಿ ; ಇಲ್ಲದಿದ್ದರೆ ನಾನು ಸಭೆಯನು ಅಡ್ಜರ್ನ್ ಮಾಡುತ್ತೇನೆ,

ಶ್ರೀ ಎಸ್ ವೈ ಪಾಟೀಲ್:—ತಾವು ಏನು ಬೇಕಾದರೂ ಮಾಡಿ; ನನಗೆ ಸರಿಯಾದ ಉತ್ತರ ಅವರು ಕೊಡಬೇಕು. ಅವರು ಸರಿಯಾದ ಉತ್ತರವನ್ನು ಹೇಳುತ್ತಾ ಇಲ್ಲ. ಬಾವಿಗಳನ್ನು ಡೀಸಿಲ್ಟ್ ಮಾಡುವ ಬಗ್ಗೆ ನನಗೆ ಉತ್ತರ ಬರಲಿಲ್ಲ. ಈ ಸರ್ಕಾರ ಈ ಮಂತ್ರಿಮಂಡಲವನ್ನು ತೆಗೆದುಕೊಂಡು ನಾವೇನು ಮಾಡೋಣ ಅಭಾವ ಪೀಡಿತ ಪ್ರದೇಶದಲ್ಲಿ ಜನಗಳು ತೊಂದರೆಗೊಳಗಾಗಿ ಸಾಯುತ್ತಾ ಇರುವಾಗ ಅವರಿಗೆ ಸಮರ್ಪಕವಾದ ಒಂದು ಉತ್ತರವನ್ನು ಮಾನ್ಯ ಮಂತ್ರಿಗಳು ಹೇಳುವುದಿಲ್ಲ.

ಅಧ್ಯಕ್ಷರು .—ಹೀಗೆಲ್ಲಾ ಮಾಡಿದರೆ ಹೇಗೆ ? ದಯಮಾಡಿ ಕುಳಿತುಕೊಳ್ಳಿ. ನೀವು ಬೊಂಬಾಯಿ ಅಸೆಂಬ್ಲಿಯಲ್ಲಿ ಇದ್ದೆ, ಅಲ್ಲಿದ್ದೆ, ಇಲ್ಲಿದ್ದೆ ಎಂದು ಹೇಳುತ್ತೀರಿ. ಹೀಗಿರುವಾಗ ಈ ರೀತಿ ಮಾಡುವುದು ನಿಮಗೆ ಭೂಷಣವಲ್ಲ.

ಶ್ರೀ ಎಸ್. ವೈ. ಪಾಟೀಲ್.—ಸಾಯುವ ಜನಗಳ ಬಗ್ಗೆ ಮಂತ್ರಿಗಳು ಹಾರಿಕೆಯ ಉತ್ತರ ಕೊಡುತ್ತಿದ್ದಾರೆ. (ಬಹಳ ಆವೇಶದಿಂದ ಮಾತನಾಡಿದರು)

ಅಧ್ಯಕ್ಷರು.—ದಯಮಾಡಿ ಕುಳಿತುಕೊಳ್ಳಿ. ಒಂದೊಂದಾಗಿ ಉತ್ತರವನ್ನು ಕೊಟ್ಟುಕೊಂಡು ಬರುತ್ತಿದ್ದಾರೆ,

ಶ್ರೀ ಎನ್. ಹುಚ್ಚಮಾಸ್ತಿಗೌಡ .—ಮಾನ್ಯ ಅಧ್ಯಕ್ಷರೇ ಆಹಾರಧಾನ್ಯವನ್ನು ಒದಗಿಸುವ ವಿಷಯದಲ್ಲಿ ನನಗೆ ಇದುವರೆಗೂ ಹೆಚ್ಚು ದೂರುಗಳು ಬಂದಿಲ್ಲ. ಶ್ರೀಮಾನ್ ಆರುಮುಗಂ ಅವರು ಹೇಳಿದ ಒಂದೆರಡು ವಿಚಾರಗಳ ಬಗೆ ವಿಚಾರಣೆ ಮಾಡಿ ಯಾರು ಆ ರೀತಿ ಆಹಾರವನ್ನು ಜನಗಳಿಗೆ ಒದಗಿಸದೆ ತೊಂದರೆ ಮಾಡಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಅಲ್ಲಿರತಕ್ಕ ಪರಿಸ್ಥಿತಿಯಲ್ಲಿ ಆಯಾಸ್ಥಳದಲ್ಲಿ ಯಾರು ಅಧಿಕಾರಿಗಳು ಆ ರೀತಿ ವರ್ತನೆ ಮಾಡಿದರು ಶಿಕ್ಷೆಯನ್ನು ಮಾಡು ವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಜನಗಳು ಅಲ್ಲಿ ಕೂಲಿ ಮಾಡಿ ಆ ಕೂಲಿಗೆ ಬಂದ ಹಣದಿಂದ ಧಾನ್ಯವನ್ನು ಕೊಂಡುಕೊಂಡು ತಿನ್ನಬೇಕಾದ ಪರಿಸ್ಥಿತಿ ಇದೆ ಅದನ್ನು ಮರೆತು ಅಧಿಕಾರಿಗಳು ಜನಗಳಿಗೆ ಸರಿಯಾಗಿ ಆಹಾರಧಾನ್ಯವನ್ನು ಕೊಡದೆ ತಾತ್ಸಾರ ಮಾಡಿದರೆ ಅಂಥವರ ಮೇಲೆ ನಾನು ಕ್ರಮತೆಗೆದುಕೊಳ್ಳುತ್ತೇನೆ.

ಇನ್ನು ರಿಗ್ಸ್ ವಿಚಾರದಲ್ಲಿ ಮಾನ್ಯ ಸದಸ್ಯರು ಆ ಪ್ರದೇಶಕ್ಕೆ ರಿಗ್ಸ್‌ಗಳನ್ನು ಒದಗಿಸಿಲ್ಲ. ಆದ್ದರಿಂದ ರಿಗ್ಸ್‌ಗಳನ್ನು ಒದಗಿಸಿ ಕುಡಿಯುವ ನೀರಿನ ಬಾವಿಗಳನ್ನು ತೋಡಿಸಿ ಅನುಕೂಲ ಮಾಡಿಕೊಡಬೇಕು ಎಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ತಿಳಿದುಕೊಂಡಿರುವ ಹಾಗೆ ಮತ್ತು ನಮ್ಮ ಅಧಿಕಾರಿಗಳಿಂದ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಬಂದಿರುವ ವರ್ತಮಾನದ ಪ್ರಕಾರ ಎಲ್ಲೆಲ್ಲಿ ಕುಡಿಯುವ ನೀರಿನ ಅನಾನುಕೂಲ ಇದೆ ಅಂಥಾ ಕಡೆಗಳಲ್ಲಿ ನೀರಿನ ಸೌಕರ್ಯವನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದಾರೆ. ಈಗಾಗಲೇ ಬೀದರ್‌ನಲ್ಲಿ ಒಂದು, ಗುಲ್ಬರ್ಗಾದಲ್ಲಿ ಒಂದು, ರಾಯಚೂರಿನಲ್ಲಿ ಒಂದು, ರಿಗ್ಸ್‌ಗಳು ಕೆಲಸ ಮಾಡುತ್ತಿವೆ. ಇದರ ಜೊತೆಗೆ ಇನ್ನೂ ಹೆಚ್ಚು ರಿಗ್ಸ್‌ಗಳನ್ನು ಹೊರ ದೇಶಗಳಿಂದ ತರಿಸಬೇಕಾದ ಪರಿಸ್ಥಿತಿ ಇದೆ. ಅವು ಯಾವಾಗ ಬರುತ್ತವೆ ಎಂಬುದನ್ನು ನಿರ್ಧಾರವಾಗಿ ಹೇಳುವುದಕ್ಕಾಗುವುದಿಲ್ಲ. ನಮಗೆ ಇನ್ನೂ ೫ ರಿಗ್ಸ್‌ಗಳು ಬೇಕು ಎಂದು ಅವುಗಳನ್ನು ತರಿಸುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಕುಡಿಯುವ ನೀರನ್ನು ಒದಗಿಸಿ ಕೊಡುವ ವಿಷಯದಲ್ಲಿ ಹಣ ಖರ್ಚು ಮಾಡುವುದಕ್ಕೆ ನಾವು ಹಿಂದೆ ಮುಂದೆ ನೋಡುವುದಿಲ್ಲ. ಯಾವ ಯಾವ ಊರಿನಲ್ಲಿ ಅವಶ್ಯಕವಾಗಿ ಕುಡಿಯುವ ನೀರು ಇಲ್ಲ ಅಂಥಾ ಕಡೆ ಓಪನ್ ವೆಲ್ಸ್‌ಗಳನ್ನು ತೋಡಿಸಿ ಅನುಕೂಲ ಮಾಡಿಕೊಡಬೇಕೆಂದೂ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದೆ. ೧೫೦ ಅಡಿ ತೋಡಿದರೂ ನೀರು ಬಾರದೆ ಇರತಕ್ಕ ಪ್ರದೇಶಗಳು ಬೀದರ್ ಜಿಲ್ಲೆಯಲ್ಲಿ ಇವೆ. ಅಂಥಾ ಕಡೆ ಬೋರ್‌ವೆಲ್‌ಗಳನ್ನು ತೆಗೆಸಿ ಕೊಟ್ಟು ಕುಡಿಯುವ ನೀರನ್ನು ಒದಗಿಸಬೇಕೆಂದು ಅಧಿಕಾರಿಗಳಿಗೆ ತಿಳಿಸಿದ್ದೇವೆ. ಎಲ್ಲಾ ಕಡೆಗಳಲ್ಲಿಯೂ ನೀರಿನ ಅನಾನುಕೂಲ ಇರುವ ಕಡೆ ಬಾವಿಗಳನ್ನು ತೋಡುವಂತಹ ಕೆಲಸ ನಡೆಯುತ್ತಿದೆ. ಶ್ರೀಮಾನ್ ಅರ್ಮುಗಂ ಅವರು ರೊಟ್ಟಿ ತಿನ್ನುವುದಕ್ಕೆ ಕುಡಿಯುವ ನೀರು ಇರಲಿಲ್ಲ ಎಂದು ಹೇಳಿದರು. ಸಂದರ್ಭ ಹೇಗಿತ್ತು ಎಂಬುದು ನನಗೆ ಗೊತ್ತಿಲ್ಲ. ಈಗಾಗಲೇ ಶ್ರೀಮಾನ್ ಚನ್ನಬಸಪ್ಪನವರು ಹೇಳಿದಂತೆ ಎಲ್ಲೆಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಅಂಥಾ ಕಡೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವುದಕ್ಕೆ ಏರ್ಪಾಡು ಮಾಡಿದ್ದೇವೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಡೆಪ್ಯುಟಿ ಕಮಿಷನರು ಪ್ರತಿ ತಾಲ್ಲೂಕಿನಲ್ಲಿಯೂ ಸಂಚಾರ ಮಾಡಿ ಆಯಾ ತಾಲ್ಲೂಕಿನ ಶಾಸನಸಭಾಸದಸ್ಯರು, ತಾಲ್ಲೂಕು ಬೋರ್ಡ್ ಅಧ್ಯಕ್ಷರು ಇನ್ನೂ ಕೆಲವು ಮುಂದಾಳುಗಳನ್ನು ಇಟ್ಟುಕೊಂಡು ಒಂದು ಸಭೆ ನಡೆಸಿ ಅವರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ.

ಶ್ರೀ ಎಸ್ ವೈ ಪಾಟೀಲ್.—(ಡೀಸಿಲ್ಟ್ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ ಎಂದು ಆವೇಶದಿಂದ ಮಾತನಾಡಿದರು.)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಸಮಯ ತೆಗೆದುಕೊಂಡು ಹೇಳುತ್ತಾರೆ. ಹಠ ಮಾಡಿದರೆ ಹೇಗೆ ? ಈ ರೀತಿ ಮಾಡುವುದಾದರೆ ನಾನು ಈ ಸಭೆಯನ್ನು ಬರಕಾಸ್ತು ಮಾಡ ಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವ ಊರಿನಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಅಂಥಾ ಕಡೆಗಳಲ್ಲಿ ತಕ್ಷಣ ಬಾವಿಗಳನ್ನು ತೋಡಿಸಿ ನೀರನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲದಿದ್ದರೆ ಟ್ಯಾಂಕರ್ ಮುಖಾಂತರ ಅವರಿಗೆ ಕುಡಿಯುವ ನೀರನ್ನು ಒದಗಿಸಬೇಕು ಎಂದು ಅಧಿಕಾರಿಗಳಿಗೆ ನಾವು ತಿಳಿಸಿದ್ದೇವೆ. ಕುಡಿಯುವ ನೀರು ಇಲ್ಲದೆ ಇರುವ ಕಡೆ ನೀರನ್ನು ಒದಗಿಸುವುದು ಅವರ ಪ್ರಥಮ ಜವಾಬ್ದಾರಿ ಎಂದು ತಿಳಿದು ನೀರನ್ನು ಒದಗಿಸಬೇಕು ಎಂದು ತಿಳಿಸಿದ್ದೇವೆ. ಮಾನ್ಯ ಸದಸ್ಯರು ಇಂತಿಂಥಾ ಊರುಗಳಲ್ಲಿ ಕುಡಿಯುವ ನೀರಿನ ಅನಾನುಕೂಲ ಇದೆ ಎಂದು ತಿಳಿಸಿದರೆ ಅಲ್ಲಿ ನೀರನ್ನು ಒದಗಿಸುವುದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಏರ್ಪಾಟು ಮಾಡುತ್ತೇನೆ.

ತಾಲ್ಲೂಕು ಕೇಂದ್ರಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಆಹಾರವನ್ನು ಒದಗಿಸುವುದು ಸೂಕ್ತ ಎಂದು ಶ್ರೀಮಾನ್ ಅರ್ಮುಗಂ ಅವರು ಸಲಹೆ ಮಾಡಿದ್ದಾರೆ. ಈ ಕೆಲಸವನ್ನು ಮಾಡುವುದಕ್ಕೋಸ್ಕರ ೨೦೦ ಜನ ಅಡಿಗೆಯವರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ ಎಂದು ಶ್ರೀ ಮಾನ್ ಸಿದ್ದವೀರಪ್ಪನವರು ಹೇಳಿದ್ದಾರೆ. ಆ ಕೆಲಸಕ್ಕೆ ಎಷ್ಟು ಜನ ಬೇಕೋ ಅಷ್ಟು ಜನ ಅಡಿಗೆಯವರನ್ನು ನೇಮಕ ಮಾಡಿಕೊಂಡು ತಾಲ್ಲೂಕು ಮಟ್ಟದಲ್ಲಿರತಕ್ಕ ಆಸ್ಪತ್ರೆಗಳಲ್ಲಿರತಕ್ಕ ರೋಗಿಗಳಿಗೆ ಆಹಾರವನ್ನು ಒದಗಿಸಬೇಕು ಎಂದು ನಾವು ತೀರ್ಮಾನವನ್ನು ಕೈಗೊಂಡಿದ್ದೇವೆ. ಅದನ್ನು ಒದಗಿಸುವುದಕ್ಕೆ ಏರ್ಪಾಡು ಮಾಡುತ್ತೇವೆ.

ಕೈಮಗ್ಗದವರಿಗೆ ಅನುಕೂಲ ಮಾಡಬೇಕೆಂದು ಶ್ರೀಮಾನ್ ಬಂಗಿಯವರು ಹೇಳಿದ್ದಾರೆ. ಈ ವಿಚಾರ ವರದಿಯಲ್ಲಿ ಕೂಡ ಇದೆ. ವ್ಯವಸಾಯದ ಕೆಲಸ ಅಥವಾ ಬೇರೆ ಉದ್ಯೋಗ ಇಲ್ಲದೆ ಇರುವವರಿಗೆ ಬಹಳ ತೊಂದರೆಯಾಗಿದೆ. ಅವರಿಗೆ ಉದ್ಯೋಗವನ್ನು ಒದಗಿಸಬೇಕೆಂದು ಹೇಳಿದ್ದಾರೆ. ಅದಕ್ಕಾಗಿ ಬನಹಟ್ಟಿ, ಇಲಕಲ್‌ಗಳಲ್ಲಿ ೩೦ ಲಕ್ಷ ರೂಪಾಯಿಗಳನ್ನು ಒದಗಿಸಿಕೊಟ್ಟು ನೂಲಿನ ಮಳಿಗೆಗಳನ್ನು ಪ್ರಾರಂಭ ಮಾಡಿದ್ದೇವೆ. ಇದರ ಜೊತೆಗೆ ಗುರುಮಿಟಕಲ್, ಗದಗಬೆಟಗೇರಿ, ರಾಮದುರ್ಗ, ಆಳಂದ್ ಮತ್ತು ಬಸವ ಕಲ್ಯಾಣದಲ್ಲಿ ಯಾ ರನ್ ಡಿಪೋಗಳನ್ನು ಪ್ರಾರಂಭ ಮಾಡಿದ್ದೇವೆ. ಅದರ ಜೊತೆಗೆ ಬರೀ ಡಿಪೋಗಳನ್ನು

ಮಾಡಿದರೇನೂ ಸಾಲದು. ಪ್ಲೆಡ್ಜ್ ಲೋನ್ ಕೊಟ್ಟು ಅವರಿಗೆ ನೂಲನ್ನು ಒದಗಿಸಿಕೊಟ್ಟು ಅದರಿಂದ ತಯಾರಾದಂಥ ಬಟ್ಟೆಗಳನ್ನು ಒದಗಿಸಬೇಕು. ಅಂತಹ ಕೆಲಸವನ್ನು ಮಾಡುವುದಕ್ಕೆ ಅವರಿಗೆ ಪ್ಲೆಡ್ಜ್ ಲೋನ್ ಕೊಡಬೇಕೆಂದು ತೀರ್ಮಾನಮಾಡಿದ್ದೇವೆ. ಆ ಪ್ರದೇಶಗಳಲ್ಲಿ ೬೦ ಕೌಂಟುಗಳಿಗಿಂತ ಹೆಚ್ಚು ಉತ್ತಮ ದರ್ಜೆಯ ನೂಲನ್ನು ಉಪಯೋಗಿಸುವ ಅಭ್ಯಾಸವಿದೆ. ಅಲ್ಲಿ ನೂಲು ಒದಗಿಸುವುದು ಬಹಳ ಕಷ್ಟವಿದೆ. ಅದನ್ನು ಟೆಕ್ಸ್‌ಟೈಲ್ ಕಮಿಷನರ್ ಮುಖಾಂತರ ಒದಗಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಒಂದು ಕೋಟಿ ೪೦ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ತಯಾರುಮಾಡಿ ಕೇಂದ್ರಸರ್ಕಾರದ ಅನುಮತಿಗೋಸ್ಕರವಾಗಿ ಕಳುಹಿಸಿದ್ದೇವೆ. ಅದು ನಮಗೆ ಆದಷ್ಟು ಜಾಗ್ರತೆಯಾಗಿ ಬರುತ್ತದೆಂದು ನಿರೀಕ್ಷಣೆ ಮಾಡಿದ್ದೇವೆ. ಆ ಕೆಲಸವನ್ನು ಈಗಾಗಲೇ ಪ್ರಾರಂಭಮಾಡಿದ್ದೇವೆ. ಇಲ್ಲಿಯವರೆಗೂ ನಮಗೆ ೪೭ ಸಾವಿರ ಕೆ.ಜಿ. ನೂಲು ಬೇಕಾಗುತ್ತದೆ.

12-30 P.M.

ಶ್ರೀ ಎಸ್. ವೈ. ಪಾಟೀಲ್.—ನೀವು ನಮ್ಮನ್ನು ಇಷ್ಟು ಲೈಟಾಗಿ ಟ್ರೀಟ್ ಮಾಡಬೇಡಿ. ನಮಗೆ ಒಂದು ತಿಂಗಳಿಗೆ ೧ ಲಕ್ಷ ೪೭ ಸಾವಿರ ಕೆ.ಜಿ. ನೂಲು ಅವಶ್ಯಕವಾಗಿ ಬೇಕಾಗುತ್ತದೆ. ಅಷ್ಟು ನೂಲನ್ನು ಒದಗಿಸುವುದು ಅಲ್ಲಿ ಬಹಳ ಕಷ್ಟವಿದೆ. ಅಂದಮೇಲೆ ಮುಂದೆ ೩ ತಿಂಗಳ ನಂತರ ೪ ಸಾವಿರ ಕೆ.ಜಿ. ನೂಲು ಒದಗಿಸುತ್ತೇವೆಂದು ಹೇಳಿದರೆ ಹೇಗೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಹೇಳಿದ್ದನ್ನು ಮಾನ್ಯ ಸದಸ್ಯರು ಸರಿಯಾಗಿ ಕೇಳಬೇಕು. ಈ ಸಭೆಯಲ್ಲಿ ಕೋಪತಾಪಗಳಿಗೆ ಮಾನ್ಯ ಸದಸ್ಯರು ಯಾರೂ ಎಡೆ ಕೊಡದೆ ಎಲ್ಲರೂ ಶಾಂತಿಯಿಂದ ಹೋಗಬೇಕಾಗಿದೆ.

ಶ್ರೀ ಎಸ್. ವೈ. ಪಾಟೀಲ್.—ನಮಗೆ ಬೇಕಾಗಿರುವುದು ಸಾಯುವ ಕಾಲದಲ್ಲಿ ನಿಮ್ಮ ಸ್ನೇಹ. ಉಳಿದ ಕಾಲದಲ್ಲಿ ಬೇರೆಯವರ ಸ್ನೇಹ ಬೇಕಾಗುತ್ತದೆ. ನಾವು ಸಿದ್ಧರಾಗಿದ್ದೇವೆ ತೆರೆದ ಹಸ್ತದಲ್ಲಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾವೂ ಅದಕ್ಕೆ ಸಿದ್ಧರಿದ್ದೇವೆ.

ಶ್ರೀ ಎಸ್. ವೈ. ಪಾಟೀಲ್.—ನಿಮ್ಮ ತೆರೆದ ಹಸ್ತದಿಂದ ನಮಗೆ ಸ್ಮಶಾನಯಾತ್ರೆಯಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಹೇಳಿರತಕ್ಕ ಸ್ಥಳಗಳಲ್ಲದೆ ಕೈಮಗ್ಗಗಳಿಂದ ಜೀವನ ಮಾಡುವವರು ಸಾವಿರಾರು ಜನರು ಇದ್ದಾರೆ. ಅವರೆಲ್ಲರಿಗೂ ನೂಲನ್ನು ಒದಗಿಸುವುದಕ್ಕಾಗುವುದಿಲ್ಲ. ಆದ್ದರಿಂದ ಟೆಕ್ಸ್‌ಟೈಲ್ ಕಮಿಷನರ್ ಅವರಿಗೆ ಮನವಿ ಮಾಡಿಕೊಂಡಿದ್ದೇನೆ. ೬೦ ಕೌಂಟುಗಳಿಗಿಂತ ಮೇಲ್ದರ್ಜೆಯ ನೂಲನ್ನು ಒದಗಿಸಬೇಕೆಂದು ತಿಳಿಸಿದ್ದೇವೆ. ಸಾಧ್ಯವಾದಷ್ಟು ಬೇಗ ಆ ಪ್ರಯತ್ನ ಸಫಲವಾಗುತ್ತದೆಂದು ನಿರೀಕ್ಷಣೆ ಮಾಡಿದ್ದೇವೆ. ಆದ್ದರಿಂದ ಅದು ನಮ್ಮ ಕೈಯಲ್ಲಿಲ್ಲ. ಅದು ಕಂಟ್ರೋಲ್ ಕಮೊಡಿಟಿ. ಇಂತಹ ಒಂದು ಪರಿಸ್ಥಿತಿ ಇರುವುದರಿಂದ ೬೦ ಕೌಂಟುಗಳಿಂದ ಜಾಸ್ತಿಯಾಗಿ ಅದನ್ನು ಒದಗಿಸುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಅವರು ತಯಾರು ಮಾಡಿದಂಥ ಪದಾರ್ಥಗಳನ್ನು ಕೊಂಡುಕೊಳ್ಳುವುದಕ್ಕೆ ಗಿರಾಕಿಗಳು ಇಲ್ಲವೆಂದು ಹೇಳಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೋಆಪರೇಟಿವ್ ಸೊಸೈಟಿಗಳ ಮುಖಾಂತರ ಇದನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯ. ಮಾನ್ಯ ಸದಸ್ಯರ ವಿಚಾರವನ್ನೂ ಸಹ ನಾವು ಪರ್ಯಾಲೋಚನೆ ಮಾಡುತ್ತಿದ್ದೇವೆ

ಶ್ರೀ ಜೆ. ವಿಲ್. ಕಬಾಡಿ.—ಡಿಸ್ಟ್ರೆಸ್ ವಿಷಯ ಮತ್ತು ರಿಬೇಟ್ ಕೊಡುವ ವಿಷಯವಾಗಿ ನನಗೆ ಸ್ವಲ್ಪ ಹೇಳಬೇಕು. ನಿಮ್ಮ ಪ್ರೊಪೋಸಲ್ಸ್ ಹೋದರೂ ಸಹ ಮೇಲಿನಿಂದ ಬರುವುದರೊಳಗೆ ಅವರ ಪರಿಸ್ಥಿತಿ ಹಾಳಾಗಿ ಹೋಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದು ಲಕ್ಷದ ೪೦ ಸಾವಿರ ಕೆ.ಜಿ. ನೂಲನ್ನು ಡಿಪೋಗಳಿಂದ ತೆಗೆದು ಈಗ ಒದಗಿಸಿದ್ದಾರೆ. ಎಷ್ಟು ಒದಗಿಸಿದರೂ, ಅಲ್ಲಿ ಕೈ ಮಗ್ಗಗಳವರ ಸಂಖ್ಯೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಅದೇನೂ ಸಾಲುವುದಿಲ್ಲ. ಒಂದು ವಾರಕ್ಕೆ ಅದು ಮುಗಿದುಹೋಗಬಹುದು.

ಶ್ರೀ ಜೆ. ಎಲ್ ಕಬಾಡಿ.—ಗುಲ್ಬರ್ಗಾದಲ್ಲಿ ೧೦ ಸಾವಿರ ಕುಟುಂಬದವರು ೨೫ ಸೊಸೈಟಿಗಳಲ್ಲಿ ಕೆಲಸಮಾಡುತ್ತಿದ್ದಾರೆ. ಆದರೆ ಆ ಸೊಸೈಟಿಗಳು ಅಥವಾ ಡಿಪೋಗಳು ಸರಿಯಾಗಿ ಈಗ ಕೆಲಸಮಾಡುತ್ತಾ ಇಲ್ಲ. ಆದ್ದರಿಂದ ಗುಲ್ಬರ್ಗಾದಲ್ಲಿ ಕೂಡಲೇ ಒಂದು ಡಿಪೋ ತೆಗೆದು ಅಲ್ಲಿನ ನೇಕಾರರಿಗೆ ಸಹಾಯ ಮಾಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಈ ವಿಷಯ ಈಗಾಗಲೇ ತಮ್ಮ ಗಮನದಲ್ಲಿರಬೇಕು. ಅಲ್ಲಿ ಬೇಕಾದಷ್ಟು ಡಿಪೋಗಳು ಆಗಬೇಕು. ಕೇವಲ ಒಂದೆರಡು ಡಿಪೋಗಳಿಂದ ಏನೂ ಅನುಕೂಲವಾಗುವುದಿಲ್ಲ. ಕೇವಲ ಸ್ವಲ್ಪ ನೂಲನ್ನು ಒಂದೊಂದು ವಾರಕ್ಕೆ ಒದಗಿಸಿದರೆ, ಅದನ್ನು ತಯಾರುಮಾಡುವ ಖರ್ಚು ಜಾಸ್ತಿಯಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪರಿಸ್ಥಿತಿ ನಮ್ಮ ಹತೋಟಿ ಮೀರಿದೆ. ಇದು ಕಂಟ್ರೋಲ್ ಕಮೊಡಿಟಿ. ಟೆಕ್ಸ್‌ಟೈಲ್ ಕಮಿಷನರ್ ಅವರ ಪರ್ಮಿಟ್ ಮೇಲೆ ಇದನ್ನು ಕೊಡಬೇಕಾಗಿದೆ. ಆ ರೀತಿ ಜಾಗ್ರತೆಯಾಗಿ ಕೊಡಬೇಕೆಂದು ಕೇಳಿದ್ದೇವೆ. ಅಲ್ಲಿ ಎಷ್ಟೆಷ್ಟು ಸಂಖ್ಯೆಯಲ್ಲಿ ಕೈಮಗ್ಗದವರು ಇದ್ದಾರೆ, ಎಷ್ಟು ಜನರು ಉದ್ಯೋಗವಿಲ್ಲದೆ ತೊಂದರೆಪಡುತ್ತಿದ್ದಾರೆಂಬುದನ್ನು ನಾವು ಮನವರಿಕೆ ಮಾಡಿದ್ದೇವೆ. ಕೈಗಾರಿಕೆಯ ಮಂತ್ರಿಗಳು ಗುಲ್ಬರ್ಗಾದಲ್ಲಿ ಒಂದು ಸಬ್‌ಡಿಪೋವನ್ನು ತೆರೆಯುತ್ತೇವೆಂದು ಹೇಳಿದ್ದಾರೆ. ಕೇವಲ ಡಿಪೋಗಳನ್ನು ತೆಗೆಯುವುದು ಮುಖ್ಯವಲ್ಲ. ಹೆಚ್ಚು ಜನರಿಗೆ ಖಾಯಂ ಆಗಿ ಈ ದಿವಸ ಉದ್ಯೋಗ ಸಿಗುವ ಹಾಗೆ ಮಾಡಬೇಕಾದರೆ ಸ್ವಲ್ಪಮಟ್ಟಿಗೆ ತೊಂದರೆ ಇದೆಯೆಂದು ಅರಿಕೆಮಾಡಿಕೊಳ್ಳುತ್ತಿದ್ದೇನೆ.

ಇನ್ನು ಕುಡಿಯುವ ನೀರಿನ ಬಾವಿಗಳ ವಿಷಯ. ತಾತ್ಕಾಲಿಕವಾಗಿ ಈಗ ಕೆಲವು ಬಾವಿಗಳನ್ನು ತೆಗೆಸಿದ್ದಾರೆ. ಖಾಯಂ ಆಗಿ ಬಾವಿಗಳನ್ನು ತೆಗೆಯುವುದು ಅವಶ್ಯಕ. ಇರತಕ್ಕ ಕುಡಿಯುವ ನೀರಿನ ಬಾವಿಗಳನ್ನು ಆಳ ಮಾಡುವುದು ಮುಖ್ಯ. ತಾಲ್ಲೂಕು ಬೋರ್ಡ್‌ಗಳಿಗೆ ಈ ಕೆಲಸದ ಜವಾಬ್ದಾರಿಯನ್ನು ವಹಿಸಿಕೊಡಬೇಕಾಗಿದೆ. ಅವರಿಗೆ ಸಾಕಾದಷ್ಟು ಹಣವನ್ನು ಒದಗಿಸಿಕೊಡುತ್ತಾ ಇದ್ದೇವೆ.

ಇನ್ನು ರಸ್ತೆಗಳು ಹಾಗೂ ನೀರಾವರಿ ಕಾಮಗಾರಿಗಳ ವಿಷಯವನ್ನು ಈಗಾಗಲೇ ಮಾನ್ಯ ಚನ್ನಬಸಪ್ಪನವರು ಮಾನ್ಯ ಸದಸ್ಯರಿಗೆ ತಿಳಿಸಿದ್ದಾರೆ. ಈಗ ಮುಖ್ಯವಾಗಿರತಕ್ಕದ್ದು ದನಗಳ ಮೇವಿನ ವಿಷಯ.

ಶ್ರೀ ಕಾಗೋಡು ತಿಮ್ಮಪ್ಪ.—ನೀರಾವರಿ ಬಾವಿಗಳಿಗಾಗಿ ಅನೇಕ ಬ್ಯಾಂಕಿನವರು ಸಾಲವನ್ನು ಕೊಡುತ್ತಿದ್ದಾರೆ. ಆದರೆ ಆ ರೀತಿ ಸಾಲ ಕೊಡುವುದರಲ್ಲಿ ಬಹಳ ನಿಧಾನವಾಗುತ್ತಿದೆ. ಆದ್ದರಿಂದ ಅದರ ಬಗ್ಗೆ ಬೇರೆ ವ್ಯವಸ್ಥೆ ಮಾಡಬೇಕೆಂದು ಬಹಳ ಕಡೆಗಳಿಂದ ಒತ್ತಾಯ ಬಂದಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್ನು ಬಾವಿಗಳಿಗೆ ಸಾಲ ಕೊಡುವ ಕಾಲ ಬಹಳ ಜಾಸ್ತಿಯಾಗುತ್ತಿದೆ ಎನ್ನುವುದನ್ನು ತಿಳಿದು ಅನೇಕ ಕಡೆಗಳಿಂದ ಅದರ ಬಗ್ಗೆ ದೂರು ಬಂದಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳನ್ನು ಹಾಗೂ ಅಧ್ಯಕ್ಷರನ್ನು ಕರೆಸಿ ನಮ್ಮ ಮುಖ್ಯಮಂತ್ರಿಗಳು ಅವರ ಜೊತೆಯಲ್ಲಿ ಆಲೋಚನೆ ಮಾಡಿ ಇಷ್ಟೇ ದಿವಸಗಳೊಳಗೆ ಅದನ್ನು ಒದಗಿಸಿಕೊಡುವುದಕ್ಕೆ ಸಾಧ್ಯ ಎಂಬುದಾಗಿ ಚರ್ಚೆಯಾಗಿದೆ. ಆದ್ದರಿಂದ ಕೇವಲ ೧೫ ದಿವಸಗಳೊಳಗೆ ಅಥವಾ ಒಂದು ತಿಂಗಳೊಳಗೆ ಒದಗಿಸಿಕೊಡುತ್ತಾರೆಂದು ನಂಬಿದ್ದೇನೆ.

ಶ್ರೀ ಎಸ್. ವೈ. ಪಾಟೀಲ್.—ಒಬ್ಬ ಸಾಯುವ ಕಾಲದಲ್ಲಿ ಇರುವಾಗ, ಒಂದು ತಿಂಗಳೊಳಗೆ ಮೆಡಿಸನ್ ತರುವುದಕ್ಕೆ ಏರ್ಪಾಟು ಮಾಡುತ್ತೇವೆಂದು ಹೇಳಿದರೆ ಹೇಗೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದಕ್ಕೆ ನೀವು ಒಂದು ಮಂತ್ರ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ.—ನಮಗೆ ತಿಳಿದು ಬಂದಿರುವ ಹಾಗೆ ಬಾವಿಗಳನ್ನು ಆಳ ಮಾಡುವುದಕೆ ಸುಮಾರು ಒಂದು ಸಾವಿರ ರೂಪಾಯಿ ಎಂದು ಕೊಟ್ಟರೆ ಸಾಲುವುದಿಲ್ಲ. ಇದನ್ನು ಎರಡು ಸಾವಿರದವರೆಗೆ, ಹೆಚ್ಚು ಮಾಡಬೇಕೆಂದು ಜನರ ಒತ್ತಾಯ ಇದೆ. ಇದರ ಬಗ್ಗೆ ಮಂತ್ರಿಗಳು ಸ್ವಲ್ಪ ಹೇಳಬೇಕು.

ಶ್ರೀ ಎಸ್. ವೈ. ಪಾಟೀಲ್.—ಡೀಸಿಲ್ಟಿಂಗ್ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ಹೇಳಲಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಬಗೇನೊ ಹೇಳುತ್ತೇನೆ, ಮಾನ್ಯ ಸದಸ್ಯರು ನಾನು ಹೇಳುವುದನ್ನು ಸ್ವಲ್ಪ ಸಾವಕಾಶವಾಗಿ ಕೇಳಬೇಕೆಂದು ಪ್ರಾರ್ಥಿಸುತ್ತೇನೆ.

ಕೆಲವು ಊರುಗಳಲ್ಲಿ ಮಳೆ ಬಂದರೂ ಅಲ್ಲಿನ ಜನ ಬೀಜ ಹಾಗೂ ಗೊಬ್ಬರವನ್ನು ಕೊಂಡುಕೊಳ್ಳಲು ಅವರಿಗೆ ಶಕ್ತಿ ಇಲ್ಲ ಮತ್ತು ಇದರ ಬಗ್ಗೆ ಯಾವ ಏರ್ಪಾಡೂ ಮಾಡಲಿಲ್ಲ ಎಂದು ಶ್ರೀಮಾನ್ ಆರುಮುಗಂ

ರವರು ಅವರ ವರದಿಯಲ್ಲಿ ಹೇಳಿದ್ದಾರೆ. ಸರಕಾರ ಇದರ ಬಗ್ಗೆ ಮುಂದಾಲೋಚನೆ ಮಾಡಿ ಬಿಜಾಪುರ ಜಿಲ್ಲೆಗೆ ೩೦ ಲಕ್ಷ, ಗುಲ್ಬರ್ಗಾಕ್ಕೆ ೨೦ ಲಕ್ಷ ಬೀದರು ಜಿಲ್ಲೆಗೆ ಮೂರು ಲಕ್ಷ ಎಂದು ಪೂರ್ತಿಯಾಗಿ ಹಣವನ್ನು ಒದಗಿಸಿಕೊಡಲಾಗಿದೆ. ಇದನ್ನು ಉಪಯೋಗಿಸಿಕೊಂಡು ಬೀಜ ಗೊಬ್ಬರ ಒದಗಿಸುವುದಕೋಸ್ಕರ ಹಣವನ್ನು ವಿನಿಯೋಗ ಮಾಡಲು ಸರಕಾರ ಸೂಚನೆ ಕೊಟ್ಟು ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ

ಶ್ರೀ ಎಸ್.ವೈ. ಪಾಟೀಲ್ — ಡೀ ಸಿಲ್ಟಿಂಗ್ ಬಗ್ಗೆ ಹೇಳಿ ಸ್ವಾಮೀ?

ಅಧ್ಯಕ್ಷರು.—ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು, ಈ ರೀತಿ ಮಧ್ಯೆ ಮಧ್ಯೆ ಎದ್ದು ಮಂತ್ರಿಗಳ ಭಾಷಣಕ್ಕೆ ಅಡ್ಡಿ ಮಾಡಬಾರದು. ಮಾನ್ಯ ಮಂತ್ರಿಗಳು ಉತ್ತರ ಹೇಳಿದ ಮೇಲೆ ಬೇಕಾದರೆ ಇದರ ಬಗ್ಗೆ ಆಗ ಕ್ಲಾರಿಫಿಕೇಷನ್ ಕೇಳಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇತ್ತೀಚೆಗೆ ಪಂಪು ಸೆಟ್ಟುಗಳನ್ನು ಕೂಡ ಕೊಡಲಾಗಿದೆ. ಭೀಮಾ ನದಿ ಕೆಳಗೆ ಹಾಗೂ ಮಂಜ್ರಾ ನದಿ ಕೆಳಗೆ ಬಾವಿಗಳನ್ನು ಮಾಡಲು ಇವರಿಗೆ ಆಯಿಲ್ ಇಂಜನ್‌ಗಳನ್ನು ಒದಗಿಸಿಕೊಡಲಾಗಿದೆ ಇದರ ಮೂಲಕ ಆಹಾರಧಾನ್ಯಗಳನ್ನು ಬೆಳೆಯಲು ಸಹಾಯವಾಗಲಿ ಎಂದು ಸುಮಾರು ೨೬೪ ಪಂಪು ಸೆಟ್ಟುಗಳನ್ನು ಈ ಭಾಗದಲ್ಲಿ ಒದಗಿಸಬೇಕೆಂದು ಇವರಲ್ಲಿ ಈಗಾಗಲೇ ೧೬೪ ಪಂಪು ಸೆಟ್ಟುಗಳನ್ನು ಒದಗಿಸಿಕೊಡಲಾಗಿದೆ ಮತ್ತು ಇನ್ನುಳಿದ ಪಂಪುಸೆಟ್ಟುಗಳನ್ನೂ ಇಲ್ಲಿಗೆ ಒದಗಿಸುವುದರಲ್ಲಿದ್ದೇವೆ. ಗುಲ್ಬರ್ಗಾ ಜಿಲ್ಲೆಗೇನೆ ಸುಮಾರು ೨೦ ಪಂಪುಸೆಟ್ಟುಗಳನ್ನು ಕೊಡಲಾಗಿದೆ.

ಶ್ರೀ ಎಸ್.ವೈ. ಪಾಟೀಲ್.—ಇಂಡಿ ಹಾಗೂ ಸಿಂದಗಿ ತಾಲ್ಲೋಕುಗಳ ಬಗ್ಗೆ ಹೇಳಿ.

ಅಧ್ಯಕ್ಷರು.—ನಿಮ್ಮ ಒಂದು ತಾಲ್ಲೋಕಿಗೇ ಹೇಳಲು ಬರುವುದಿಲ್ಲ, ಅವರು ಎಲ್ಲ ಭಾಗಗಳಿಗೂ ಸಂಬಂಧಿಸಿದ ಹಾಗೆ ಹೇಳಬೇಕಾಗುತ್ತದೆ ಸರಕಾರ ಕೊಡುವ ಉತ್ತರವನ್ನು ತಾವು ಕೇಳಬೇಕು. ಹಾಗೆ ನಿಮಗೆ ಸಮಾಧಾನವಾಗದೇ ಇದ್ದರೆ ಈ ರೀತಿ ಮಾಡಬಾರದು, ಇಷ್ಟವಿಲ್ಲದೇ ಇದ್ದರೆ ಹೊರಗೆ ಹೋಗಬಹುದು, ನಿಮ್ಮ ಒಂದು ತಾಲ್ಲೂಕಿಗೇನೇ ಉತ್ತರ ಹೇಳಲು ಆಗುವುದಿಲ್ಲ. ಇದು ಕಳೆದ ೨೫ ವರ್ಷಗಳಿಂದಲೂ ಬರುತ್ತಲೇ ಇದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—೧೬೪ ಪಂಪು ಸೆಟ್ಟುಗಳನ್ನು ಯಾವ ರೀತಿ ಹಂಚಲಾಗಿದೆ ಎಂದರೆ ಗುಲ್ಬರ್ಗಾ ಜಿಲ್ಲೆಗೆ ೨೦ ಪಂಪುಸೆಟ್ಟುಗಳನ್ನು ಕೊಡಲಾಗಿದೆ. ಬಿಜಾಪುರಕ್ಕೆ ೫೪ ಪಂಪು ಸೆಟ್ಟುಗಳು ಮತ್ತು ಬೀದರು ಜಿಲ್ಲೆಗೆ ೧೦ ಪಂಪುಸೆಟ್ಟುಗಳನ್ನು ಕೊಡಲಾಗಿದೆ ಮತ್ತು ಇವು ಆ ಭಾಗಗಳಲ್ಲಿ ಕೆಲಸ ಮಾಡುತ್ತಿವೆ.

ಇನ್ನು ದನಗಳ ಮೇವಿನ ಬಗ್ಗೆ ಒದಗಿಸಿರುವ ವಿಭಾಗದಲ್ಲಿ ಶ್ರೀಮಾನ್ ಆರುಮುಗಂರವರು ಹೇಳಿರುವುದರಲ್ಲಾಗಲೀ ಮಾನ್ಯ ಸಭೆಯ ಸದಸ್ಯರುಗಳು ಇಲ್ಲಿ ಈಗ ಹೇಳುತ್ತಿರುವುದರ ವಿಚಾರದಲ್ಲಾಗಲೀ ಸರಕಾರ ಈ ದಿಸೆಯಲ್ಲಿ ಸಾಕಷ್ಟು ಕೆಲಸ ಮಾಡುವುದಕ್ಕಾಗಲಿಲ್ಲ ಎನ್ನುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಪರಿಸ್ಥಿತಿ ಹಾಗಿದೆ. ಅವರ ವರದಿ ಪ್ರಕಾರ ಸುಮಾರು ೨೪ ಲಕ್ಷ ದನಗಳು ಇದ್ದಿವೆ, ಇದರಲ್ಲಿ ಗುಲ್ಬರ್ಗಾ ಜಿಲ್ಲೆ ಒಂದರಲ್ಲೇ ಸುಮಾರು ೮-೯ ಲಕ್ಷ ದನಗಳಿವೆ, ಇದರಲ್ಲಿ ಕೆಲವು ಪ್ರದೇಶಗಳು ಎಂದರೆ ಬೆಳಗಾಂ ಹಾಗೂ ಅಥಣಿ ತಾಲ್ಲೋಕುಗಳನ್ನು ಬಿಟ್ಟರೆ ಉಳಿದ ತಾಲ್ಲೋಕುಗಳಲ್ಲಿ ಯಾವ ಬೆಳೆಯೂ ಆಗಿಲ್ಲ. ಹಾಗೇ ಬಿಜಾಪುರ ಜಿಲ್ಲೆಯ ಇಂಡಿ, ಸಿಂದಗಿ ಹಾಗೂ ಬಿಜಾಪುರ ಈ ಮೂರು ತಾಲ್ಲೂಕುಗಳನ್ನು ಬಿಟ್ಟು ಉಳಿದ ತಾಲ್ಲೋಕುಗಳಲ್ಲಿ ಸ್ವಲ್ಪ ಸ್ಥಿತಿ ಉತ್ತಮವಾಗಿದೆ. ಇನ್ನು ಗುಲ್ಬರ್ಗಾ ಡಿಸ್ಟ್ರಿಕ್ಟಿನಲ್ಲಿ ಸೋಲಾಪುರ, ಶೋರಾಪುರ, ಯಾದಗೀರ್, ಜೇವರಗಿ ಇಲ್ಲಿ ಸ್ವಲ್ಪ ಉತ್ತಮವಾಗಿದೆ. ಎಲ್ಲ ಭಾಗಗಳಿಂದಲೂ ಮೇವನ್ನು ಒದಗಿಸಿಕೊಡಬೇಕೆಂದು ನಾವು ಮನವಿ ಮಾಡಿ ಕೇಳಿದ್ದೆವು. ಅದರಂತೆ ಮಾನ್ಯ ಸಭೆಯಲ್ಲಿ ಶ್ರೀ ದೇವೇಗೌಡರವರು ಹೇಳಿದಂತೆ ಬಿರ್ಲಾ ಕಂಪನಿಯವರ ಕಡೆಯಿಂದ ಪೋಟೋ ಹಾಕಿಸಿದ್ದು ನಿಜ. ಅವರು ಆಗಸ್ಟು ತಿಂಗಳಲ್ಲಿ ಹುಲ್ಲನ್ನು ತೆಗೆದುಕೊಂಡು ಕಳುಹಿಸಿರುವುದೂ ನಿಜ. ಇದಾದ ಮೇಲೆ ಎಲ್ಲೆಲ್ಲಿ ಹುಲ್ಲು ಸಿಗುತ್ತದೋ ಅದನ್ನು ತರಿಸಲು ಪ್ರಯತ್ನ ಮಾಡಿದೆವು. ನಮ್ಮ ದೃಷ್ಟಿ ಏನಿತ್ತು ಎಂದರೆ ಖರೀಫ್ ಬೆಳೆ ಆಗಸ್ಟು ತಿಂಗಳಿಂದ ಅಕ್ಟೋಬರ್ ೧೫ರ ವರೆಗೆ ಬರುತ್ತೆ ಮತ್ತು ೧೫ನೇ ಅಕ್ಟೋಬರಿಂದಾಚೆಗೆ ರಬಿ ಕ್ರಾಪ್ ಬರುತ್ತೆ ಎನ್ನುವ ನಿರೀಕ್ಷೆ ಇತ್ತು. ಆ ಸಮಯದಲ್ಲೇ ಮಳೆ ಬರದೆ ರಬಿ ಕ್ರಾಪ್ ಹೋಯಿತು. ಅಕ್ಟೋಬರ್ ಒಳಗೆ ರಬಿ ಬೆಳೆ ಬರುವ ಸೂಚನೆಗಳಿದ್ದುದರಿಂದ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದರಲ್ಲಿ ನಿಧಾನವಾಯಿತು ಎಂದು ಇಲ್ಲಿ ತಿಳಿಸಲು ಇಷ್ಟಪಡುತ್ತೇನೆ. ಅಕ್ಟೋಬರ್ ಮೇಲೆ ಮಳೆ ಬಾರದೆ ಹೋದರೆ ಹುಲ್ಲು ಒದಗಿಸಿಕೊಡಬೇಕೆಂದು ಎಲ್ಲ ಕಡೆಗಳಿಗೂ ಮನವಿ ಮಾಡಿದೆವು. ಎಲ್ಲ ಕಡೆಗಳಿಂದಲೂ ನಮಗೆ ಇದರ ಬಗ್ಗೆ ವರದಿಗಳೂ ಬಂದವು. ದಾವಣಗೆರೆ ಮಂಡ್ಯ ಹಾಗೂ ಚಿತ್ರದುರ್ಗಗಳಲ್ಲಿ ಭತ್ತದ ಬೆಳೆ ಪೂರ್ತಿ ಬಂದಿರಲಿಲ್ಲ. ನವಂಬರ್ ೧೫ರ ಮೇಲೆ ಭತ್ತದ ಕಟಾವು ಆಗುವುದು, ಅದರಂತೆ ನವಂಬರ್ ೧೨ನೇ ತಾರೀಕಿ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ನಿಂದ ಇಲ್ಲಿಯವರೆಗೆ ಗುಲ್ಬರ್ಗಾ ಜಿಲ್ಲೆಗೆ ೫೦೫ ಟ್ರಕ್ಕುಗಳ ಲೋಡುಗಳು, ಬೀದರು ಜಿಲ್ಲೆಗೆ ೧೫೩ ಟ್ರಕ್ಕು ಲೋಡುಗಳಷ್ಟು, ಬಿಜಾಪುರ ಜಿಲ್ಲೆಗೆ ೯೮ ಟ್ರಕ್ಕು ಲೋಡುಗಳು, ಬಳ್ಳಾರಿ, ಧಾರವಾಡ ಹಾಗೂ ಮಂಡ್ಯ ಕಡೆಗಳಿಂದ ಕಳುಹಿಸಿರುವುದು ಹೀಗಿದೆ. ಗುಲ್ಬರ್ಗಾಕ್ಕೆ ೪೨ ಟ್ರಕ್ಕು ಲೋಡುಗಳು ಬೀದರಿಗೆ ೪೪ ಲೋಡುಗಳು, ಬಿಜಾಪುರಕ್ಕೆ ೬೪ ಟ್ರಕ್ಕು ಲೋಡುಗಳಷ್ಟು ಕಳುಹಿಸಲಾಗಿದೆ. ಧಾರವಾಡ ಬಳ್ಳಾರಿ ಭಾಗದಿಂದ ಕಳುಹಿಸಿರುವುದು ರಾಯಚೂರು ಜಿಲ್ಲೆಗೆ ೩೦ ಟ್ರಕ್ಕು ಲೋಡುಗಳು ಗುಲ್ಬರ್ಗಾಕ್ಕೆ ೪೭೦ ಟ್ರಕ್ಕು ಲೋಡುಗಳು ಬೀದರು ಜಿಲ್ಲೆಗೆ ಮತ್ತು ಬಿಜಾಪುರ ಜಿಲ್ಲೆಗೆ ೫೬ ಟ್ರಕ್ಕು ಲೋಡುಗಳಷ್ಟು ಕಳುಹಿಸಲಾಗಿದೆ. ಈಗಾಗಲೇ ಇಷ್ಟು ಹುಲ್ಲು ಕಳುಹಿಸಿರುವುದರ ಜೊತೆಗೆ ಮಂಡ್ಯದಿಂದ ೪೬ ವ್ಯಾಗನ್, ಹುಲ್ಲು ಬಿಜಾಪುರಕ್ಕೆ, ಹರಿಹರದಿಂದ ನಾಲ್ಕು ವ್ಯಾಗನ್ ಬಿಜಾಪುರಕ್ಕೆ ೧೬-೧೨-೭೨ ರಂದು ಕಳುಹಿಸಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಲ್ಲಿನ ರಿಕ್ವೈರ್‌ಮೆಂಟ್ ಎಷ್ಟು?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಗೋಸಂರಕ್ಷಣೆ ಇಲಾಖೆಯವರ ಪ್ರಕಾರ ಕಡೇ ಪಕ್ಷ ೫ ಕೆ.ಜಿ. ಮೇವು ಒಂದು ದಿವಸಕ್ಕೆ ಒಂದು ರಾಸಿಗೆ ಬೇಕು. ಆ ಲೆಕ್ಕ ತೆಗೆದುಕೊಂಡಲ್ಲಿ, ಮೊದಲು ಕೆಲವು ಭಾಗ ಹುಲ್ಲು ಹೊರಗಡೆಯಿಂದ ಬರುತ್ತಿತ್ತು. ಆವಾಗ ಒಂದು ಕೆ.ಜಿ. ಹುಲ್ಲಿಗೆ ೫೦ ಪೈಸೆ ಇತ್ತು. ನಾವು ಹುಲ್ಲು ಕಳುಹಿಸುವುದಕ್ಕೆ ಶುರು ಮಾಡಿದ ಮೇಲೆ ೩೦ ಪೈಸೆಗೆ ಈಗ ಸಿಕ್ಕುತ್ತಿದೆ. ನಾವು ನೆಲ್ಲು ಹುಲ್ಲನ್ನು ೧೫ ಪೈಸೆಗೆ ಕೊಡುತ್ತಾ ಇದ್ದೇವೆ. ಹೊರಗಡೆಯಿಂದಲೂ ಮೇವು ಬರುತ್ತಿದೆ. ಹುಲ್ಲು ೧೫ ಪೈಸೆಗೆ ಮತ್ತು ಜೋಳದ ಕಡ್ಡಿ ೨೫ ಪೈಸೆ ಈ ರೀತಿ ರೇಟಿದೆ. ನಾವು ಅದೇ ದರದಲ್ಲಿ ಕೊಡುತ್ತಿದ್ದೇವೆ. ಮಾನ್ಯ ಆರ್ಮುಗಂ ಅವರು ಇನ್ನೂ ಕಡಮೆ ಧಾರಣೆಗೆ ಮಾರಿ, ಸಾಧ್ಯವಾದರೆ ಏನೂ ಧಾರಣೆ ಹಾಕದೆ ಮುಫತ್ತಾಗಿ ಹುಲ್ಲನ್ನು ಒದಗಿಸಿಕೊಡಬೇಕು ಎಂದು ಸಲಹೆ ಮಾಡಿದ್ದಾರೆ. ಒಂದು ದೃಷ್ಟಿಯಿಂದ ಉಚಿತವಾಗಿ ಕೊಡುತ್ತೇವೆಂದರೆ ದುರುಪಯೋಗವಾಗಬಹುದು, ದನ ಇರುವವರು ಇಲ್ಲದೆ ಇರುವವರು ಎಲ್ಲರೂ ತೆಗೆದುಕೊಂಡು ಹೋಗತಕ್ಕ ಪರಿಸ್ಥಿತಿ ಬರಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಕಾರ್ಡ್ ಮಾಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಸಲಹೆಯನ್ನು ಯೋಚನೆ ಮಾಡಬಹುದು.

ಶ್ರೀ ಆರ್ಮುಗಂ ಅವರು ಇನ್ನೂ ಒಂದು ಸಲಹೆ ಮಾಡಿದ್ದಾರೆ. ಉಳತಕ್ಕ ಎತ್ತುಗಳನ್ನಾದರಲ್ಲಿ ಉಳಿಸಿಕೊಳ್ಳಬೇಕು, ಅಷ್ಟಕ್ಕಾದರೂ ನಾವು ಮೇವನ್ನು ಒದಗಿಸುವ ಪ್ರಯತ್ನ ಮಾಡಬೇಕು. ಇದರೂ ಇನ್ನೊಂದು ತೊಂದರೆ ಏನು ಎಂದರೆ ಕೂಲಿ ಮಾಡಿಕೊಂಡು ಬಂದಂಥ ಹಣದಲ್ಲಿ ತಾನು ಜೀವನ ಮಾಡಿ ದನಗಳಿಗೂ ಮೇವು ತೆಗೆದುಕೊಳ್ಳಬೇಕು, ಮುಖ್ಯ ಮಂತ್ರಿಗಳು ನಾಳೆ ಬರವವರಿದ್ದಾರೆ. ಅವರು ಬಂದ ಕೂಡಲೇ ಇದರ ಬಗ್ಗೆ ಆಲೋಚನೆ ಮಾಡುತ್ತೇನೆ. ನನ್ನ ಮನಸ್ಸು ಸಂಪೂರ್ಣವಾಗಿ ಉಚಿತವಾಗಿ ಮೇವು ಕೊಡಬೇಕು ಎಂದಿದೆ. ಕೂಲಿಯಿಂದ ತಾನು ಜೀವನ ಮಾಡುವುದಲ್ಲದೆ ಎತ್ತುಗಳಿಗೆ ಮೇವನ್ನು ತರುವುದು ಕಷ್ಟ. ಆ ಪರಿಸ್ಥಿತಿ ಇರುತ್ತದೆ. ಇದನ್ನು ಆಲೋಚನೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ. ಈ ದಿಸೆಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಪ್ರಯತ್ನವನ್ನು ಮಾಡಬೇಕೆಂದು ನಾವು ನಿರ್ಧಾರ ಮಾಡಿಕೊಂಡಿದ್ದೇವೆ. ಎಲ್ಲೆಲ್ಲಿ ಬತ್ತದ ಬೆಳೆ ಬರುತ್ತದೆ ಅಲ್ಲಿಂದ ಈ ಪ್ರದೇಶಗಳಿಗೆ ಏಳೆಂಟು ತಿಂಗಳ ಕಾಲ ಮೇವನ್ನು ಒದಗಿಸಬೇಕು ಎಂದು ಇದ್ದೇವೆ. ಶಾಸನ ಸಭೆ ಸೇರುವ ಮುಂಚಿತವಾಗಿ ಅಷ್ಟನ್ನು ಒದಗಿಸಿ, ಮತ್ತೆ ಶಾಸನ ಸಭೆ ಬಂದಾಗ ಸಾವಿರ ಲೋಡ್ ಒದಗಿಸುತ್ತೇವೆನ್ನುವ ವಿಷಯವಲ್ಲ. ಒಂದೇ ಸಮನಾಗಿ ಎಷ್ಟು ಹುಲ್ಲು ಒದಗಿಸುವುದಕ್ಕೆ ಸಾಧ್ಯವೋ ಅಷ್ಟನ್ನೂ ಒದಗಿಸಿ ದನಗಳನ್ನು ಉಳಿಸಿಕೊಳ್ಳುವ ಪ್ರಯತ್ನ ನಾವು ಮಾಡಬೇಕು.

ಶ್ರೀ ಆರ್ಮುಗಂ ಅವರು ಮತ್ತೊಂದು ವಿಚಾರವನ್ನು ಹೇಳಿದ್ದಾರೆ. ಕೆಲವರು ದನಗಳನ್ನು ಹೊರಗಡೆ ತೆಗೆದುಕೊಂಡು ಹೋಗುತ್ತಿರುವ ದೃಶ್ಯವನ್ನು ನೋಡಿರುವುದಾಗಿ ತಿಳಿಸಿದ್ದಾರೆ. ನನಗೂ ಅನೇಕ ಕಡೆಗಳಿಂದ ವರದಿಗಳು ಬಂದಿವೆ. ಅವರ ಸಂಬಂಧೀಕರು ಎಲ್ಲಿದ್ದಾರೆ ಅಂಥ ಕಡೆ ಕೆಲವರು ದನಗಳನ್ನು ತೆಗೆದುಕೊಂಡು ಹೋಗಿ ಅವುಗಳನ್ನು ಉಳಿಸಿಕೊಳ್ಳತಕ್ಕ ಪ್ರಯತ್ನ ಮಾಡಿದ್ದಾರೆ. ರೈತನಿಗೆ ದನ ಕಳೆದುಕೊಂಡರೆ ಮುಂದೆ ವ್ಯವಸಾಯ ಮಾಡುವುದು ಕಷ್ಟ. ಆ ದೃಷ್ಟಿಯಿಂದ ದನಗಳನ್ನು ಉಳಿಸುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡಬೇಕೆಂದು ತೀರ್ಮಾನ ಮಾಡಿ ಕೆಲಸ ಮಾಡುತ್ತಿದ್ದೇವೆ.

ಶ್ರೀ ಬಾಪೂ ಗೌಡರು ಮತ್ತು ಕೆಲವರು ಸದಸ್ಯರು ಮಾತನಾಡುತ್ತಾ, ಈಗ ಇರತಕ್ಕ ಪರಿಸ್ಥಿತಿಯಲ್ಲಿ ಅಲ್ಪಸಲ್ಪ ಜಮೀನು ಹೊಂದಿರುವವರು, ೫೦-೬೦ ಎಕರೆ ಜಮೀನು ಇರುವವರು ಕೂಡ ಕೂಲಿಗೆ ಹೋಗದೆ ಜೀವನ ಮಾಡುವುದು ಕಷ್ಟ. ಅವರನ್ನು ಹೇಗೆ ರಕ್ಷಣೆ ಮಾಡಬೇಕು ಎನ್ನುವುದರ ಬಗ್ಗೆ ಕೂಡ ಆಲೋಚನೆ ಮಾಡಬೇಕೆಂದು ಹೇಳಿದರು. ಅದೇ ಸಮಯದಲ್ಲಿ ನಾನು ಪ್ರಶ್ನೆ ಕೇಳಿದೆ, ಅಂಥವರಿಗೆ ಕೂಲಿ ಮಾಡು ವುದಕ್ಕೆ ಸಾಧ್ಯವಿಲ್ಲ ಒಂದು ಕಡೆ ನಾನೇ ಕಂಡ ದೃಶ್ಯವನ್ನು ಮೊನ್ನೆ ಸಭೆಯಲ್ಲಿ ಹೇಳಿದ್ದೇನೆ. ಬೈರಾಪುರದ ಕೆರೆ ಕೆಲಸ ನಡೆಯುತ್ತಿದೆ ಅಲ್ಲಿ ನಾನು ಹೋದಾಗ ೬೦೦ ಜನ ಕೆಲಸ ಮಾಡುತ್ತಿದ್ದರು. ಅವರಲ್ಲಿ ಅನೇಕ ಜನ ಕೂಲಿ ಕೆಲಸ ಮಾಡುವವರಲ್ಲ. ಅವರು ಸ್ವಂತ ವ್ಯವಸಾಯ ಮಾಡುತ್ತಿದ್ದವರು, ೪೦-೫೦ ಎಕರೆ ಜಮೀನು ಇಟ್ಟುಕೊಂಡವರು ಅಂಥವರು ಬಂದು ಕೂಲಿ ಮಾಡುತ್ತಿದ್ದರು. ಕೈಗೆ ಬೊಬ್ಬೆ ಬಂದು ಕಿತ್ತು ಹೋಗಿ ರಕ್ತ ಬರುತ್ತಿತ್ತು. ಅನೇಕ ಜನ ಹೆಣ್ಣು ಮಕ್ಕಳು ಅವರ ಕೈ ತೋರಿಸಿದರು. ನಾವು ಕಷ್ಟಪಟ್ಟು ನಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿರಲಿಲ್ಲ, ಹೇಗೋ ಜೀವನ ನಡೆಯುತ್ತಿತ್ತು, ಈಗ ಕೆಲಸ ಮಾಡಿ ದುಡಿಯಬೇಕಾಗಿದೆ ಎಂದು ಹೇಳಿದರು ಅಂಥ ಪರಿಸ್ಥಿತಿಗೆ ಬಂದಿದೆ. ಅವರನ್ನು ಹೇಗೆ ರಕ್ಷಣೆ ಮಾಡು ವುದು ಎಂದು ಯೋಚನೆ ಮಾಡುವುದು ನಮ್ಮ ಯೋಗ್ಯತೆಗೆ ನಿಲುಕದೆ ಇರತಕ್ಕ ವಿಷಯವಾಗಿದೆ.

ಶ್ರೀ ಬಾಪೂಗೌಡ ರಾಯಪ್ಪ.—ಇಂಥ ಕುಟುಂಬಗಳಿಗೆ ಈಗ ಧಾನ್ಯವನ್ನು ಸಾಲವಾಗಿ ಕೊಟು ಮುಂದೆ ಅವರಿಗೆ ಬೆಳೆ ಬಂದಾಗ ವಾಪಸ್ಸು ಪಡೆಯುವ ವ್ಯವಸ್ಥೆ ಮಾಡಬಹುದಲ್ಲವೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವರೀತಿ ಅವರಿಗೆ ಸಹಾಯ ಮಾಡಬೇಕು ಎನ್ನುವುದನ್ನು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಇನ್ನೂ ಯಾವರೀತಿ ಮಾಡಬಹುದು ಎನ್ನುವುದನ್ನೂ ಆಲೋಚನೆ ಮಾಡಿ ಸಾಲ ಕೊಡುವುದಕ್ಕೆ ಸಾಧ್ಯವೇ ಅಥವಾ ಇನ್ನೂ ಯಾವ ರೂಪದಲ್ಲಿ ಅವರಿಗೆ ಅನುಕೂಲ ಮಾಡ ಬಹುದು ಎನ್ನುವುದನ್ನು ಯೋಚನೆ ಮಾಡಿ ನಾನು ಒಂದೆರಡು ದಿವಸದಲ್ಲಿ ಮುಖ್ಯ ಮಂತ್ರಿಗಳ ಜೊತೆ ಯಲ್ಲಿ, ಅಧಿಕಾರಿಗಳ ಜೊತೆಯಲ್ಲಿ ಆಲೋಚನೆ ಮಾಡಿ ತೀರ್ಮಾನ ಕೈಕೊಳ್ಳಬೇಕಾಗಿದೆ.

ಇನ್ನು ಶಿಕ್ಷಣ ಶುಲ್ಕದ ವಿಷಯವನ್ನು ಮಾನ್ಯ ಸದಸ್ಯರು ಕೆಲವರು ಹೇಳಿದರು. ಈಗಾಗಲೇ ನಾವು ತೀರ್ಮಾನ ಮಾಡಿ ತಿಂಗಳಿಗೆ ೫೦೦ ರೂಪಾಯಿಗಿಂತ ಕಡಮೆ ಆದಾಯ ಬರುವವರಿಗೆ ವಿನಾಯಿತಿ ಕೊಡ ಲಾಗಿದೆ. ಅವರು ಆದಾಯದ ಸರ್ಟಿಫಿಕೇಟನ್ನು ಹೊಂದುವುದು ಕಷ್ಟವಾಗಿದೆ. ಏನಾದರೂ ಮಾಡಬೇಕೆಂದು ಸಲಹೆ ಮಾಡಿದರು. ಸರ್ಟಿಫಿಕೇಟುಗಳನ್ನು ಎಂ.ಎಲ್.ಎ., ಎಂ.ಎಲ್.ಸಿ., ತಾಲ್ಲೂಕು ಬೋರ್ಡ್ ಪ್ರೆಸಿಡೆಂಟ್, ಕಡೆಗೆ ಗ್ರಾಮ ಪಂಚಾಯಿತಿ ಚೇರ್‌ಮನ್ ಅವರಿಂದ ತೆಗೆದುಕೊಳ್ಳುವ ಹಾಗೆ ಮಾಡಿದರೆ ಸುಲಭವಾಗುತ್ತದೆ ಎಂದು ಆ ರೀತಿ ಗವರ್ನ್‌ಮೆಂಟ್ ಆರ್ಡರ್ ಮಾಡಿ ಕಳುಹಿಸಿಕೊಡಲಾಗಿದೆ. ಇದರಿಂದ ಸುಲಭವಾಗಿ ಸರ್ಟಿಫಿಕೇಟುಗಳು ಸಿಕ್ಕುತ್ತವೆ ಎಂದು ಆ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಈ ಪ್ರದೇಶಗಳ ಕುಟುಂಬಕ್ಕೆ ಸೇರಿದವರು ಹೊರಗಡೆ ಓದುತ್ತಿದ್ದರೆ ಅಂಥ ವಿದ್ಯಾರ್ಥಿಗಳಿಗೆ ಕೂಡ ಇದು ಅನ್ವಯಿಸಬೇಕು ಎಂದು ಆ ಬಗ್ಗೆ ಕೂಡ ತೀರ್ಮಾನ ಕೈಕೊಂಡಿದ್ದೇವೆ. ಕಡೆಗೆ ಸರ್ಕಾರಿ ನೌಕರರು ಅಥವಾ ಆದಾಯ ತೆರಿಗೆ ಕೊಡುವವರು ಇವರನ್ನು ಬಿಟ್ಟು ಉಳಿದ ಎಲ್ಲರಿಗೂ ಸಾಕಷ್ಟು ಪರಿಹಾರ ದೊರೆಯುತ್ತ ದೆಂದು ಭಾವಿಸುತ್ತೇನೆ.

ಆಶ್ವಾಸನೆ ಕೊಟ್ಟರೆ ಅಲ್ಲಿ ಕೊಡುವ ಹಾಗೆಯೇ ಇಲ್ಲಿಯೂ ಕೊಡುವುದು ಎಂದು ಹಗುರವಾಗಿ ತಿಳಿಯಬಾರದೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕಾಗಿ ಸರ್ವ ಪ್ರಯತ್ನವನ್ನೂ ಮಾಡಬೇಕಾಗಿದೆ. ಎದರು ಪಕ್ಷದವರಾಗಲೀ, ಈ ಕಡೆ ಇರುವವರಾಗಲೀ, ಈ ಕೆಲಸ ನಮ್ಮದು ನಾವೇ ಉಪವಾಸ ಇದ್ದ ಹಾಗೆ ಎಂದು ತಿಳಿದು ಮಾಡಬೇಕಾದ ಕೆಲಸ. ಅಂಥ ಬಿಕ್ಕಟ್ಟಿನ ಪರಿಸ್ಥಿತಿ ಬಂದಿದೆ ಎನ್ನುವ ಅರಿವು ಸರ್ಕಾರಕ್ಕೆ ಇದೆ. ರಾಜಕೀಯ ದೃಷ್ಟಿಯಿಂದ ನಾವು ಕೆಲಸ ಮಾಡುತ್ತಿಲ್ಲ ಯಾರು ಏನೇ ಹೇಳಲಿ, ಕಂಟ್ರಾಕ್ಟರಿಗೆ ಕೊಡತಕ್ಕ ವಿಷಯದಲ್ಲಿ ಅವರ ಪಕ್ಷದವರಿಗೆ ಕೊಟ್ಟಿದ್ದಾರೆ, ಅವರು ಹೇಳುವ ಕೆಲಸಗಳನ್ನೇ ಮಾಡಿದ್ದಾರೆ ಎಂದು ಹೇಳಿದರೂ ಕೂಡ, ಉದಾಹರಣೆಗೆ ಹೇಳಬೇಕು ಎಂದರೆ ಇಲ್ಲಿ ಸದಸ್ಯರಾಗಿ ಇರು ತ್ತಾರೆ, ಬಹಳ ತೊಂದರೆ ಬಂದಿದೆ, ಕೆಲಸ ಮಾಡುವವರು ಮುಂದೆ ಬರುವುದಿಲ್ಲ ಎನ್ನುವ ಪರಿಸ್ಥಿತಿ ಇರು ವಾಗ ಯಾರಾದರೂ ಮುಂದೆ ಬಂದಾಗ ಕೆಲಸವನ್ನು ಅವರಿಗೆ ಕೊಟ್ಟು ಕೆಲವು ಕೆಲಸಗಳನ್ನು ಮಾಡಿರುವುದು ಅಷ್ಟು ದೊಡ್ಡ ಅಪರಾಧವೇನೂ ಆಗಲಾರದು ಎಂದು ನನ್ನ ಭಾವನೆ ತಾಲ್ಲೂಕು ಬೋರ್ಡ್ ಸದಸ್ಯರು ರಿಲೀಫ್ ಕಮಿಟಿಗಳಲ್ಲಿದ್ದಾರೆ ಶ್ರೀ ಬಾಪೂಗೌಡರು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರಾಗಿದ್ದಾರೆ. ಇನ್ನೂ ಕೆಲವರು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರಾಗಿದ್ದಾರೆ. ಅವರ ಸಲಹೆಗಳನ್ನೂ ತೆಗೆದುಕೊಂಡಿ ದ್ದೇವೆ.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಗುಲ್ಬರ್ಗಾ ಜಿಲ್ಲೆ ವಿಷಯದಲ್ಲಿ ಒಂದು ಮಾತು ಹೇಳಬೇಕೆಂದರೆ ಈಗಿರತಕ್ಕ ಡೆಪ್ಯುಟಿ ಕಮಿಷನರು ಆ ತಾಲ್ಲೂಕಿನ ಸದಸ್ಯರನು ಕರೆದು ಆಯಾ ತಾಲ್ಲೂಕಿನಲ್ಲಿ ಯಾವ ಯಾವ ಕೆಲಸವನ್ನು ತೆಗೆದುಕೊಳ್ಳಬೇಕು, ಎಷ್ಟು ಜನಗಳಿಗೆ ಕೆಲಸ ಒದಗಿಸಬೇಕು, ಎಷ್ಟು ಬಾವಿಗಳನ್ನು ಎಲ್ಲೆಲ್ಲಿ ಮಾಡುವುದಕ್ಕೆ ಸಾಧ್ಯ, ಯಾವ ಕೆಲಸಗಳನ್ನು ಮಾಡಿದರೆ ಜನಗಳಿಗೆ ಸ್ವಲ್ಪ ಮಟ್ಟಿಗೆ ಸಮಾಧಾನವಾಗಬಹುದು ಎನ್ನುವುದನ್ನು ಆಲೋಚನೆ ಮಾಡಿ ಒಂದು ಬ್ಲೂಪ್ರಿಂಟ್ ತಯಾರು ಮಾಡಿದ್ದಾರೆ ಆದರಂತೆ ಕೆಲಸ ಮಾಡಿಕೊಂಡು ಹೋದರೆ ಸಮರ್ಪಕವಾಗಿ ಕೆಲಸವಾಗುತ್ತದೆ ಎಂದು ಮಾನ್ಯ ಸದಸ್ಯರೇ ಅಭಿಪ್ರಾಯಪಟ್ಟಿದ್ದಾರೆ. ಅದರಂತೆ ಕೆಲಸ ಮಾಡಿಕೊಂಡು ಹೋಗುವುದಕ್ಕೆ ಜಿಲ್ಲಾಧಿಕಾರಿಗಳಿಗೆ ನಾನು ಸ್ಪಷ್ಟವಾಗಿ ಹೇಳಿ ಬಂದಿದ್ದೇನೆ. ಅವರು ಅದರಂತೆ ಕೆಲಸ ಮಾಡಿಕೊಂಡು ಹೋಗುತ್ತಾರೆ ಎಂದು ನನಗೆ ಭರವಸೆ ಇದೆ.

ಒಟ್ಟಿನಲ್ಲಿ ಈ ಸಲಹೆಯನ್ನು ಕೊಟ್ಟಿರುವುದರ ಜೊತೆಗೆ ಶ್ರೀ ಆತ್ಮಗು ರವರು ಒಂದುವರದಿಯನ್ನು ಒಪ್ಪಿಸಿ ಇರತಕ್ಕಂಥ ದೋಷಗಳನ್ನು ಈ ಸಭೆಯಗಮನಕ್ಕೆ ಹಾಗೂ ಸರಕಾರದ ಗಮನಕ್ಕೆ ತಂದಿದ್ದಾರೆ. ಇನ್ನು ಉತ್ಪ್ರೇಕ್ಷೆ ಇಲ್ಲದಿದ್ದರೂ ಕೂಡ ಕೆಲವು ಭಾಗದಲ್ಲಿ ಇನ್ನೂಹೆಚ್ಚು ವಿಷಯಗಳನ್ನು ಸಂಗ್ರಹಣೆ ಮಾಡಿ ಹೇಳಿದ್ದರೆ ಅನುಕೂಲವಾಗುತ್ತಿತ್ತು ಇದರ ಜೊತೆಗೆ ಇನ್ನೂ ಹೆಚ್ಚು ವಿಷಯಗಳನ್ನು ಸಂಗ್ರಹಿಸಿ ಎಲ್ಲಿ ದೋಷ ಇದೆ ಅಲ್ಲಿ ಸರಿಪಡಿಸಬೇಕಾದಂಥ ಜವಾಬ್ದಾರಿ ಸರಕಾರದ ಮೇಲೆಬಿದ್ದಿದೆ. ಇದು ಒಂದೆರಡುದಿನದಲ್ಲಿ ಮುಗಿಯುವ ಕೆಲಸವಲ್ಲ.

Sri D. B. KALMANKAR : The PLD Banks are not giving loans for desilting of irrigation wells. The irrigation wells are dried up. if the Tashildars are empowered to advance loans upto Rs. 1000 or Rs 2,000/- under land Improvement Leans, for desilting irrigation wells it will go along way to help the agriculturists. For desilting of wells some prevision has to be made. I request the Government to accept this suggestion of mine.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೇ ಇದೇ ವಿಷಯವನ್ನೇ ಮಾನ್ಯ ಎಸ್. ವೈ. ಪಾಟೀಲರು ಒತ್ತಾಯಮಾಡಿ ಕೇಳುತ್ತಾ ಇದ್ದಾರೆ. ಬಾವಿಯನ್ನು ಆಳ ಮಾಡುವುದಕ್ಕೆ ಪಿ.ಎಲ್ ಡಿ ಮುಖಾಂತರ ವ್ಯವಹಾರ ಮಾಡುವುದು ಸ್ವಲ್ಪ ಕಷ್ಟ ಎಂದು ಗೊತ್ತಾಗಿದೆ ಕಾರಣ ಏನೆಂದರೆ ಈಗಾಗಲೇ ಬಾವಿಗೆ ಸಾಲ ತೆಗೆದುಕೊಂಡಿರುವವರು ಅವರಿಗೆ ಎಷ್ಟು ಸೆಕ್ಯೂರಿಟೀಕೊಡಬೇಕೋ ಅಷ್ಟನ್ನು ಕೊಟ್ಟು ಸಾಲ ತೆಗೆದುಕೊಂಡಿದ್ದಾರೆ. ಮತ್ತೆ ಸೆಕ್ಯೂರಿಟಿಕೊಡುವ ಪ್ರಮೇಯ ಇರುವುದರಿಂದ ಒಂದಕ್ಕಿಂತ ಹೆಚ್ಚು ಕೊಡಲಿಕ್ಕೆ ಸಾಧ್ಯವಿಲ್ಲ. ಅದಕ್ಕೆ ಪ್ರತ್ಯೇಕವಾಗಿಯೇ ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನ್ ಅಂತ ಕೊಡಬೇಕಾಗಿದೆ. ಇದನ್ನು ಯಾವರೀತಿಯಾಗಿ ಕೊಡಬೇಕು ಎನ್ನುವುದು ಸರ್ಕಾರ ಯೋಚನೆ ಮಾಡಬೇಕು. ಇಷ್ಟುಮಾತನ್ನು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಇರತಕ್ಕಂಥ ಬಾವಿಗಳಲ್ಲಿ ಕೆಲವುಕಡೆ ೫ ಅಡಿ ೧೦ ಅಡಿ ತೆಗೆದರೆ ನೀರು ಬರುವ ಸೂಚನೆ ಇದೆ. ಆದುದರಿಂದ ಈ ವಿಷಯದಲ್ಲಿ ಮುಖ್ಯಮಂತ್ರಿಗಳು ಬಂದಮೇಲೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ ನವರನ್ನು ಕರಸಿ ಅವರೊಂದಿಗೆ ಸಮಾಲೋಚನೆಮಾಡಿ ಈ ಬಗ್ಗೆ ಲ್ಯಾಂಡ ಇಂಪ್ರೂವ್‌ಮೆಂಟ್ ಲೋನ್ ಆಗಲಿ ಅಥವ ಇನ್ನಾವ ಮಾರ್ಗದಲ್ಲಿ ಅವರಿಗೆ ಲೋನ್ ನೀಡುವ ವ್ಯವಸ್ಥೆ ಮಾಡಬಹುದು ಎನ್ನುವುದು ಪರಿಶೀಲಿಸುತ್ತೇನೆ. ಈ ಕೆಲಸ ಈವತ್ತೇ ಮುಕ್ತಾಯವಾಗುವುದಿಲ್ಲ. ಇನು ೭ ತಿಂಗಳಕಾಲ ಅಲ್ಲಿಯ ಪರಿಸ್ಥಿತಿಯಬಗ್ಗೆ ತೀವ್ರ ಗಮನ ಕೊಟ್ಟು ಹೆಚ್ಚುಪ್ರಮಾಣದಲ್ಲಿ ಕೆಲಸಮಾಡಬೇಕಾಗಿದೆ. ಆದುದರಿಂದ ಈ ಮಾನ ಸಭೆ ಮತ್ತೆ ಸೇರುವುದು ಇದೆ. ಇದು ಮತ್ತೆ ಮತ್ತೆ ಚರ್ಚೆ ಆಗಬೇಕಾದ ಅವಶ್ಯಕತೆ ಇದೆ, ಇದರ ಜೊತೆಗೆ ಇನ್ನೂ ಒಂದು ವಿಷಯ ಹೇಳುತ್ತೇನೆ ಎಲ್ಲೆಲ್ಲಿ ಏನೇನು ತೊಂದರೆ ಇದೆ, ಯಾವ ಯಾವ ಭಾಗದಲ್ಲಿ ಎಷ್ಟೆಷ್ಟು ಕೆಲಸಗಳನ್ನು ಮಾಡಬೇಕು ಎನ್ನುವ ಬಗ್ಗೆ ಸಮಾಲೋಚನೆ ಮಾಡುತ್ತೇನೆ. ನಮ್ಮ ಅಧಿಕಾರಿಗಳು ಈ ಮಟ್ಟದಲ್ಲಿ ಕೆಲಸಮಾಡುವಂಥ ಅನುಭವ ಇದುವರೆಗೆ ಅವರಿಗೆ ಇರಲಿಲ್ಲ. ಈ ಕಷ್ಟಕಾಲದಲ್ಲಿ ಅವರು ಸಾಕಷ್ಟು ಮಾಡಿದ್ದಾರೆ. ಶ್ರೀಮಾನ್ ಆತ್ಮಗುರವರು ಹೇಳಿದರು ಅಧಿಕಾರಿಗಳು ಇಂತಹ ಸಮಯದಲ್ಲಿ ೧೬-೧೮ ಗಂಟೆಗಳ ಕಾಲ ಕೆಲಸಮಾಡಬೇಕಾಗಿತ್ತು ಎಂದು. ಆದಕೆ ಈ ಬಗ್ಗೆ ಹೇಳುವುದಾದರೆ ಅವರು ಅಷ್ಟುಗಂಟೆಗಳಕಾಲ ಕೆಲಸ ಮಾಡಿದರೂ ಕೂಡ ಅವರಿಗೆ ಒಂದು ನಿಯಮಿತವಾದ ಕಾಲ ೮ ಗಂಟೆ ಅಂತ ಏನು ಇದೆಯೋ ಅದಕ್ಕಿಂತ ಹೆಚ್ಚುಕಾಲ ಕೆಲಸಮಾಡಿದ್ದಾರೆ ಎಂದು ಹೇಳುತ್ತೇನೆ ಈಗ ಗುಲ್ಬರ್ಗಾ ಡಿಸ್ಟ್ರಿಕ್ಟಿಗೆ ಒಬ್ಬರು ಅಡಿಷನಲ್ ಡೆಪ್ಯೂಟಿ ಕಮೀಷನರ್ ಹಾಕಿದರೆ ಒಳ್ಳೆಯದು

ಎಂದು ಹೇಳಿದರು. ಅದನ್ನು ಸ್ಯಾಂಕ್ಷನ್ ಮಾಡದೆ ಅವರನ್ನು ಅಲ್ಲಿಗೆ ಹಾಕುತ್ತಿದ್ದೇವೆ. ಈ ರೀತಿ ಅಲ್ಲಿಗೆ ಒಬ್ಬರು ಅಡಿಷನಲ್ ಡೆಪ್ಯೂಟಿ ಕಮೀಷನರನ್ನು ಹಾಕುವಾಗ ಅವರು ಅಲ್ಲಿ ಎಲ್ಲಾ ಕೆಲಸವನ್ನೂ ಸಮರ್ಪಕ ಸಕಾಲದಲ್ಲಿ ನಡೆಸಿಕೊಂಡು ಹೋಗುವಂತೆ ಸರ್ವ ಪ್ರಯತ್ನವನ್ನೂ ಮಾಡುತ್ತಾರೆ. ಅಧಿಕಾರಿಗಳಿಗೆ ಅಲ್ಲಿ ಯಾವ ತೊಂದರೆ ಇದೆ ಎಂದು ಅವರ ಗಮನಕ್ಕೆ ತೆಗೆದುಕೊಂಡು ಬಂದು ಅವರ ಜೊತೆಗೆ ನಾವು ನೀವು ಎಲ್ಲರೂ ಸೇರಿ ಪೂರ್ಣ ಸಹಕಾರವನ್ನು ಕೊಟ್ಟು ಕೆಲಸ ಮಾಡಬೇಕು. ಮತ್ತು ಅದರ ಜೊತೆಗೆ ನಾವು ಯಾವುದೇ ರಾಜಕೀಯ ಪಕ್ಷದಲ್ಲೇ ಇರಲಿ ಅದೆಲ್ಲವನ್ನೂ ಮರೆತು ನಾವು ಒಟ್ಟಾರೆ ಕೆಲಸ ಮಾಡುವುದಕ್ಕೆ ಅವರಿಗೆ ಪೂರ್ಣ ಸಹಕಾರ ಕೊಡಬೇಕೆಂದು ಈ ಮಾನ್ಯ ಸಭೆಗೆ ವಿನಂತಿ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ :– ಶ್ರೀ ಮಾನ್ ಚನ್ನಬಸಪ್ಪನವರೇ ನೀವು ನಗಬೇಡಿ, ನಕ್ಕರೆ ಕೆಟ್ಟ ಪರಿಣಾಮ ಆದೀತು. ಈಗ ಪಿ ಎಲ್ ಡಿ ಬ್ಯಾಂಕಿನವರು ಮತ್ತೆ ಅವರಿಗೆ ಸಾಲ ಕೊಡುವುದಿಲ್ಲ ಅವರ ನಿಯಮ ನಿಭಂಧನೆಗಳು ಬಹಳ ಇವೆ. ಅವರಿಂದ ಸಾಲ ಇಷ್ಟು ಸುಲಭವಾಗಿ ದೊರೆಯುವುದಿಲ್ಲ. ಆದುದರಿಂದ ಈ ಬಗ್ಗೆ ನಾನು ಹೇಳುತ್ತೇನೆ ಈಗ ಹಾಲಿ ೧೫-೨೦ ಸಾವಿರ ಬಾವಿಗಳು ಏನು ಇವೆಯೋ ಆ ಭಾವಿಗಳಲ್ಲಿ ಹೂಳು ಮಾಡುವುದಾಗಲಿ ಅಥವ ಆಳವಾಗಿ ತೆಗೆಸಿದರೆ ಒಂದೊಂದು ಬಾವಿಯಿಂದ ೧೦-೨೦ ಕುಟುಂಬಗಳಿಗೆ ಆಹಾರ ಸಿಕ್ಕ ದಂತಾಗುತ್ತದೆ. ನೀವು ಹೊಸಬಾವಿ ತೆಗೆಯುವುದಕ್ಕಿಂತಲೂ ಮೊದಲು ಈ ಕೆಲಸವನ್ನು ಮಾಡಿರಿ. ಈ ಬಗ್ಗೆ ಒಂದು ವರ್ಷದಿಂದಲೂ ಚರ್ಚೆ ಮಾಡುತ್ತಿದ್ದೇವೆ. ಇನ್ನು ಚರ್ಚೆ ಮಾಡುವುದು ಸಾಕು ಈ ಬಗ್ಗೆ ದುಬಾಷಿಯವರೊಂದಿಗೂ ಮತ್ತು ಚೀಫ್ ಸೆಕ್ರೆಟರಿಯವರೊಂದಿಗೂ ಚರ್ಚೆ ಮಾಡಿದ್ದೇವೆ ಆದರೂ ಈ ಪ್ರಶ್ನೆ ಬಗೆಹರಿದಿಲ್ಲ. ದಯವಿಟ್ಟು ಇಷ್ಟು ಕೆಲಸ ಮಾಡಿರಿ ನೀವು ಅಪ್ಪರ ಕೃಷ್ಣಾ ಪ್ರಾಜೆಕ್ಟ್ ಕೆಲಸಕ್ಕೆ ಏನು ೩೩ ಲಕ್ಷ ರೂಪಾಯಿ ಕೊಟ್ಟಿದ್ದೀರೋ ಅದರಲ್ಲಿ ೨೦ ಲಕ್ಷ ಹಣವನ್ನಾದರೂ ತೆಗೆದು ಈ ಕೆಲಸವನ್ನು ಮಾಡಿರಿ. ಈ ಬಗ್ಗೆ ಒಂದು ಜಿಯಾಲಜಿಕಲ್ ಸರ್ವೆ ಮಾಡಿ ನಿಮ್ಮ ಆಫೀಸರನ್ನು ಒಬ್ಬೊಬ್ಬರನ್ನು ಅಲ್ಲಿಗೆ ಹಾಕಿ ಈ ಕೆಲಸವನ್ನು ಅತಿ ಜರೂರಾಗಿ ಮಾಡಿರಿ. ಅಲ್ಲಿ ಅವರು ಎತ್ತುಗಳನ್ನು ಬಿಟ್ಟು ಹೋಗುವುದಕ್ಕೆ ಸಾಧ್ಯವಿಲ್ಲ ಎಷ್ಟೋ ದನಗಳು ಮೇವು ಇಲ್ಲದೆ ಸತ್ತುಹೋಗಿವೆ ಮುಂದೆಯೂ ಇದೇ ರೀತಿ ಇರಲಿಕ್ಕೆ ಸಾಧ್ಯವಿಲ್ಲ. ಆದುದರಿಂದ ಈ ಕೆಲಸವನ್ನು ಅತಿ ಜರೂರಾಗಿ ತೆಗೆದುಕೊಳ್ಳುವುದಕ್ಕೆ ಒಬ್ಬ ಇಂಜಿನಿಯರನ್ನು ಅಲ್ಲಿಗೆ ಕಳುಹಿಸಿ ಇರತಕ್ಕಂಥ ಬಾವಿಗಳು ಆಳಮಾಡುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಿ ನೀವು ನಕ್ಕರೆ ಕೆಟ್ಟ ಪರಿಣಾಮ ಆದೀತು.

ಅಧ್ಯಕ್ಷರು :– ನಿಮ್ಮ ಕಷ್ಟದ ಅರಿವು ಗೊತ್ತಾಗಿದೆ. ಅವರಿಗೆ ಕಷ್ಟ ಇದೆ. ನಾವು ಮಾಡುತ್ತೇವೆ ಎಂದರೆ ನೀವು ನಂಬಬೇಕು. ನಾನು ಮಂತ್ರಿಗಳು ಹೇಳುವುದನ್ನು ನಂಬುವುದಿಲ್ಲ ಎಂದರೆ ಅದಕ್ಕೆ ಬೇರೆ ಉಪಾಯವಿಲ್ಲ

ಶ್ರೀ ಹೆಚ್. ಎಂ. ಚನ್ನಬಸಪ್ಪ :–ಮಾನ್ಯ ರೆವೆನ್ಯೂ ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ ಪಿ.ಎಲ್. ಡಿ. ಬ್ಯಾಂಕಿನಿಂದ ಹಣ ಕೊಡಿಸುವುದಕ್ಕೆ ಅನೇಕ ನಿಭಂಧನೆಗಳು ಇರುವುದರಿಂದ ಅದರಲ್ಲಿ ಕಷ್ಟ ಇದೆ ಎಂದು ಆದುದರಿಂದ ನಾನು ಹೇಳುವುದು ಇಷ್ಟೆ ಏನೆಂದರೆ ಮುಖ್ಯ ಮಂತ್ರಿಗಳು ಬಂದಕೂಡಲೇ ಈ ಬಗ್ಗೆ ವಿಚಾರಣೆ ಮಾಡಿ ಹೂಳು ತೆಗೆಯುವ ಕೆಲಸವಾಗಲಿ ಅಥವ ತೋಡಿಸುವ ಕೆಲಸವನ್ನು ಆಗಲಿ ತೆಗೆದುಕೊಳ್ಳುವುದಕ್ಕೆ ಯಾವರೀತಿಯಾಗಿ ಅವರಿಗೆ ಹಣ ಸಹಾಯ ಮಾಡುವಂಥ ಯೋಚನೆ ಮಾಡಿ ಈ ಬಗ್ಗೆ ಯಾವುದಾದರೂ ಒಂದು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ.

ಶ್ರೀ ಎಸ್. ವೈ. ಪಾಟೀಲ್ :– ನೀವು ಹೇಳಿದ ವಿಷಯ ನನಗೆ ಅರ್ಥವಾಯಿತು ಇಂಥ ಪರಿಸ್ಥಿತಿ ನಮ್ಮ ಕಡೆ ಬರುವುದು ನಮ್ಮ ದುರಾದೃಷ್ಟವೋ ಅಥವಾ ಸುದೈವವೋ ಅದು ಏನೇ ಇರಲಿ ನಾನು ಕೇಳುವುದು ಏನೆಂದರೆ ಮುಖ್ಯಮಂತ್ರಿಗಳು ರೆವೆನ್ಯೂ ಮಂತ್ರಿಗಳು ಪಿ.ಡಬ್ಲ್ಯು.ಡಿ. ಮಂತ್ರಿಗಳು ನಮ್ಮ ಪ್ರದೇಶಕ್ಕೆ ಬಂದು ಆ ಜನಗಳ ಕಷ್ಟವನ್ನು ಕಣ್ಣಾರೆ ನೋಡಿಕೊಂಡು ಹೋಗಿ ಬಿಟ್ಟರೆ ಸಾಕು ಇದರ ಬಗ್ಗೆ ನನಗೆ ಅಷ್ಯೂರೆನ್ಸ್ ಕೊಡಿ.

Sri H.M. CHANNABASAPPA : The Hon. Minister has given an assurance to this House. What more do you want ?

ಶ್ರೀ ಕಾಗೋಡು ತಿಮ್ಮಪ್ಪ : ಹೆಚ್ಚು ಕಡಿಮೆ ಪರಿಸ್ಥಿತಿ ಮುಂದಿನ ಅಕ್ಟೋಬರ್ ತಿಂಗಳವರೆಗೆ ಮುಂದುವರೆಯುತ್ತದೆ ಎರಡನೆ ಅಧ್ಯಯನ ಸಮಿತಿಯನ್ನು ಕೇಂದ್ರ ಸರಕಾರದವರು ಕಳುಹಿಸಿಕೊಡುವವರಿದ್ದಾರೆ. ಆ ಸಂದರ್ಭದಲ್ಲಿ ರಾಜ್ಯಕ್ಕೆ ಎಷ್ಟು ಹಣ ಬೇಕು ಕೇಳುವುದಕ್ಕೆ ಸರ್ಕಾರ ಸಿದ್ದತೆ ಮಾಡಿಕೊಂಡಿದ್ದಾರೆಯೇ?

ಶ್ರೀ ಎನ್ ಹುಚ್ಚಮಾಸ್ತಿಗೌಡ : ಅಂಕಿ ಅಂಶಗಳನ್ನು ಸಂಗ್ರಹಿಸುತಿದ್ದೇವೆ ಅದರ ಜೊತೆಗೆ ಅವರು ಬಂದಾಗ ನಮ್ಮ ಅಧಿಕಾರಿಗಳು ಜೊತೆಯಲ್ಲಿ ಸಂಚಾರಮಾಡಿ ಅಲ್ಲೇ ಇರತಕ್ಕ ಪರಿಸ್ಥಿತಿ ಅವರ ಗಮನಕ್ಕೆ ತೆಗೆದುಕೊಂಡು ಬರಬೇಕಾಗಿದೆ . ವೀವರ್ಸ್ ವಿಷಯ ಇಲ್ಲಿಯವರೆಗೆ ಅವರ ಗಮನಕ್ಕೆ ಬಂದಿರಲಿಲ್ಲ. ಇತ್ತೀಚಿಗೆ ಈ ರೀತಿ ಅವರಿಗೆ ನೂಲನ್ನು ಒದಗಿಸಿ ಕೊಡಬೇಕು ಎಂದು ಗೊತ್ತಾದಮೇಲೆ ಆ ವಿಷಯ ಅವರ ಗಮನಕ್ಕೆ ತರಬೇಕಾಗಿದೆ. ಕೆಲವಾರು ವಿಷಯಗಳಲ್ಲಿ ಹೆಚ್ಚು ಪ್ರಮಾಣದ ಕೆಲಸ ಮಾಡಬೇಕಾಗಿದೆ. ಅದನ್ನು ಅವರ ಗಮನಕ್ಕೆತೆಗೆದುಕೊಂಡು ಬರುತ್ತೇವೆ. ಖುದ್ದುನೋಡುವಾಗ ನಮ್ಮ ಅಧಿಕಾರಿಗಳು ಅವರ ಜೊತೆಯಲ್ಲಿ ಇದ್ದು ವಿವರಿಸುತ್ತಾರೆ.

ಶ್ರೀ ಎಂ. ಎಸ್ ಕೃಷ್ಣನ್ : ಶ್ರೀ ಮಾನ್ ಆರ್ಮುಗಂ ರವರು ೫೦ ಕೋಟಿ ಇವಕ್ಕಾಗಿ ಮೀಸಲಾಗಿಡಬೇಕು ಎಂದು ಹೇಳಿದ್ದಾರೆ ಅದರ ಬಗ್ಗೆ ನಾನು ಹೇಳುವುದು ಇದೆ ?

ಶ್ರೀ ಎ.ಎ. ದೇಸಾಯಿ : ನಮ್ಮ ಮೈಸೂರು ರಾಜ್ಯದಲ್ಲಿ ಅಲ್ಲಲ್ಲಿ ಸ್ಮಾಲ್‌ಪಾಕ್ಸ್ ಮತ್ತು ಕಾಲರ ಬೇನೆ ಹಬ್ಬುವಂತಹ ಸ್ಥಿತಿ ಬರುತ್ತಿದೆ. ಅದರ ಬಗ್ಗೆ ಸಂಪೂರ್ಣವಾಗಿ ವರದಿ ಕೊಡಬೇಕು.

ಶ್ರೀ ಎನ್ ಹುಚ್ಚಮಾಸ್ತಿಗೌಡ : ಎಲ್ಲೆಲ್ಲಿ ಕಾಲರ ಬಂದಿದೆ ಎಂದು ಗೊತ್ತಾಗಿದೆ ಆ ಪ್ರದೇಶಕ್ಕೆ ಇನಾಕ್ಯೂಲೇಷನ್‌ಮಾಡಿ ಸಾಕಷ್ಟು ಮುಂಜಾಗ್ರತೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಜೆ.ಎಲ್. ಕಬಾಡಿ : ಉದ್ಯೋಗಕೊಡುವ ಸಲುವಾಗಿ ಯಾವರೀತಿ ನಿರುದ್ಯೋಗ ಸಾಲ್ವೆ ಮಾಡಬೇಕು ಎಂದು ಹೇಳಲಿಲ್ಲ. ಶ್ರೀಮಾನ್ ಆರ್ಮುಗಂ ರಿಪೋರ್ಟಿನಲ್ಲಿ ಏನು ಇದೆ ಹರಿಜನ ಕಾಬ್ಲರ್ಸ್ ಮತ್ತು ಟ್ಯಾನರ್ಸ್ ಅವರು ನೀಡಿದಂತಹ ಬೇಡಿಕೆ ಬಗ್ಗೆ ಮಾನ್ಯ ಮಂತ್ರಿಗಳು ಏನೂ ಹೇಳಲಿಲ್ಲ. ಇಂಡಸ್ಟ್ರಿಯಲ್ ಬ್ಯಾಂಕುಗಳ ಮೂಲಕವಾಗಲಿ ಡಿಪಾರ್ಟ್ಮೆಂಟ್ ಮೂಲಕವಾಗಲಿ ಲೋನ್ ಕೊಡುವುದು ವಗೈರೆ ಏನು ವ್ಯವಸ್ಥೆಮಾಡಿದ್ದೀರಿ ಎಂದು ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ : ನನ್ನ ಹತ್ತಿರ ಅದರ ಬಗ್ಗೆ ಏನು ಕಾರ್ಯಕ್ರಮ ಇಲ್ಲ. ವೀವರ್‌ಗಳಿಗೆ ಇದೆ ಬಹಳ ಹೆಚ್ಚು ಸಂಖ್ಯೆಯಲ್ಲಿ ವೀವರ್ಸ್ ಇರುವುದನ್ನು ವಿಚಾರಮಾಡಿ ಅವರಿಗೆ ಒಂದು ಸ್ಕೀಮ್ ತಯಾರು ಮಾಡಿದ್ದೇವೆ. ಉಳಿದ ಕಾಬ್ಲರ್ಸ್ ಮತ್ತು ವಗೈರೆ ಅವರಿಗೆ ಅನ್ವಯಿಸಿ ಸಹಾಯ ಕೊಡುವ ಸಾಧ್ಯತೆ ಇದೆಯೋ ಎಂದು ಪರ್ಯಾಲೋಚನೆ ಮಾಡುತ್ತೇವೆ.

ಶ್ರೀ ಬಾಪುಗೌಡಪ್ಪ : ಕಂದಾಯ ಮಂತ್ರಿಗಳು ಹೇಳಿದ ಪ್ರಕಾರ ಶ್ರೀ ಆರ್ಮುಗಂ ರವರು ಹೆಚ್ಚಿನ ಪ್ರಮಾಣದಲ್ಲಿ ಪ್ರವಾಸ ಕೈಗೊಳ್ಳಬೇಕಾಗಿತ್ತು ಅವಕಾಶ ಇಲ್ಲದ ನಿಮಿತ್ತ ಸಂಕ್ಷಿಪ್ತ ವರದಿ ಕೊಟ್ಟಿದ್ದಾರೆ ಎಂದು ಹೇಳಿದರು ನಾನು ಈ ಸಂಧರ್ಬದಲ್ಲಿ ಹೇಳುತ್ತೇನೆ ಮುಂದೆ ಆಗತಕ್ಕ ಕೆಲಸ ಯಾವ ಯಾವ ಜಿಲ್ಲೆಗಳಲ್ಲಿ ಯಾವರೀತಿ ಸಂಪರ್ಕ ಇದೆ ಎಂದು ನೋಡಲು ಈ ಆಯೋಗ ಮುಂದಿನ ಜೂನ್‌ನವರೆಗೆ ಜೀವಂತವಾಗಿಟ್ಟು ಅವರು ಮತ್ತೆ ಪ್ರವಾಸ ಕೈಗೊಂಡು ಕೂಲಂಕುಶವಾದ ವರದಿಯನ್ನು ಈ ಮನೆಗೆ ಒಪ್ಪಿಸಿದರೆ ಅನುಕೂಲವಾದೀತು ಎನ್ನುವ ದೃಷ್ಟಿಯಿಂದ ಈ ಆಯೋಗವನ್ನು ಜೀವಂತ ಇಡಬೇಕು ಎನ್ನುವ ಮಾತನ್ನು ತಮಗೆ ಹೇಳುತ್ತೇನೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ : ಇದು ಅವಶ್ಯಕ ಕಾಣುವುದಿಲ್ಲ ಮಾನ್ಯ ಸಭೆಯ ಸದಸ್ಯರು ಇದ್ದಾರೆ. ನಮ್ಮ ಅಧಿಕಾರಿಗಳು ಇದ್ದಾರೆ ಮಂತ್ರಿಗಳು ಪ್ರವಾಸ ಮಾಡುವವರು ಇದ್ದಾರೆ. ಕಾರ್ಯಕ್ರಮಗಳನ್ನು ಕೈಗೊಂಡು ಮುಂದಿನ ಸಭೆ ಸೇರಿದಾಗ ನಮಗೆ ಕೆಲಸ ಅಸಮರ್ಪಕವಾಗಿದೆ ಎಂದು ಕಂಡು ಬಂದರೆ ಅದು ಆಗದಿದ್ದರೆ ಆಗ ಯೋಚನೆ ಮಾಡುವ ವಿಷಯ. ಇದು ಸೀಮಿತವಾದ ಕೆಲಸ ಮಾಡುವುದಕ್ಕೆ ಗೊತ್ತುಮಾಡಿದಂತ ಸಮಿತಿ ಇದನ್ನು ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ.

ಶ್ರೀ ವಿ. ಎನ್ ಪಾಟೀಲ್ : ಮಾನ್ಯ ಮುಖ್ಯ ಮಂತ್ರಿಗಳು ಒಂದು ಕ್ಲಾರಿಫಿಕೇಷನ್ ಕೊಡಬೇಕು ಫಸ್ಟ್ ಟರ್ಮ್ ಸೆಕೆಂಡ್ ಟರ್ಮ್ ಫೀಯನ್ನು ಮಾಫಿ ಮಾಡುವುದು ಪ್ರೈವೇಟ್ ಕಾಲೇಜುಗಳಿಗೂ ಅನ್ವಯಿಸುತ್ತದೆಯೋ ಎಂದು ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ : ಮೊದಲು ಇದ್ದ ಗೌರ್ನಮೆಂಟ್ ಆರ್ಡರ್‌ನಲ್ಲಿ ಬದಲಾವಣೆ ಆಗಿರುವುದು ಇಷ್ಟೇ ಸರ್ಟಿಫಿಕೇಟ್ ಕೊಡುವುದನ್ನು ಸುಲಭಮಾಡಿ ಹೊರಗಿನ ವಿಧ್ಯಾರ್ಥಿಗಳಿಗೂ ಕೂಡ ಅನ್ವಯಿಸುವ ಹಾಗೆ ಮಾಡಿರುವುದು ಎಷ್ಟೋ ಅಷ್ಟೇ,

SRI D. B. KALMANKAR : 30 Lakshs for Bijapur and Rs. 20 lakshs for Gulbarga District are famine relief works are given. My submission that almost all Taluks in Gulbaraga District are famine stricken areas. Therefore, will the Government consider that more funds are allottee to this Gulbarga District as the amount alloted is insufficient ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ : ಅವಶ್ಯಕ ಆದರೆ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ

ಶ್ರೀ ಪಿ ಎಂ. ಭಂಗಿ : ನಾನು ಒಂದು ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನೂಲು ಹಂಚುವ ಸಲುವಾಗಿ 20 ಲಕ್ಷರೂಪಾಯಿ ಸರಕಾರ ಇನ್‌ವೆಸ್ಟ್ ಮಾಡುತ್ತದೆ. ಎಕ್ಸ್‌ಮಿಲ್ ರೇಟುಗಳು ಎಕ್ಸೈಜ್ ಡ್ಯೂಟಿ, ಸೇಲ್ಸ್ ಟ್ಯಾಕ್ಸ್ ಮತ್ತು ಟ್ರಾನ್ಸ್‌ಪೋರ್ಟ್ ಚಾರ್ಜಸ್ ಎಲ್ಲಾ ಕೂಡಿಸಿ ಹಂಚುವುದಕ್ಕೆ ಪ್ರಾರಂಭವಾಗಿದೆ; ನಾನು ವಿನಂತಿ ಮಾಡುವುದು ಇಷ್ಟೆ. ಟ್ರಾನ್ಸ್‌ಪೋರ್ಟ್ ಚಾರ್ಜಸ್ ಸರ್ಕಾರ ವಹಿಸಿಕೊಳ್ಳಬೇಕು ಇಲ್ಲದೆ ಹೋದರೆ ಒಂದು ನೇ ಕಾರರಿಗೆ ಕಟ್ಟಿದಂತ ಅನುಕೂಲವನ್ನು ಕಿತ್ತುಕೊಂಡ ಹಾಗಾಗುತ್ತವೆ; ಅವರಿಗೆ ಪ್ರೋತ್ಸಾಹ ದೊರೆಯುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಟ್ರಾನ್ಸ್‌ಪೋರ್ಟ್ ಚಾರ್ಜಿನ ವಿನಾಯಿತಿ ಕೊಡುವುದನ್ನು ಆಲೋಚನೆ ಮಾಡುತ್ತೇವೆ.

ಶ್ರೀ ಎಸ್. ವೈ. ಪಾಟೀಲ್ : ಫ್ಯಾಮಿನ್ ಡಿಕ್ಲೇರ್ ಮಾಡುತ್ತೀರಾ?

ಅಧ್ಯಕ್ಷರು : ಮಾಡುವುದಿಲ್ಲ ಎಂದು ಹೇಳಿದರು.

ಶ್ರೀ ಪಿ.ಪಿ, ಹೆಗರೆ : ಈಗಾಗಲೇ ಸರಕಾರದವರು ಫ್ರಿ ಷಿಪ್ ಕೊಡಬೇಕು ಎಂದು ನಿರ್ಧರಿಸಿದ್ದಾರೆ. ಚಿಕ್ಕೋಡಿ ತಾಲ್ಲೂಕು ಅದರಲ್ಲಿ ಸೇರಿಸಿಲ್ಲ ಚೀಫ್ ಮಿನಿಷ್ಟರ ಮೀಟಿಂಗ್ ಕರೆದಾಗ ಇದನ್ನು ಅವರ ನಜರಿಗೆ ತಂದುಕೊಟ್ಟಿದೆ. ಅದಕ್ಕೆ ಅವರು ನೋಡುತ್ತೇನೆ ಎಂದು ಹೇಳಿದರು. ಆದ್ದರಿಂದ ಚಿಕ್ಕೋಡಿ ತಾಲ್ಲೂಕನ್ನು ಇದರಲ್ಲಿ ಸೇರ್ಪಡೆ ಮಾಡುವಂತೆ ಏರ್ಪಾಟು ಮಾಡಬೇಕು.

ಶ್ರೀ ವಿಶ್ವನಾಥರೆಡ್ಡಿ : ಮಾನ್ಯ ಮಂತ್ರಿಗಳು ಶ್ರೀ ಅರುಮುಗಂ ರವರ ರಿಪೋರ್ಟಿನಲ್ಲಿ ತಾಲ್ಲೋಕು ಮಟ್ಟದಲ್ಲಿ ಲೈಯೂಸನ್ ಆಫೀಸರ್ ಮಾಡಬೇಕು, ಡಿಸ್ಟ್ರಿಕ್ಟ್ ಮಟ್ಟದಲ್ಲಿ ಕಂಪ್ಲೈಂಟ್‌ಕಮಿಟಿ ಮಾಡಬೇಕು ಫ್ಯಾಮಿನ್ ಇದ್ದಂತಹ ಏರಿಯಾಕ್ಕೆ ಹೈಫವರ್ ಕಮಿಟಿ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಪ್ರತಿಯೊಂದು ಕೆಲಸಗಳಿಗೂ ಬೆಂಗಳೂರಿನ ಮುಖ ನೋಡಬೇಕು. 'ಆ ಬಗ್ಗೆ ನಾನು ಹೇಳುತ್ತೇನೆ ಎರಡನೆಯದು ಈಗಾಗಲೇ ತಮ್ಮ ಮತ್ತು ಮಾನ್ಯ ಪಿ.ಡಬ್ಲ್ಯು.ಡಿ. ಮಂತ್ರಿಗಳ ಕಾರ್ಯ ಅಲ್ಲಿ ಎಷ್ಟೋ ಆಗಿದೆ ಯಾವ ಯಾವ ತಿಂಗಳು ಎಷ್ಟು ಕಾರ್ಯವಾಯಿತು ಬಾಕಿ ಎಷ್ಟು ಕೆಲಸ ತೆಗೆದುಕೊಂಡಿದೆ ಎಂದು ಮಾಹಿತಿ ಸದಸ್ಯರಿಗೆ ಒದಗಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ ; ತಾಲ್ಲೂಕು ಮಟ್ಟದಲ್ಲಿ ಬೇರೇ ಸಮಿತಿಗಳಾಗಲಿ, ಅಥವಾ ಬೇರೆ ಹೈಫವರ್ ಕಮಿಟಿ ಅಂತಾದ್ದು ಅವಶ್ಯಕ ಎಂದು ನನಗನಿಸುವುದಿಲ್ಲ. ಈಗಾಗಲೇ ಶಾಸನ ಸಭಾ ಸದಸ್ಯರು ಇದ್ದಾರೆ, ತಾಲ್ಲೂಕ್ ಬೋರ್ಡ್ ಪ್ರಸಿಡೆಂಟ್ ಇದ್ದಾರೆ ಅವರನ್ನು ಒಳಗೊಂಡ ತಾಲ್ಲೂಕ್ ರಿಲೀಫ್ ಕಮಿಟಿ ಇವೆ ಅವು ಆಗಿಂದಾಗ್ಗೆ ಸಲಹೆ ಮಾಡುತ್ತವೆ. ನಮ್ಮ ಅಧಿಕಾರಿಗಳು ಅವರೊಡನೆ ಪೂರ್ಣವಾಗಿ ಸಹಕರಿಸಿ ಕೆಲಸ ಮಾಡುತ್ತಾ ಇದ್ದಾರೆ. ಇನ್ನು ಎಷ್ಟು ಆಗಬೇಕು, ಎಷ್ಟು ಕೆಲಸಗಳು ಬಾಕಿ ಇವೆ ಇಂತಿಂಥಾದ್ದು ಮಾಡಬೇಕು ಎಂಬುದನ್ನು ಮಾನ್ಯ ಸಭೆಯ ಸದಸ್ಯರು ಸರ್ಕಾರಕ್ಕೆ ತಿಳಿಸಿದರೆ ಅಂತಹ ಕ್ರಮಗಳನ್ನು ಜಾರಿಗೆ ತರುವುದಕ್ಕೆ ಅವಕಾಶವಿದೆ. ಜೊತೆಗೆ ಅಲ್ಲಿಂದ ಅಧಿಕಾರಿಗಳು ಇಲ್ಲಿಗೆ ಬಂದು ಹೋಗಬೇಕಾಗಿಲ್ಲ, ಟೆಲಿಫೋನ್ ಇದೆ ಟೆಲಿಫೋನ್ ಮೂಲಕ ಆಗ್ನೆ ತಗೆದುಕೊಂಡು ಕೆಲಸಮಾಡಬಹುದು. ಈಗ ಇರತಕ್ಕ ಕ್ರಮದಲ್ಲಿ ಅಸ್ತುಕಷ್ಟವಾಗುತ್ತದೆ ಎಂದು ನನಗನಿಸುವುದಿಲ್ಲ.

ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್ : ಸನ್ಮಾನ್ಯ ಅಧ್ಯಕ್ಷರೇ, ಬೆಳಿಗ್ಗೆ ಹೇಳಿದ್ದೇನೆ ವಿರೋಧ ಪಕ್ಷದ ನಾಯಕರು ಶ್ರೀ ಮಾನ್ಯ ಬಸವರಾಜ ಕಟ್ಟಿಮನಿ ಮೇಲೆ ಟೀಕೆ ಮಾಡಿದ್ದಾರೆ. ಇವೊತ್ತು ...

ಅಧ್ಯಕ್ಷರು : ಕ್ಷಾಮ ಪರಿಸ್ಥಿತಿ ವಿಚಾರ ಇನ್ನೂ ಮುಗಿದಿಲ್ಲ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳು ಯಾವ ರೀತಿ ಅಲ್ಲಿ ಕೆಲಸ ಕೊಟ್ಟಿದೆ ಎನ್ನುವುದನ್ನು ಹೇಳಿದ್ದಾರೆ. ಈಗ ಜೂನ್ ಜುಲೈ ತಿಂಗಳಲ್ಲಿ ಮಳೆಯಾಯಿತು ಎಂದು ಇಟ್ಟುಕೊಳ್ಳೋಣ, ಅನೇಕ ಜನರಿಗೆ ಆಗ ಬಿತ್ತುವುದಕ್ಕೆ ಬೀಜ ಇಲ್ಲ ಗೊಬ್ಬರ ಇರುವುದಿಲ್ಲ ಕೇಂದ್ರ ಸರ್ಕಾರದವರದ್ದೂ ಕೂಡ ಎಮರ್ಜನ್ಸಿ ಪ್ರೋಗ್ರಾಂ ಇದೆ, ಅವರ ಹತ್ತಿರ ಏನು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಇದೆ, ಅದರ ಪ್ರಕಾರ ಮಳೆ ಬಂದಾಗ ಬೀಜ ಬೇಕು, ಗೊಬ್ಬರ ಬೇಕು. ಸರ್ಕಾರ ಇದರ ಬಗ್ಗೆ ಎಲ್ಲೆಲ್ಲಿ ಕ್ರಮ ತೆಗೆದು ಕೊಳ್ಳುತ್ತದೆ ಎನ್ನುವುದನ್ನು ತಿಳಿಸಬೇಕು?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಗೊಬ್ಬರ ಒದಗಿಸುವ ಬಗ್ಗೆ ಪ್ರತಿಯೊಂದು ಡಿವಿಜನ್‌ಗೂ, ಗುಲ್ಬರ್ಗ ಡಿವಿಜನ್‌ಗೂ, ಬೆಳಗಾಂ ಡಿವಿಜನ್‌ಗೂ ಮಾತ್ರವಲ್ಲ ಉಳಿದ ಎಲ್ಲಾ ಡಿವಿಜನಿಗೂ ಕೊಟ್ಟಿದೆ. ಅದನ್ನು ತೀರಾ ಅವಶ್ಯಕವಾಗಿ ಹೆಚ್ಚು ಮಾಡಬೇಕು ಎಂದರೆ ಹೆಚ್ಚು ಮಾಡುವುದಕ್ಕೆ ಸರ್ಕಾರ ಸಿದ್ಧವಾಗಿದೆ.

ಶ್ರೀ ಕೆ.ಬಿ. ದೇಸಾಯಿ.—ನಮ್ಮ ರಾಜ್ಯದಲ್ಲಿ ಕ್ಷಾಮ ಇದ್ದಂಥ ಪ್ರದೇಶದಲ್ಲಿ ಸಾಯಿಲ್‌ಕನ್ಸರ್ವೇಷನ್ ವರ್ಕ್ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟರ ಮಟ್ಟಿಗೆ ಆಗಿದೆ ಎಲ್ಲೆಲ್ಲಿ ಕಾರ್ಯಕ್ರಮಗಳು ಮುಗಿಯುತ್ತಾ ಬಂದಿವೆ, ಎಲ್ಲೆಲ್ಲಿ ಶುರು ಆಗಿದೆ, ಸಿಬಂದಿ ಎಷ್ಟೆಷ್ಟು ಎಲ್ಲೆಲ್ಲಿ ಇದೆ ಎನ್ನುವ ವಿವರವನ್ನು ಹೇಳಬೇಕು ಎಂದು ಮಾನ್ಯ ಮಂತ್ರಿಗಳಲ್ಲಿ ಬೇಡುತ್ತೇನೆ.

ಶ್ರೀ ಎನ್.ಹುಚ್ಚಮಾಸ್ತಿಗೌಡ.—ಸಾಯಿಲ್ ಕನ್ಸರ್ವೇಷನ್‌ನಲ್ಲಿ ಮೊದಲು ಗುಲ್ಬರ್ಗ, ಬಿಜಾಪುರ ಭಾಗದಲ್ಲಿ ಬಹಳ ಕಡಿಮೆ ಸಂಖ್ಯೆ ಇತ್ತು. ಗುಲ್ಬರ್ಗದಲ್ಲಿ ೨೨೩ ಜನ ಅಸಿಸ್ಟೆಂಟ್ಸ್ ಇದ್ದಾರೆ, ಸಾಯಿಲ್ ಕನ್ಸರ್ವೇಷನ್ ಒಂದರಲ್ಲೇ ಸುಮಾರು ೫೫,೩೮೫ ಜನ ಕೆಲಸ ಮಾಡುತ್ತಾ ಇದ್ದಾರೆ. ಈಗಾಗಲೆ ೬೧ ಲಕ್ಷ ಮೆಲ್ಪಟ್ಟು ಹಣ ಖರ್ಚಾಗಿದೆ. ಬಿಜಾಪುರದಲ್ಲಿ ೧೩೬ ಜನ ಫೀಲ್ಡ್ ಅಸಿಸ್ಟೆಂಟ್ಸ್ ಇದ್ದಾರೆ,೨೧ ೩೬೬ ಜನ ಕೆಲಸ ಮಾಡುತ್ತಾ ಇದ್ದಾರೆ. ಸುಮಾರು ೩೨ಲಕ್ಷದ ಮೇಲೆ ಹಣ ಖರ್ಚಾಗಿದೆ ಬೀದರ್‌ನಲ್ಲಿ ೬೮ಜನ ಫೀಲ್ಡ್ ಅಸಿಸ್ಟೆಂಟ್ ಇದ್ದಾರೆ, ೧೨ ಸಾವಿರಕ್ಕಿಂತ ಹೆಚ್ಚು ಜನ ಕೆಲಸ ಮಾಡುತ್ತಾ ಇದ್ದಾರೆ. ಇತರೆ ಜಿಲ್ಲೆಗಳ ವಿವರ ಇದೆ ಅದನ್ನು ಹೇಳಬೇಕಾದ ಅವಶ್ಯಕ ಇಲ್ಲ ಎಂದು ಭಾವಿಸುತ್ತೇನೆ. ರಾಯಚೂರು ಜಿಲ್ಲೆಯಲ್ಲಿ ೯೯ಜನ ಫೀಲ್ಡ್ ಅಸಿಸ್ಟೆಂಟ್ಸ್ ಇದ್ದಾರೆ, ೧೪,೧೬೦ ಜನ ಕೂಲಿ ಕೆಲಸ ಮಾಡುತ್ತಾ ಇದ್ದಾರೆ.

ಶ್ರೀ ಕೆ.ಎಂ.ನಾಗಣ್ಣ.—ಶ್ರೀಮಾನ್ ಆರ್ಮುಗಂ ಅವರು ತಮ್ಮ ರಿಪೋರ್ಟಿನಲ್ಲಿ ನೇಕಾರರ ಪ್ರಶ್ನೆ ಬಹಳ ಗಂಭೀರವಾಗಿದೆ ಎಂದು ಹೇಳಿದ್ದಾರೆ, ಮಾನ್ಯ ಸದಸ್ಯರಾದ ಭಂಗಿಯವರು ಇವರ ಬಗ್ಗೆ ಹೇಳುತ್ತಾ ಇದ್ದಾರೆ. ಈ ಜನಗಳ ಬಗ್ಗೆ ಸರ್ಕಾರಕ್ಕೆ ನಾನು ಒಂದು ಸಲಹೆ ಕೊಡುತ್ತೇನೆ; ಸರಿಯೋ ತಪ್ಪೋ ಎನ್ನುವುದನ್ನು ತಾವೇ ವಿವೇಚನೆ ಮಾಡಿ ನೇಕಾರರು ತಯಾರಿಸಿದ ೬೦–೮೦ ಕೌಂಟ್ ಸರಕನ್ನು ಕೋಆಪರೇಟೀವ್ ಸೊಸೈಟಿಗಳ ಮುಖಾಂತರ ಕೊಂಡುಕೊಳ್ಳುವುದಕ್ಕೆ ಎಷ್ಟು ಹಣ ಖರ್ಚು ಬರುತ್ತದೆ ಎಷ್ಟು ಅಸಲು ಆಗುತ್ತದೆ, ಅವರಿಗೆ ಲಾಭ ಆಗಿ ಅವರ ಜೀವನಕ್ಕೆ ಎಷ್ಟು ಬೇಕೋ ಅಷ್ಟು ಕಡಿತ ಮಾಡಿ ಉಳಿದ ಹಣಕ್ಕೆ ಕೋಆಪರೇಟೀವ್ ಸೊಸೈಟಿಯು ಮುಖಾಂತರ ಕೊಂಡು ಕೊಂಡು ಇಟ್ಟುಕೊಳ್ಳಬೇಕು. ವರ್ಷಕ್ಕೊಮ್ಮೆ ಏಪ್ರಿಲ್ ತಿಂಗಳಲ್ಲಿ ಉಗಾದಿ ಹಬ್ಬ ಬರುತ್ತದೆ ಮದ್ರಾಸ್‌ನಲ್ಲಿ ಮೊದಲ ಎರಡು ತಿಂಗಳು ಆಮೇಲೆ ಮೂರು ತಿಂಗಳು ಕೋಆಪರೇಟೀವ್ ಸೊಸೈಟಿಯಿಂದ ರಿಬೇಟ್ ಕೊಡುತ್ತಾರೆ. ಇದನ್ನು ಇಲ್ಲಿಯೂ ಸೊಸೈಟಿಯವರ ಕೊಟು ಸಬ್ಸಿಡೈಸ್ ಮಾಡುತ್ತೀರಾ? ಅದೇ ರೀತಿ ಕೋಆಪರೇಟೀವ್ ಸೊಸೈಟಿಗಳು ಕೊಂಡ ಮಾಲುಗಳಿಗೆ ೧೦–೨೦ಪರ್ಸೆಂಟ್ ರಿಬೇಟ್ ಕೊಡುವುದರ ಮೂಲಕ ಸರಕು ಖರ್ಚಾಗುತದೆ, ಕೋಆಪರೇಟೀವ್ ಸೊಸೈಟಿಗಳು ಮದ್ರಾಸ್ ರಾಜ್ಯದಲ್ಲಿ ೧೦–೨೫ ಪರ್ಸೆಂಟ್ ಲುಕ್ಸಾನು ಹೊತ್ತ ಹಾಗೆ ಇಲ್ಲೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರಾ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಈ ಸಲಹೆಯನ್ನು ಸಹಾನುಭೂತಿಯಿಂದ ಆದಷ್ಟು ಬೇಗ ಪರಿಶೀಲನೆ ಮಾಡುತ್ತೇನೆ.

ಶ್ರೀ ಎಫ್.ಎಸ್.ತಾವರೆ —ಮಾನವೀಯತೆಯ ದೃಷ್ಟಿಯಿಂದ ನೆರವು ಕೊಡಬೇಕು ಎಂದು ಹಾವೇರಿ ತಾಲ್ಲೂಕಿಗೆ ಗುಲ್ಬರ್ಗದ ರೈತರು ೧೦ ಸಾವಿರ ದನಗಳನ್ನು ಕಳುಹಿಸಿಕೊಟ್ಟರು ಒಂದೊಂದು ಫ್ಯಾಮಿಲಿಗೆ ಎರಡು ದನಗಳನ್ನು ಕಳುಹಿಸಿಕೊಡಿ ಎಂದು ಸರ್ಕಾರಕ್ಕೆ ಬರೆದು ಒಂದು ತಿಂಗಳಾಯಿತು. ಸರ್ಕಾರ ಇದರ ಬಗ್ಗೆ ನಿರ್ಣಯ ಮಾಡಿ ಹಾವೇರಿಗೆ ೧೦ ಸಾವಿರ ದನಗಳನ್ನು ಕಳುಹಿಸುವ ವಿಚಾರದ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತೀರಾ?

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಗುಲ್ಬರ್ಗ,ಬೀದರ್ ಮತ್ತು ಬಿಜಾಪುರ ಜಿಲ್ಲೆಯಲ್ಲಿ ಡೆಪ್ಯುಟಿ ಕಮಿಷನ್ ರವರಿಗೆ ತಿಳಿಸಿ ಜಾಹಿರಾತು ಮಾಡಿಸಿ ಯಾರು ಯಾರು ದನಗಳನ್ನು ಕಳುಹಿಸಿಕೊಡುವುದಕ್ಕೆ ಸಿದ್ಧರಾಗಿದ್ದಾರೆ ಅಂತಹವರು ಸಿದ್ಧವಾಗಿದ್ದರೆ ದನಗಳನ್ನು ಕಳುಹಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ವಿ. ಎನ್. ಪಾಟೀಲ್—ಫಾಡರ್ ಅನ್ನು ಗುಲ್ಬರ್ಗ ಬೀದರ್ ಜಿಲ್ಲೆಗೆ ಫ್ರೀ ಟ್ರಾನ್ಸ್‌ಪೋರ್ಟೇಷನ್ನಲ್ಲಿ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಟ್ರಾನ್ಸ್‌ಪೋರ್ಟೇಷನ್ ಅನ್ನು ಸರ್ಕಾರ ವಹಿಸಿಕೊಳ್ಳುತ್ತದೆ. ಮಾನ್ಯ ಸದಸ್ಯರು ಕೇಳುತ್ತಾ ಇರುವ ಪ್ರಶ್ನೆ, ಅದನ್ನು ತೀರಾ ಉಚಿತವಾಗಿ ಒದಗಿಸಬೇಕು ಎಂದು ಇರಬಹುದು ಅದನ್ನೂ ಕೂಡ ಪರಿಶೀಲನೆ ಮಾಡುತ್ತೇವೆಂದು ಹೇಳಿದೆ.

ಶ್ರೀ ಕೆ. ಪ್ರಭಾಕರ್.—ಶ್ರೀಮಾನ್ ಆರ್ಮುಗಂ ಅವರ ವರದಿಯ ೮ ನೇ ಪುಟದಲ್ಲಿ ಕೊಟ್ಟಿರತಕ್ಕ ಚಿತ್ರವನ್ನು ನೋಡಿದರೆ, ಅತಿಯಾಗಿ ವೀಕರ್ ಸೆಕ್ಷನ್ಸ್ ಷೆಡ್ಯೂಲ್ ಕ್ಯಾಸ್ಟ್, ಷಡ್ಯೂಲ್ ಟ್ರೈಬ್ಸ್ ಬಡವರ ಏನು ಇದ್ದಾರೆ ಅವರನ್ನು ಸಂಪೂರ್ಣವಾಗಿ ಅದಿಮಿ ಇಟ್ಟಿದ್ದಾರೆ ಎನ್ನುವುದನ್ನು ನೈಜವಾಗಿ ತಿಳಿಸಿದಾರೆ. ಕುಡಿಯುವ ನೀರಿನ ಕಷ್ಟ, ಸೆಡಿಮೆಂಟ ಗ್ರೌಂಡ್ಸ್ ನೀರು ಸಿಕ್ಕುವುದು ಕಷ್ಟ ಎಂದು ಸ್ಪಷವಾಗಿ ಹೇಳಿದ್ದಾರೆ. ಸಂಬಂಧಪಟ್ಟ ಸೋಷಿಯಲ್ ವೆಲ್‌ಫೇರ್ ಮತ್ತು ಡೆವಲಪ್‌ಮೆಂಟ್ ಇಲಾಖೆಯವರು ನಿರುತ್ಸಾಹಿಗಳಾಗಿದ್ದಾರೆ ಎಂದು ತಿಳಿಸಿದ್ದಾರೆ. ಅದಕ್ಕಾಗಿ ನಾನು ಸಲಹೆ ಮಾಡುತ್ತೇನೆ ಡಿವಿಷನಲ್ ಕಮಿಷನರ್ ಅವರನ್ನು ಚೇರ್ಮನ್ ಆಗಿಟ್ಟು, ಒಂದು ಕೋಆರ್ಡಿನೇಷನ್ ಕಮಿಟಿ ಮಾಡಿ, ಸಂಬಂಧಪಟ್ಟ ಡಿಸ್ಟ್ರಿಕ್ಟ್ ಆಫೀಸರ್ ಅನ್ನು ಇನ್ಸ್‌ಪೆಕ್ಟರ್ ಆಗಿಟ್ಟು ಸರ್ಕಾರದವರು ಕೂಡಲೇ ವ್ಯವಸ್ಥೆ ಮಾಡಬೇಕು ಎಂದು ಒಂದು ಸೂಚನೆಯನ್ನು ಮಾಡುತ್ತಾ ಇದ್ದೇನೆ. ಅದಕ್ಕೆ ಉತ್ತರವನ್ನು ಸಂಬಂಧಪಟ್ಟ ಇಲಾಖೆಯವರು ಹೇಳಿದರೆ ಸಂತೋಷ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕ್ಷಾಮಪ್ರದೇಶದಲ್ಲಿ ಇರತಕ್ಕವರು ಅಂದು ದುಡಿದು ಶರೀರ ಶ್ರಮದಿಂದ ಜೀವನ ಮಾಡತಕ್ಕವರು ಬಹಳ ಅಪರೂಪ, ತಮ್ಮ ಜಮಾನಿನಿಂದ ಜೀವನ ಮಾಡತಕ್ಕವರು ಬಹಳ ಕಡಿಮೆ. ಹೆಚ್ಚಿನ ಜನಕ್ಕೆ ಕೆಲಸ ಸಿಕ್ಕಿದೆ, ಇನ್ನು ಯಾರಿಗೆ ಸಿಕ್ಕಿಲ್ಲ ಅವರಿಗೆ ಒದಗಿಸಿಕೊಡಬೇಕು. ದುಡಿಯುವುದರ ಜೊತೆಗೆ ಅವರಿಗೆ ಕೆಲಸ ಒದಗಿಸುವ ವ್ಯವಸ್ಥೆಯಾಗಿದೆ ಕುಡಿಯುವ ನೀರಿನ ವ್ಯವಸ್ಥೆಗೆ, ಬೋರ್‌ವೆಲ್ಸ್‌ಗಳನ್ನು ತೆಗೆದರೆ ತನ್ನಷ್ಟಕ್ಕೆ ತಾನೇ ಈ ಸಮಸ್ಯೆ ಬಗೆಹರಿಯುತ್ತದೆ. ಅಷ್ಟೇ ಅಲ್ಲ ಹರಿಜನರ ಮನೆಗಳು ೧೦ ಇರಲಿ, ೨೦ ಇರಲಿ ಎಲ್ಲಿ ತೋರಿದರೆ ಆಗಿದೆಯೋ ಅಲ್ಲಿ ಬಾವಿ ಮಾಡಬೇಕು ಎಂದು ಡೆಪ್ಯೂಟಿ ಕಮಿಷನರ್‌ವರಿಗೆ ಸ್ಪಷ್ಟವಾಗಿ ತಿಳಿಸಿ ಬಂದಿದ್ದೇನೆ.

ಶ್ರೀ ಕೆ ಎಚ್. ಹನುಮೇಗೌಡ.—ಕ್ಷಾಮ ಪ್ರದೇಶಗಳಲ್ಲಿ ಭಾವಿ ತೆಗೆದಿದ್ದಾರೆ ನೀರು ಬಂದಿದೆ, ಮೆಷಿನ್ಸ್ ಫಿಕ್ಸ್ ಮಾಡಿದ್ದಾರೆ, ಮೈಸೂರು ಎಲೆಕ್ಟ್ರಿಸಿಟಿ ಬೋರ್ಡಿನವರು ಅದರ ಎಸ್ಟಿಮೇಟನ್ನು ತಡೆಹಿಡಿದಿದ್ದಾರೆ. ಬಾವಿ ರೆಡಿ ಆಯಿತು, ನೀರು ಇದೆ, ಪಂಪ್ ಸೆಟ್ ಹಾಕಿರುತ್ತಾರೆ ಅಂಥ ಬಾವಿಗಳಿಗೆ ಕ್ಷಾಮ ಪರಿಹಾರ ಸಲುವಾಗಿ ಎಲೆಕ್ಟ್ರಿಕಲ್ ಲೈನ್ ಅನ್ನು ಎಳೆದುಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಚ್. ಎಂ ಚೆನ್ನಬಸಪ್ಪ.—ಮಾನ್ಯ ಸದಸ್ಯರು ವಿಷಯಗಳನ್ನು ಅರಿಯದೆ ಮಾತನಾಡಿದರೆ ಏನು ಹೇಳಲಿ? ೧೨೫೦ ರೂಪಾಯಿಗೆ ರಿಲ್ಯಾಕ್ಸ್ ಮಾಡಿ ಎಷ್ಟೋ ವರ್ಷ ಆಯಿತು It has been enhanced to about 2000 or 1800 subject to correction in those areas. Even in other Areas it was relaxed, and if necessary further relaxation, in view of the scarcity will be examined.

1-30 P. M.

ಶ್ರೀ ಎಂ. ಎಸ್. ಕೃಷ್ಣನ್.—ವಿದ್ಯಾರ್ಥಿಗಳು ಫೀಜು ಮಾಫಿ ಮಾಡಬೇಕೆಂದು ಕೇಳುತ್ತಿದ್ದಾರೆ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಅವರಿಗೆ ರಿಲೀಫ್ ಕೊಡಲು ಪ್ರಯತ್ನಮಾಡುವಿರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಆಲೋಚನೆ ಮಾಡುತ್ತೇವೆ.

Businsess of the House

ಶ್ರೀ ಎಚ್. ಡಿ. ದೇವೇಗೌಡ.—ಈಗ ಒಂದೂವರೆ ಗಂಟೆಯಾಗಿದೆ, ಇನ್ನೂ ಅಜೆಂಡಾದಲ್ಲಿ ಕೆಲವು ಕಾರ್ಯಕ್ರಮಗಳು ಮುಖ್ಯವಾದವು ಇವೆ, ಮಧ್ಯಾಹ್ನ ೩ ಗಂಟೆಯಿಂದ ೫ ಗಂಟೆವರೆಗೆ ಕುಳಿತು ಅವುಗಳನ್ನು ತೆಗೆದುಕೊಳ್ಳೋಣ.